

सत्यमेव जयते

ಶಿಕ್ಷಣ ಸಚಿವಾಲಯ

MINISTRY OF
**EDUCATION**

# ಶಿಕ್ಷಕರಿಗಾಗಿ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು

## (ನ್ಯಾಷನಲ್ ಪ್ರೊಫೆಷನಲ್ ಸ್ಟ್ಯಾಂಡರ್ಡ್ಸ್ ಫಾರ್ ಟೀಚರ್ಸ್- ಎನ್.ಪಿ.ಎಸ್.ಟಿ)

**Kannada-ಕನ್ನಡ**

*ಎನ್.ಪಿ.ಎಸ್.ಟಿ ಮಾರ್ಗದರ್ಶಿ 2023*

## ಪ್ಯಾರ 5.20, ಎನ್.ಇ.ಪಿ 2020

"ಶಿಕ್ಷಕರಿಗಾಗಿ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ (ಎನ್.ಪಿ.ಎಸ್.ಟಿ) ಸಾಮಾನ್ಯ ಮಾರ್ಗದರ್ಶಿ ಸೂತ್ರಗಳನ್ನು 2020ರಲ್ಲಿ ಅಭಿವೃದ್ಧಿಪಡಿಸಲಾಗುವುದು. ಇದನ್ನು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿಯ (ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಷನ್- ಎನ್.ಸಿ.ಟಿ.ಇ) ಮರುರಚಿತ ನೂತನ ಸ್ವರೂಪವಾದ ವೃತ್ತಿಪರ ಮಾನದಂಡಗಳ ನಿಗದಿ ಸಂಸ್ಥೆಯು (ಪ್ರೊಫೆಷನಲ್ ಸ್ಟಾಂಡರ್ಡ್ ಸೆಟ್ಟಿಂಗ್ ಬಾಡಿ- ಪಿ.ಎಸ್.ಎಸ್.ಬಿ) ಸಾಮಾನ್ಯ ಶಿಕ್ಷಣ ಮಂಡಳಿ (ಜನಲರಲ್ ಎಜುಕೇಷನ್ ಕೌನ್ಸಿಸ್- ಜಿ.ಇ.ಸಿ) ಅಡಿಯಲ್ಲಿ ರೂಪಿಸಿದೆ. ಇದನ್ನು ಎನ್.ಸಿ.ಇ.ಆರ್.ಟಿ, ಎಸ್.ಸಿ.ಇ.ಆರ್.ಟಿ.ಎಸ್, ವಿವಿಧ ಹಂತಗಳು ಹಾಗೂ ಪ್ರದೇಶಗಳಲ್ಲಿನ ಶಿಕ್ಷಕರ ಜೊತೆಗೆ ಸಮಾಲೋಚನೆ ನಡೆಸಿ ರೂಪಿಸಿರುವುದಲ್ಲದೆ, ಈ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ಸಿದ್ಧಪಡಿಸುವ ಹಾಗೂ ಅಭಿವೃದ್ಧಿಪಡಿಸುವ ಪರಿಣಿತ ಸಂಸ್ಥೆಗಳು, ವೃತ್ತಿಪರ ಶಿಕ್ಷಣ ಕ್ಷೇತ್ರದ ಪರಿಣತ ಸಂಸ್ಥೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆಗೂ ಸಮನ್ವಯ ಸಾಧಿಸಿದೆ. ವಿವಿಧ ಮಟ್ಟಗಳ ಪರಿಣತಿ/ವಿವಿಧ ಹಂತಗಳಲ್ಲಿ ಶಿಕ್ಷಕರ ಪಾತ್ರ ಹಾಗೂ ಆ ಹಂತದಲ್ಲಿ ಅವರಲ್ಲಿರಬೇಕಾದ ಸಾಮರ್ಥ್ಯದ ಕುರಿತ ನಿರೀಕ್ಷೆಗಳನ್ನು ಈ ಮಾನದಂಡಗಳು ಒಳಗೊಂಡಿವೆ. ಹಾಗೆಯೇ ನಿಯಮಿತವಾಗಿ ನಡೆಸುವ ಪ್ರತಿ ಹಂತದ ಕಾರ್ಯಕ್ಷಮತೆ ಮೌಲ್ಯಮಾಪನಕ್ಕೆ ಅಗತ್ಯವಾದ ಮಾನದಂಡಗಳನ್ನು ಕೂಡ ಇದು ಒಳಗೊಂಡಿದೆ. ಇನ್ನು ಇದು ಎನ್.ಪಿ.ಎಸ್.ಟಿ ಶಿಕ್ಷಕರ ಸೇವಾಪೂರ್ವ ಶಿಕ್ಷಣ ಕಾರ್ಯಕ್ರಮದ ವಿನ್ಯಾಸದ ಬಗ್ಗೆಯೂ ಮಾಹಿತಿಯನ್ನು ಒಳಗೊಂಡಿದೆ. ಇದನ್ನು ರಾಜ್ಯಗಳು ಕೂಡ ಅಳವಡಿಸಿಕೊಳ್ಳಬಹುದಾಗಿದ್ದು, ಸೇವಾ ಅವಧಿ, ವೃತ್ತಿಪರ ಅಭಿವೃದ್ಧಿಗೆ ಪ್ರಯತ್ನಗಳು, ವೇತನ ಹೆಚ್ಚಳಗಳು, ಪದೋನ್ನತಿಗಳು ಹಾಗೂ ಇತರ ಮನ್ನಣೆಗಳು ಸೇರಿದಂತೆ ಅಧ್ಯಾಪನಾ ವೃತ್ತಿ ನಿರ್ವಹಣೆಯ ಎಲ್ಲ ಅಂಶಗಳನ್ನು ಇದು ನಿರ್ಧರಿಸುತ್ತದೆ. ಇದರಡಿಯಲ್ಲಿ ಸೇವೆಯ ಅವಧಿ ಅಥವಾ ಹಿರಿತನದ ಆಧಾರದ ಮೇಲೆ ಪದೋನ್ನತಿ ಹಾಗೂ ವೇತನ ಹೆಚ್ಚಳ ಮಾಡಲಾಗುವುದಿಲ್ಲ. ಬದಲಿಗೆ ಮೌಲ್ಯಮಾಪನಗಳ ಆಧಾರಿತವಾಗಿ ನಡೆಯಲಿದೆ. ವೃತ್ತಿಪರ ಮಾನದಂಡಗಳನ್ನು 2030ರಲ್ಲಿ ಪರಿಶೀಲಿಸಲಾಗುವುದು ಹಾಗೂ ಪರಿಷ್ಕರಿಸಲಾಗುವುದು. ಇದಾದ ಬಳಿಕ ಪ್ರತಿ 10 ವರ್ಷಗಳಿಗೊಮ್ಮೆ ವ್ಯವಸ್ಥೆಯ ಫಲದಾಯಕತ್ವವನ್ನು ಕಟ್ಟುನಿಟ್ಟಿನ ಪ್ರಾಯೋಗಿಕ ವಿಶ್ಲೇಷಣೆಗೊಳಪಡಿಸಿ, ಅದರ ಆಧಾರದಡಿ ಪರಿಷ್ಕರಿಸಲಾಗುವುದು"

“ಯಾವ ಶಾಲೆಯಲ್ಲಿ ಪ್ರತಿ ವಿದ್ಯಾರ್ಥಿ ಆ ಶಾಲೆಯಲ್ಲಿ ಉತ್ತಮ ಸ್ವಾಗತ ಮತ್ತು ಕಾಳಜಿಯ ಅನುಭವ ಪಡೆಯುತ್ತಾನೋ ಅದೊಂದು ಉತ್ತಮ ಶಿಕ್ಷಣ ಸಂಸ್ಥೆಯಾಗಿರುತ್ತದೆ. ಅಲ್ಲಿ ಸುರಕ್ಷಿತ ಹಾಗೂ ಉತ್ತೇಜನಕಾರಿ ಪರಿಸರವಿರುತ್ತದೆ. ಅಲ್ಲಿ ಅನೇಕ ವಿಧದ ಕಲಿಕಾ ಅನುಭವಗಳನ್ನು ನೀಡಲಾಗುತ್ತದೆ. ಇನ್ನು ಅಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಕಲಿಕೆಗೆ ಉತ್ತಮವಾದ ಭೌತಿಕ ಮೂಲಸೌಕರ್ಯ ಹಾಗೂ ಅನುಕೂಲಕರವಾದ ಸೂಕ್ತ ಸಂಪನ್ಮೂಲಗಳು ಲಭ್ಯವಿರುತ್ತವೆ. ಈ ಎಲ್ಲ ಗುಣಲಕ್ಷಣಗಳನ್ನು ಹೊಂದಿರುವುದು ಪ್ರತಿ ಶೈಕ್ಷಣಿಕ ಸಂಸ್ಥೆಯ ಗುರಿಯಾಗಿರಬೇಕು. ಇದೇ ವೇಳೆ, ವಿವಿಧ ಸಂಸ್ಥೆಗಳು ಹಾಗೂ ಶಿಕ್ಷಣದ ಎಲ್ಲ ಹಂತಗಳಲ್ಲಿ ಅಪರಿಮಿತ ಸಮನ್ವಯ ಹಾಗೂ ಹೊಂದಾಣಿಕೆ ಇರಬೇಕು."

“A good education institution is one in which every student feels welcomed and cared for, where a safe and stimulating learning environment exists, where a wide range of learning experiences are offered, and where good physical infrastructure and appropriate resources conducive to learning are available to all students. Attaining these qualities must be the goal of every educational institution. However, at the same time, there must also be seamless integration and coordination across institutions and across all stages of education”.

**Dharmendra Pradhan**
Hon'ble Minister for Education;
Skill Development and
Entrepreneurship
Government of India
Shastri Bhawan
New Delhi-110001

सत्यमेव जयते

**ಧರ್ಮೇಂದ್ರ ಪ್ರಧಾನ್**
ಮಾನ್ಯ ಶಿಕ್ಷಣ,
ಕೌಶಲ್ಯಾಭಿವೃದ್ಧಿ ಹಾಗೂ
ಉದ್ಯಮಶೀಲತೆ ಸಚಿವರು,
ಭಾರತ ಸರ್ಕಾರ
ಶಾಸ್ತ್ರಿ ಭವನ್, ನವದೆಹಲಿ -110001



# ಸಂದೇಶ

ದೇಶದ ಶೈಕ್ಷಣಿಕ ಪಥ ಉತ್ಕೃಷ್ಟತೆಯ ಕಡೆಗೆ ಸಾಗುವಂತೆ ಮಾಡುವಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಮಾರ್ಗದರ್ಶಕನಂತೆ ಕಾರ್ಯನಿರ್ವಹಿಸಲಿದೆ. ಮುಂದಾಲೋಚನೆಯುಳ್ಳ ದೃಷ್ಟಿಕೋನದೊಂದಿಗೆ ಶಿಕ್ಷಕರ ಶಿಕ್ಷಣ ವ್ಯವಸ್ಥೆಗೆ ಹೊಸ ಮಾರ್ಗ ತೋರಲಿದೆ. ಇದು ಜ್ಞಾನ ಹಂಚಿಕೆಯನ್ನು ಮಾತ್ರವಲ್ಲ, ಬದಲಿಗೆ 21ನೇ ಶತಮಾನದ ಸವಾಲುಗಳು ಹಾಗೂ ಅವಕಾಶಗಳಿಗೆ ಶಿಕ್ಷಕರನ್ನು ಅಣಿಗೊಳಿಸಲು ಅತ್ಯಗತ್ಯವಾದ ಕಲಿಕೆಯ ಉತ್ಸಾಹ, ತಾರ್ಕಿಕ ಚಿಂತನೆ ಹಾಗೂ ಸೃಜನಾತ್ಮಕ ಗುಣಗಳನ್ನು ಬೆಳೆಸುತ್ತದೆ.

ಭವಿಷ್ಯದ ಜನಾಂಗದ ಬುದ್ಧಿಮತ್ತೆಯನ್ನು ರೂಪಿಸುವಲ್ಲಿ ಶಿಕ್ಷಕರು ನಿರ್ಣಾಯಕ ಪಾತ್ರ ವಹಿಸುತ್ತಾರೆ ಎಂಬುದನ್ನು ಒಪ್ಪುವ ಜೊತೆಗೆ ಅಗತ್ಯ ಸಾಧನಗಳು ಹಾಗೂ ಜ್ಞಾನವನ್ನು ಶಿಕ್ಷಕರು ಹೊಂದಿರುವುದು ಕೂಡ ಮುಖ್ಯ ಎಂಬುದನ್ನು ಎನ್.ಇ.ಪಿ ಗುರುತಿಸುತ್ತದೆ. ಪರಿಣಾಮಕಾರಿ ಬೋಧನಾ ಅಭ್ಯಾಸಗಳಿಗೆ ಸಂಬಂಧಿಸಿ ನಿರೀಕ್ಷೆಗಳು ಹಾಗೂ ಮಾರ್ಗಸೂಚಿಗಳನ್ನು ನಿರೂಪಿಸುವ ಮೂಲಕ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸಲು ಶಿಕ್ಷಕರಿಗೆ ವೃತ್ತಿಪರ ಮಾನದಂಡಗಳು ಅಗತ್ಯ. ಶಿಕ್ಷಕರಲ್ಲಿ ಕೌಶಲಗಳು, ಜ್ಞಾನ ಹಾಗೂ ಸಾಮರ್ಥ್ಯವನ್ನು ರೂಪಿಸುವಲ್ಲಿ ಈ ಮಾನದಂಡಗಳು ನಿರ್ಣಾಯಕ ಪಾತ್ರ ವಹಿಸುತ್ತವೆ.

ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿಯು (ಎನ್.ಸಿ.ಟಿ.ಇ) ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಯೋಜನೆ (ನ್ಯಾಷನಲ್ ಮಿಷನ್ ಫಾರ್ ಮೆಂಟರಿಂಗ್-ಎನ್.ಎಮ್.ಎಮ್) ಕುರಿತು ನೀಲಿಪುಸ್ತಕ (ಬ್ಲೂಬುಕ್) ವನ್ನು ಅಭಿವೃದ್ಧಿಪಡಿಸಿದೆ. ಇದು ಕೈಪಿಡಿಗಿಂತ ಹೆಚ್ಚಾಗಿ ಸಮಗ್ರ ದಾಖಲೆಯಾಗಿದ್ದು, ಉತ್ಕೃಷ್ಟ ಮಾರ್ಗಸೂಚಿಯಾಗಿದ್ದು, ವೃತ್ತಿಜೀವನದ ವಿವಿಧ ಹಂತಗಳಲ್ಲಿ ಹಾಗೂ ವಿವಿಧ ಪರಿಣತಿ ಮಟ್ಟಗಳಲ್ಲಿ ಶಿಕ್ಷಕರಿಗೆ ಸಂಬಂಧಿಸಿದ ನಿರೀಕ್ಷಿತ ಜವಾಬ್ದಾರಿಗಳು ಹಾಗೂ ಸಾಮರ್ಥ್ಯಗಳನ್ನು ಇದು ಸ್ಪಷ್ಟಪಡಿಸುತ್ತದೆ. ಇದು ವಿದ್ಯಾರ್ಥಿಗಳಿಗೆ ಅಗತ್ಯವಿರುವ 21ನೇ ಶತಮಾನದ ಕೌಶಲಗಳೊಂದಿಗೆ ಅವರನ್ನು ಸಜ್ಜುಗೊಳಿಸಲು ಶಿಕ್ಷಕರಿಗೆ ರಚನಾತ್ಮಕ ಚೌಕಟ್ಟನ್ನು ಒದಗಿಸುತ್ತದೆ. ಈ ಮೂಲಕ ಕ್ರಿಯಾತ್ಮ ಜಗತ್ತಿನಲ್ಲಿ ಬದುಕಲು ಮಾತ್ರವಲ್ಲದೆ ಅಭಿವೃದ್ಧಿಹೊಂದಲೂ ಮುಂದಿನ ಪೀಳಿಗೆಯನ್ನು ಅಣಿಗೊಳಿಸುತ್ತದೆ.

ನಿರಂತರ ಪ್ರಯತ್ನಗಳ ಫಲವಾಗಿ ನಮ್ಮ ದೇಶದ ಶೈಕ್ಷಣಿಕ ವ್ಯವಸ್ಥೆ ಸಕಾರಾತ್ಮಕ ಪರಿವರ್ತನೆಗಳಿಗೆ ಸಾಕ್ಷಿಯಾಗಲಿದ್ದು, ಮುಂದಿನ ಪೀಳಿಗೆಗಳಿಗೆ ಅನುಕೂಲ ಕಲ್ಪಿಸಲಿದೆ ಎಂಬ ಬಗ್ಗೆ ನನಗೆ ವಿಶ್ವಾಸವಿದೆ.

**(ಧರ್ಮೇಂದ್ರ ಪ್ರಧಾನ್ )**

# ಸಂದೇಶ



**ಅನ್ನಪೂರ್ಣ ದೇವಿ**
ಗೌರವನ್ವಿತ ರಾಜ್ಯ ಶಿಕ್ಷಣ ಸಚಿವರು
ಶಿಕ್ಷಣ ಸಚಿವಾಲಯ
ಭಾರತ ಸರ್ಕಾರ

ಎಲ್ಲರಿಗೂ ಗುಣಮಟ್ಟದ ಶಿಕ್ಷಣವನ್ನು ಖಾತರಿಪಡಿಸುವ ಜೊತೆಗೆ ಬೋಧನಾ ವೃತ್ತಿಯನ್ನು ಎತ್ತರಕ್ಕೇರಿಸುವ ಬದ್ಧತೆಯಲ್ಲಿ ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ) ಪ್ರಮುಖ ಮೈಲಿಗಲ್ಲು ನಿರ್ಮಿಸಿವೆ. ಬಿಗಿಯಾದ ಸಮಾಲೋಚನೆ, ಸಂಶೋಧನೆ ಜೊತೆಗೆ ಈ ಕ್ಷೇತ್ರದಲ್ಲಿನ ಶಿಕ್ಷಣತಜ್ಞರು, ಪರಿಣತರು, ತಜ್ಞ ಸಮಿತಿಗಳು ಹಾಗೂ ಇತರ ಮಧ್ಯಸ್ಥಗಾರರ ಸಹಭಾಗಿತ್ವದಲ್ಲಿ ಈ ದಾಖಲೆಯನ್ನು ರೂಪಿಸಲಾಗಿದೆ. 21ನೇ ಶತಮಾನದಲ್ಲಿ ಪರಿಣಾಮಕಾರಿ ಬೋಧನೆಯನ್ನು ವಿವರಿಸುವ ಅಗತ್ಯ ಜ್ಞಾನ, ಕೌಶಲಗಳು ಹಾಗೂ ಇತ್ಯರ್ಥಗಳನ್ನು ಈ ಮಾನದಂಡಗಳು ಒಳಗೊಂಡಿವೆ. ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆಯು ಸಮಗ್ರ ಚೌಕಟ್ಟನ್ನು ಒದಗಿಸುತ್ತದೆ. ಇದು ಶಿಕ್ಷಕರ ಕುರಿತ ಸ್ಪಷ್ಟ ನಿರೀಕ್ಷೆಗಳನ್ನು ರೂಪಿಸುವುದು ಮಾತ್ರವಲ್ಲ, ವೃತ್ತಿ ನಿರ್ವಹಣೆಗೆ ಅಗತ್ಯವಾದ ನೈತಿಕತೆ, ವಿಷಯ ಜ್ಞಾನ ಹಾಗೂ ಪುರಾವೆ ನಿರ್ಮಾಣದಂತಹ ನಿರಂತರ ಪ್ರಗತಿಯ ಸಂಸ್ಕೃತಿಯನ್ನು ಕೂಡ ಪೋಷಿಸುತ್ತದೆ.

ಈ ಮಾನದಂಡಗಳನ್ನು ಅಭಿವೃದ್ಧಿಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಎಲ್ಲ ಮಧ್ಯಸ್ಥಗಾರರು ಹಾಗೂ ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಮಂಡಳಿಗೆ (ಎನ್.ಸಿ.ಟಿ.ಇ) ನಾನು ನನ್ನ ಹೃದಯಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇನೆ.

*********************************************************************************

# ಸಂದೇಶ




**ಸಂಜಯ್ ಕುಮಾರ್, ಐ.ಎ.ಎಸ್**
ಕಾರ್ಯದರ್ಶಿ
ಶಾಲಾ ಶಿಕ್ಷಣ ಹಾಗೂ ಸಾಕ್ಷರತೆ ಇಲಾಖೆ,
ಶಿಕ್ಷಣ ಸಚಿವಾಲಯ,
ಭಾರತ ಸರ್ಕಾರ

ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ಭಾರತದಲ್ಲಿ ಶಿಕ್ಷಕರ ಶಿಕ್ಷಣ ವಲಯದಲ್ಲಿ ಪರಿಣಾಮಕಾರಿ ಸುಧಾರಣೆಗಳನ್ನು ತಂದಿದೆ. ಸರ್ವತೋಮುಖ ಹಾಗೂ ಎಲ್ಲರಿಗೂ ಗುಣಾತ್ಮಕ ಶಿಕ್ಷಣ ನೀಡುವ ಗುರಿಯನ್ನು ಸಾಧಿಸುವ ಉದ್ದೇಶದಿಂದ ಈ ನೀತಿ ಬೋಧನ ವೃತ್ತಿಯ ಅಭಿವೃದ್ಧಿಗೆ ನಿರ್ದಿಷ್ಟವಾಗಿ ಒತ್ತು ನೀಡಿದೆ ಹಾಗೂ ಶಿಕ್ಷಕರನ್ನು ಎಲ್ಲ ಸುಧಾರಣೆಗಳ ಕೇಂದ್ರ ಬಿಂದುವನ್ನಾಗಿ ಮಾಡಿದೆ. ಎನ್.ಇ.ಪಿ 2020ರ ಎಲ್ಲ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಮಂಡಳಿಯು (ಎನ್.ಸಿ,ಟಿ.ಇ) ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ (ಎನ್.ಪಿ.ಎಸ್.ಟಿ) ಉತ್ತಮ ಸಾಮಾನ್ಯ ಸೆಟ್ ಅನ್ನು ವಿನ್ಯಾಸಗೊಳಿಸಿ, ಗುರಿಯನ್ನು ತಲುಪಲು ಸಮಗ್ರ ಮಾರ್ಗಸೂಚಿ ದಾಖಲೆಯನ್ನು ಅಭಿವೃದ್ಧಿಪಡಿಸಿದೆ. ಸರಣಿ ಸಂದರ್ಶನಗಳು/ ಸಮಾಲೋಚನೆಗಳು ಹಾಗೂ ವಿವಿಧ ಷೇರುದಾರರ ಜೊತೆಗಿನ ಸಹಯೋಗದೊಂದಿಗೆ ಈ ದಾಖಲೆಯನ್ನು ತಳಮಟ್ಟದಿಂದ ಹಿಡಿದು ವಿವಿಧ ಹಂತಗಳ ಸಂಶೋಧನೆಗಳ ಆಧಾರದಲ್ಲಿ ಸಿದ್ಧಪಡಿಸಲಾಗಿದೆ. ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಪಡಿಸುವಲ್ಲಿ ಈ ಮಾರ್ಗಸೂಚಿ ದಾಖಲೆಯು ಒಂದು ವೇಗವರ್ಧಕವಾಗಿರಲಿದೆ ಹಾಗೂ ಜಾಗತಿಕ ಮಾನದಂಡಗಳಿಗೆ ಸರಿಸಮನಾಗಿ ಶಿಕ್ಷಕರಾಗಲು ನೆರವು ನೀಡಲಿದೆ.

ಈ ಕಾರ್ಯದಲ್ಲಿ ತೊಡಗಿರುವ ಎನ್.ಸಿ.ಟಿ.ಇ ಹಾಗೂ ಎಲ್ಲ ಮಧ್ಯಸ್ಥಗಾರರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

# ಸಂದೇಶ



**ಪ್ರೊ. ಯೋಗೇಶ್ ಸಿಂಗ್**
ಮುಖ್ಯಸ್ಥರು, ಎನ್.ಸಿ.ಟಿ.ಇ,
ನವದೆಹಲಿ

ಎನ್.ಇ.ಪಿ 2020 ಉನ್ನತ ಗುಣಮಟ್ಟದ ಬೋಧನೆಗೆ ಮಹತ್ವ ನೀಡುತ್ತದೆ. ಇದು ಶಿಕ್ಷಕರ ಕೆಲಸದ ಮಹತ್ವ ಹಾಗೂ 21ನೇ ಶತಮಾನದ ಕೌಶಲಗಳನ್ನು ಸೂಚಿಸುತ್ತದೆ. ನಮ್ಮ ವಿದ್ಯಾರ್ಥಿಗಳ ಶೈಕ್ಷಣಿಕ ಉದ್ದೇಶಗಳನ್ನು ಪೂರೈಸಲು ಕೌಶಲಗಳನ್ನು ಹೊಂದಿರುವ ಶಿಕ್ಷಕರನ್ನು ರೂಪಿಸುವ ಗುರಿಯನ್ನು ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ ಮೇಲಿನ ಮಾರ್ಗಸೂಚಿಗಳ ದಾಖಲೆ ಹೊಂದಿದೆ. ಕೆಲಸ ಹಾಗೂ ವರ್ತನೆಯಲ್ಲಿ ಉನ್ನತ ಮಾನದಂಡಗಳನ್ನು ಸಾಧಿಸಲು ಜವಾಬ್ದಾರಿಯುತ ಶಿಕ್ಷಕರಿಗೆ ಎನ್.ಪಿ.ಎಸ್.ಟಿ ಒಂದು ವೇದಿಕೆ ಕಲ್ಪಿಸುತ್ತದೆ. ಮೌಲ್ಯಗಳು ಹಾಗೂ ನೈತಿಕತೆ, ಪ್ರಬಲ ವಿಷಯ ಜ್ಞಾನ, ವೃತ್ತಿಪರ ಸಂಬಂಧಗಳು, ವೃತ್ತಿ ಬೆಳವಣಿಗೆ ಹಾಗೂ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತಹ ಶಿಕ್ಷಕರ ವರ್ತನೆ ಮೇಲೆ ಎನ್.ಪಿ.ಎಸ್.ಟಿಯಲ್ಲಿ ವಿವರಿಸಿರುವ ಸಾಮಾನ್ಯ ಮಾನದಂಡಗಳು ಗಮನ ಕೇಂದ್ರೀಕರಿಸಿವೆ. ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡುವ ಗುರಿ ತಲುಪುವ ಹಾದಿಯಲ್ಲಿ ಸ್ಫೂರ್ತಿ ಮನೋಭಾವವನ್ನು ಉತ್ತೇಜಿಸಲು ಎಲ್ಲ ಮಧ್ಯಸ್ಥಗಾರರ ಸರ್ವತೋಮುಖ ಸಹಯೋಗವನ್ನು ನಾನು ಎದುರು ನೋಡುತ್ತಿದ್ದೇನೆ.

*******************************************************************************

# ಸಂದೇಶ



**ಕೆಸಾಂಗ್ ವೈ. ಶೆರ್ಪಾ**
**ಐ.ಆರ್.ಎಸ್**
ಸದಸ್ಯ ಕಾರ್ಯದರ್ಶಿ
ಎನ್.ಸಿ.ಟಿ.ಇ, ನವದೆಹಲಿ

ಭಾರತದಲ್ಲಿ ಶಿಕ್ಷಕರ ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡುವ ನಿಟ್ಟಿನಲ್ಲಿ ಶಾಸನಬದ್ಧ ಸಂಸ್ಥೆಯಾದ ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಮಂಡಳಿಯು (ಎನ್.ಸಿ,ಟಿ.ಇ) ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಗುಣಮಟ್ಟದ ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆಯಲ್ಲಿ ಉನ್ನತ ಗುಣಮಟ್ಟದ ಶಿಕ್ಷಕರು ಪೂರ್ವಾಪೇಕ್ಷಿತ ಅಗತ್ಯವೆಂದು ಎನ್.ಇ.ಪಿ 2020 ಗುರುತಿಸಿದೆ. ಇದಕ್ಕೆ ಅನುಗುಣವಾಗಿ ಎನ್.ಇ.ಪಿ 2020 ಪ್ಯಾರಾ 5.20 ರಲ್ಲಿ ಹೇಳಿರುವಂತೆ ಎನ್.ಸಿ,ಟಿ.ಇ, ಯು.ಎನ್.ಪಿ.ಎಸ್.ಟಿ.ಗಾಗಿ ಮಾರ್ಗದರ್ಶಿ ದಾಖಲೆಯನ್ನು ಹೊರತಂದಿದೆ. ಇದು ಶಿಕ್ಷಕರು ಏನನ್ನು ತಿಳಿದಿರಬೇಕು, ಅವರು ಹೇಗೆ ಕಾರ್ಯನಿರ್ವಹಿಸಬೇಕು ಹಾಗೂ 21ನೇ ಶತಮಾನದಲ್ಲಿ ಪರಿಣಾಮಕಾರಿ ಬೋಧನೆ ನಿಟ್ಟಿನಲ್ಲಿ ಅವರ ವೃತ್ತಿ ಬೆಳವಣಿಗೆ ಹೇಗಿರಬೇಕು ಹಾಗೂ ಅವರು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ವಿವರಿಸುತ್ತದೆ. ನೈಪುಣ್ಯತೆಯ ವಿವಿಧ ಹಂತಗಳಲ್ಲಿ ಒಬ್ಬ ಶಿಕ್ಷಕರಿಗೆ ಇರಬೇಕಾದ ಸಾಮರ್ಥ್ಯಗಳು ಹಾಗೂ ಅವರ ಕುರಿತ ನಿರೀಕ್ಷೆಗಳು ಅಥವಾ ವೃತ್ತಿಬದುಕಿನ ವಿವಿಧ ಹಂತಗಳಲ್ಲಿರಬೇಕಾದ ಅನುಭವವನ್ನು ಎನ್.ಪಿ.ಎಸ್.ಟಿ ಒಳಗೊಂಡಿದೆ.

ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆಯ ಅಭಿವೃದ್ಧಿ ಹಾಗೂ ವಿನ್ಯಾಸಗೊಳಿಸುವ ನಿಟ್ಟಿನಲ್ಲಿ ನೆರವು ನೀಡಿದ ನನ್ನ ಎಲ್ಲ ಹಿರಿಯರು ಹಾಗೂ ಕರಡು ಸಮಿತಿ ಸದಸ್ಯರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಎನ್.ಸಿ.ಟಿ.ಇ.ಯ ಇಡೀ ತಂಡಕ್ಕೆ ನನ್ನ ಮೆಚ್ಚುಗೆ ಸೂಚಿಸುತ್ತೇನೆ.

# ಪರಿವಿಡಿ


| ಕ್ರ.ಸಂ. | ವಿಷಯ | ಪುಟ ಸಂಖ್ಯೆ |
|---|---|---|
| **1.** | ಪರಿಚಯ | **1** |
| **2.** | ಬೋಧನೆ: ಒಂದು ವೃತ್ತಿ | **3** |
| **2.1** | ಒಂದು ವೃತ್ತಿಯಾಗಿ ಬೋಧನೆ | 3 |
| **2.2** | ವೃತ್ತಿಪರ ಮಾನದಂಡಗಳ ಅರಿವು | 5 |
| **2.3** | ಶಿಕ್ಷಕರು ಹಾಗೂ ಬೋಧನೆಗೆ ವೃತ್ತಿಪರ ಮಾನದಂಡಗಳ ಪ್ರಾಮುಖ್ಯತೆ | 5 |
| **3.** | ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ) | **7** |
| **3.1** | ಎನ್.ಪಿ.ಎಸ್.ಟಿ ಪ್ರಸ್ತುತತೆ | 7 |
| **3.2** | ಶಿಕ್ಷಕರಿಗೆ ವೃತ್ತಿಪರ ಮಾನದಂಡಗಳು | 9 |
| **3.3** | ಸಾಮರ್ಥ್ಯದ ಬೆಳವಣಿಗೆ ಹಾಗೂ ಅಭಿವೃದ್ಧಿ | 12 |
| **3.4** | ಶಿಕ್ಷಕರಿಗೆ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು | 13 |
| **4.** | ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್ ಪಿಎಸ್ ಟಿ) ಚೌಕಟ್ಟು | **15** |
| **4.1** | ಮಾನದಂಡ 1: ಪ್ರಮುಖ ಮೌಲ್ಯಗಳು ಹಾಗೂ ನೀತಿಗಳು | 15 |
| **4.2** | ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | 15 |
| **4.3** | ಮಾನದಂಡ 3: ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿ | 16 |

| | | |
|---|---|---|
| **5.** | ಅನುಷ್ಠಾನ | **27** |
| **5.1** | ಕ್ರಿಯಾಯೋಜನೆ | 27 |
| **5.2** | ಅನ್ವಯಿಸುವಿಕೆ | 28 |
| **5.3** | ನಿಯಮಿತ ಅವಲೋಕನ | 28 |
| **6.** | ಎನ್.ಪಿ.ಎಸ್.ಟಿ ಚೌಕಟ್ಟು ಆಧಾರಿತ ಮೌಲ್ಯಮಾಪನ ಸಾಧನಗಳು (ಸೂಚಿತ) | **29** |
| **7.** | ಎನ್.ಪಿ.ಎಸ್.ಟಿಯಲ್ಲಿ ಶಿಕ್ಷಕರ ಗುಣಮಟ್ಟದ ರಾಷ್ಟ್ರೀಯ ಕೇಂದ್ರಕ್ಕೆ (ಎನ್.ಸಿ.ಟಿ.ಕ್ಯು) ಡಿಜಿಟಲ್ ಮೂಲಸೌಕರ್ಯ ಯೋಜನೆ | **42** |
| **8.** | ಸಚಿತ್ರ ವಿವರಣೆಗಳ ಪಟ್ಟಿ | **45** |
| **9.** | ಸಂಕ್ಷಿಪ್ತ ರೂಪ | **46** |
| **10.** | ಗ್ರಂಥ ಸೂಚಿ | **48** |
| **11.** | ಎನ್.ಪಿ.ಎಸ್.ಟಿ ತಜ್ಞರ ಸಮಿತಿ | **49** |

# 1. ಪರಿಚಯ

ರಾಷ್ಟ್ರೀಯ ಶಿಕ್ಷಣ ನೀತಿ 2020 (ಎನ್.ಇ.ಪಿ- 2020) ಭಾರತದಲ್ಲಿನ ಶಿಕ್ಷಣ ವ್ಯವಸ್ಥೆಯ ಮೂಲಭೂತ ಸುಧಾರಣೆಯಲ್ಲಿ ಶಿಕ್ಷಕನನ್ನು ಕೇಂದ್ರೀಕರಿಸಿದೆ. ಶಿಕ್ಷಣ ಎನ್ನುವುದು ನಿರಂತರ ಪ್ರಕ್ರಿಯೆಯಾಗಿದ್ದು, ಪ್ರತಿಯೊಬ್ಬ ನಾಗರಿಕನ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಹಾಗೆಯೇ ಈ ಪ್ರಕ್ರಿಯೆಯಲ್ಲಿ ಶಿಕ್ಷಕನೂ ನಿರ್ಣಾಯಕ ಪಾತ್ರ ವಹಿಸುತ್ತಾನೆ. ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ) ಸಾಧ್ಯವಿರುವ ಅತ್ಯುತ್ತಮ ಶಿಕ್ಷಣ ಪಡೆಯಲು ಎಲ್ಲ ವಿದ್ಯಾರ್ಥಿಗಳಿಗೂ ಸಮಾನವಾದ ಅವಕಾಶವನ್ನು ಖಾತ್ರಿಪಡಿಸುವ ಎನ್.ಇ.ಪಿ- 2020ರ ಉದ್ದೇಶವನ್ನು ಪೂರ್ಣಗೊಳಿಸಲು ಪ್ರಯತ್ನಿಸುತ್ತದೆ. ಶಾಲೆಯ ಎಲ್ಲಾ ಹಂತಗಳಲ್ಲೂ ಎಲ್ಲಾ ಮಕ್ಕಳಿಗೂ ಬೋಧಿಸಲು ಸಾಧ್ಯವಾಗುವಂತೆ ಎಲ್ಲಾ ಶಿಕ್ಷಕರು ಉತ್ಸಾಹಿಗಳಾಗಿರುವಂತೆ, ಶ್ರಮದಾಯಿಗಳು, ಉತ್ತಮ ಅರ್ಹತೆ, ಅತ್ಯುತ್ತಮ ಸಿದ್ಧತೆ ಹಾಗೂ ಸಾಧನಗಳನ್ನು ಹೊಂದಿರುವುದನ್ನು ಎನ್.ಪಿ.ಎಸ್.ಟಿ ಖಾತ್ರಿಪಡಿಸುತ್ತದೆ. ಹೀಗಾಗಿ ಅಧ್ಯಾಪನಾ ವೃತ್ತಿಗೆ ಅತ್ಯುತ್ತಮ ಪ್ರತಿಭೆ ಹೊಂದಿರುವವರನ್ನು ಸೆಳೆಯಬೇಕಿರುವುದು ಈ ಕ್ಷಣದ ಅಗತ್ಯವಾಗಿದೆ.

ಶಿಕ್ಷಕರ ಸಾಮರ್ಥ್ಯವನ್ನು ವೃತ್ತಿಜೀವನದ ವಿವಿಧ ಹಂತಗಳಲ್ಲಿ ಗುರುತಿಸಲು ಎನ್.ಪಿ.ಎಸ್.ಟಿ ಅವಕಾಶ ಕಲ್ಪಿಸುತ್ತದೆ. ಇದರೊಂದಿಗೆ ಎಲ್ಲಾ ಶಿಕ್ಷಕರ ಸಿದ್ಧತೆ, ಅಭ್ಯಾಸ ಹಾಗೂ ನಿರ್ವಹಣೆ ಸುಧಾರಣೆಗೆ ಇದು ಮಹತ್ವ ನೀಡುತ್ತದೆ. ಮಾನದಂಡಗಳು ಹಾಗೂ ಸಂಬಂಧಿತ ನೀತಿಗಳು ಎನ್.ಇ.ಪಿ.- 2020 ಮೂಲಭೂತ ತತ್ವಗಳಿಗೆ ಅನುಗುಣವಾಗಿದ್ದು, ಶಿಕ್ಷಣ ವ್ಯವಸ್ಥೆಗೆ ಮಾರ್ಗದರ್ಶನ ನೀಡಲಿದೆ. ಹಾಗೆಯೇ ಎಲ್ಲರಿಗೂ ಅತ್ಯುನ್ನತ ಗುಣಮಟ್ಟದ ಶಿಕ್ಷಣ ನೀಡುವ ಎನ್.ಇ.ಪಿ- 2020 ನೀತಿಯ ದೂರದೃಷ್ಟಿಗೆ ಬೆಂಬಲ ನೀಡಲಿದೆ. ಸೇವಾಪೂರ್ವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಲು ಹಾಗೂ ಶಿಕ್ಷಕರ ವೃತ್ತಿ ನಿರ್ವಹಣೆಯ ಎಲ್ಲ ಅಂಶಗಳನ್ನು ನಿರ್ಧರಿಸಲು ಕೂಡ ಎನ್.ಪಿ.ಎಸ್.ಟಿ ನೆರವು ನೀಡಲಿದೆ.

ಶಿಕ್ಷಕರ ಕೌಶಲಾಭಿವೃದ್ಧಿಗೆ ಮಾಡುವ ಪ್ರಯತ್ನಗಳ ಪ್ರತಿಫಲವನ್ನು ವಿದ್ಯಾರ್ಥಿಗಳು ಪಡೆಯುತ್ತಾರೆ. ವೃತ್ತಿಯ ವಿವಿಧ ಹಂತಗಳಲ್ಲಿ ಶಿಕ್ಷಕರಿಂದ ಏನನ್ನು ನಿರೀಕ್ಷಿಸಲಾಗುತ್ತದೆ ಹಾಗೂ ಪರಿಣಿತಿಯ ವಿವಿಧ ಮಟ್ಟಗಳು, ಹಾಗೆಯೇ ಪ್ರತಿಯೊಂದಕ್ಕೂ ಅಗತ್ಯವಾದ ಸಾಮರ್ಥ್ಯದ ಬಗ್ಗೆ ಶಿಕ್ಷಕರಿಗೆ ವೃತ್ತಿಪರ ಮಾನದಂಡಗಳು ಸ್ಥೂಲ ವಿವರಣೆಯನ್ನು ನೀಡಲಿವೆ. ವೃತ್ತಿಪರ ಮಾನದಂಡಗಳನ್ನು ರಾಷ್ಟ್ರೀಯ ಮಟ್ಟದಲ್ಲಿ 2030ರಲ್ಲಿ ಪರಿಶೀಲಿಸಲಾಗುವುದು ಹಾಗೂ ಪರಿಷ್ಕರಿಸಲಾಗುವುದು. ಆ ಬಳಿಕ ವ್ಯವಸ್ಥೆಯ ಪರಿಣಾಮಕಾರಿತ್ವದ ಬಗ್ಗೆ ಕಟ್ಟುನಿಟ್ಟಿನ ಪ್ರಾಯೋಗಿಕ ವಿಶ್ಲೇಷಣೆಯ ಆಧಾರದಲ್ಲಿ ಪ್ರತಿ 10 ವರ್ಷಕ್ಕೊಮ್ಮೆ ಪರಿಶೀಲನೆ ಹಾಗೂ ಪರಿಷ್ಕರಣೆ ನಡೆಯಲಿದೆ.

ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಮಂಡಳಿ (ಎನ್.ಸಿ.ಟಿ.ಇ) ಶಾಸನಬದ್ಧ ಸಂಸ್ಥೆಯಾಗಿದ್ದು, ಇದನ್ನು ಶಿಕ್ಷಕ ಶಿಕ್ಷಣ ಕಾಯ್ದೆಗೆ ರಾಷ್ಟ್ರೀಯ ಮಂಡಳಿ (ಎನ್.ಸಿ.ಟಿ.ಇ ಕಾಯಿದೆ), 1993 ಸ್ಥಾಪಿಸಿದೆ. ದೇಶಾದ್ಯಂತ ಸೇವಾಪೂರ್ವ ಹಾಗೂ ಸೇವೆಯಲ್ಲಿರುವ ಶಿಕ್ಷಕರ ಯೋಜಿತ ಹಾಗೂ ಸಂಘಟಿತ ಅಭಿವೃದ್ಧಿಯನ್ನು ಇದು ಕಡ್ಡಾಯಗೊಳಿಸಿದೆ. ಎನ್.ಪಿ.ಎಸ್.ಟಿ ಅನ್ನು ಶಿಕ್ಷಣ ಸಚಿವಾಲಯದ ಅಧಿಕೃತ ಆದೇಶದ ಮೇರೆಗೆ 2021ನೇ ಬಜೆಟ್ ನಲ್ಲಿ ಘೋಷಿಸಲಾಗಿತ್ತು ಹಾಗೂ ಈ ಕಾರ್ಯವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಎನ್.ಸಿ.ಟಿ.ಇ.ಗೆ ವಹಿಸಲಾಗಿತ್ತು. ಎನ್.ಪಿ.ಎಸ್.ಟಿ ವಿವಿಧ ವಿಚಾರಗಳ ಮಧ್ಯಸ್ಥಗಾರರಿಂದ ಸ್ವೀಕರಿಸಿದ ಮಾಹಿತಿಗಳು ಹಾಗೂ ಸಲಹೆಗಳ ಆಧಾರದಲ್ಲಿ ಎನ್.ಪಿ.ಎಸ್.ಟಿ ದಾಖಲೆ ಸಿದ್ಧಪಡಿಸಲು ತಜ್ಞರ ಸಮಿತಿಯೊಂದನ್ನು ರಚಿಸಲಾಗಿತ್ತು. MyNEP2020 ಪೋರ್ಟಲ್ ನಲ್ಲಿ 2021ನೇ ಸಾಲಿನ ಏಪ್ರಿಲ್ ನಲ್ಲಿ ಡಿಜಿಟಲ್ ಸಮಾಲೋಚನೆ ಮೂಲಕ ಪ್ರಾಥಮಿಕ ಸಂಶೋಧನೆ ನಡೆಸಲಾಗಿತ್ತು. ದಾಖಲೆ ಸಿದ್ಧಪಡಿಸುವಲ್ಲಿ ಸಮಗ್ರ ಸುಸಂಬದ್ಧತೆ ಕಾಪಾಡಿಕೊಳ್ಳಲು ಹಂತ ಹಂತವಾದ (ಕ್ರಮಾನುಗತ) ವಿಧಾನದಲ್ಲಿ ಸಲಹೆಗಳು/ಮಾಹಿತಿಗಳನ್ನು ಆಹ್ವಾನಿಸಲಾಗಿತ್ತು. ಇನ್ನು ವಿವಿಧ ಕ್ಷೇತ್ರಗಳ ಆಯ್ದ ನಿರ್ದಿಷ್ಟ ಗುಂಪಿನಿಂದ ಪ್ರಶ್ನಾವಳಿಯೊಂದರ ಮೂಲಕ ನಿರ್ದಿಷ್ಟ ಕಾಮೆಂಟ್ಸ್ /ಮಾಹಿತಿಗಳನ್ನು ಆಹ್ವಾನಿಸಲು ದ್ವಿತೀಯ ಸಂಶೋಧನೆಯನ್ನು ನಡೆಸಲಾಗಿತ್ತು.

ಅಂತಾರಾಷ್ಟ್ರೀಯ ಮಟ್ಟದಲ್ಲೇ ಅತ್ಯುತ್ತಮ ಮಾನದಂಡಗಳನ್ನು ಅನುಸರಿಸಲು ನಾಲ್ಕು ರಾಷ್ಟ್ರಗಳ ಎನ್.ಪಿ.ಎಸ್.ಟಿ ದಾಖಲೆಗಳ ತುಲನಾತ್ಮಕ ಅಧ್ಯಯನ ನಡೆಸಿ ವರದಿಯೊಂದನ್ನು ಸಿದ್ಧಪಡಿಸಲಾಯಿತು. ತಜ್ಞರ ಸಮಿತಿ ಅನೇಕ ಚರ್ಚೆಗಳು ಹಾಗೂ ಪರಿಷ್ಕರಣೆಗಳನ್ನು ನಡೆಸುವ ಮೂಲಕ ಎನ್.ಪಿ.ಎಸ್.ಟಿ ಪ್ರಾಥಮಿಕ ಕರಡು ಪ್ರತಿಯನ್ನು ಅಭಿವೃದ್ಧಿಪಡಿಸಿತು ಹಾಗೂ 2021ರ ನವೆಂಬರ್ 17ರಂದು ಎನ್.ಸಿ.ಟಿ.ಇ ವೆಬ್ ಸೈಟ್ ಹಾಗೂ MyGov portalನಲ್ಲಿ ಪ್ರಕಟಿಸಿತ್ತು. ಇದೇ ಅವಧಿಯಲ್ಲಿ ಎನ್.ಪಿ.ಎಸ್.ಟಿ ಪ್ರಾಥಮಿಕ ಕರಡುಪ್ರತಿಗೆ ಮಾಹಿತಿಗಳು/ ಅಭಿಪ್ರಾಯಗಳನ್ನು ತಳಮಟ್ಟದ ಸಂಸ್ಥೆಗಳಿಂದ ಸಂಗ್ರಹಿಸಲು ದೇಶಾದ್ಯಂತ ಶಿಕ್ಷಣ ತಜ್ಞರು, ಶೈಕ್ಷಣಿಕ ಆಡಳಿತಾಧಿಕಾರಿಗಳು, ಶಿಕ್ಷಕ ಶಿಕ್ಷಣತಜ್ಞರು, ಎಚ್.ಒ.ಡಿ.ಗಳು, ಎಸ್.ಸಿ.ಇ.ಆರ್.ಟಿ.ಎಸ್.ಗಳು, ಡಯಟ್ ಗಳು, ಪ್ರಾಂಶುಪಾಲರು, ಶಿಕ್ಷಕರು (ಸರ್ಕಾರಿ/ಖಾಸಗಿ), ಎನ್.ಜಿ.ಒ.ಗಳು, ಇತರ ಮಧ್ಯಸ್ಥಗಾರರ ಜೊತೆಗೆ 15 ಮುಕ್ತ ಚರ್ಚೆಗಳನ್ನು ನಡೆಸಲಾಗಿತ್ತು.

ಇದೇ ಸಮಯದಲ್ಲಿ ಪ್ರಾಥಮಿಕ ಕರಡುಪ್ರತಿಯಲ್ಲಿನ ವಿವರಣೆಗೆ ದೇಶಾದ್ಯಂತ ಶಿಕ್ಷಕರು, ಪ್ರಾಂಶುಪಾಲರು, ಡಯಟ್ಸ್ (ಡಿ.ಐ.ಇ.ಟಿ), ಎಸ್.ಸಿ.ಇ.ಆರ್.ಟಿ.ಎಸ್ ಜೊತೆಗೆ 5 ಸಮಾಲೋಚನಾ ಸಭೆಗಳನ್ನು ನಡೆಸಲಾಗಿದೆ. ಸಾಧನಗಳು/ ವಿಧಾನಗಳು ಹಾಗೂ ಎನ್.ಪಿ.ಎಸ್.ಟಿ ದಾಖಲೆಯಲ್ಲಿ ಉಲ್ಲೇಖಿಸಿರುವ ಸಾಮರ್ಥ್ಯಗಳ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಲಹೆಗಳನ್ನು ಸ್ವೀಕರಿಸುವುದು ಕೂಡ ಇದರ ಉದ್ದೇಶವಾಗಿದೆ. ಇನ್ನು ಮೂರನೇ ಹಂತದ ಸಂಶೋಧನೆಯಲ್ಲಿ ಮಧ್ಯಸ್ಥಗಾರರ ಸಲಹೆಗಳು/ಮಾಹಿತಿಗಳನ್ನು ಎನ್.ಪಿ.ಎಸ್.ಟಿ ಅಂತಿಮ ಕರಡುಪ್ರತಿ ಸಿದ್ಧಪಡಿಸಲು ಬಳಸಲಾಗಿತ್ತು. ಇನ್ನು ಈ ಅಂತಿಮ ಕರಡು ಪ್ರತಿಯನ್ನು 2022ರ ಮಾರ್ಚ್ 29ರಂದು ಎನ್.ಪಿ.ಎಸ್.ಟಿ.ಗಾಗಿ ಸ್ಥಾಪಿಸಿರುವ ಸಮಿತಿ ಮುಂದಿಡಲಾಯಿತು, ಪ್ರಾಯೋಗಿಕವಾಗಿ ಪರೀಕ್ಷಿಸಲು ಇದಕ್ಕೆ ಅನುಮೋದನೆ ಕೂಡ ನೀಡಲಾಯಿತು. ದೇಶಾದ್ಯಂತ ಕೇಂದ್ರ ಸರ್ಕಾರದ ಅಧೀನದಲ್ಲಿರುವ 75 ಶಾಲೆಗಳಲ್ಲಿನ (25 ಕೆ.ವಿ.ಎಸ್ + 25 ಎನ್.ವಿ.ಎಸ್ +25 ಸಿ.ಬಿ.ಎಸ್.ಇ) 1,175 ಶಿಕ್ಷಕರನ್ನು ಕೇಂದ್ರೀಕರಿಸಿ ಪ್ರಾಯೋಗಿಕವಾಗಿ ಜಾರಿ ಮಾಡುವ ಮೂಲಕ ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆಯ ಜಾರಿ ಹಾಗೂ ಅದರ ಪರಿಣಾಮದ ಮೌಲ್ಯಮಾಪನ ನಡೆಸಲಾಯಿತು.

ಎನ್.ಇ.ಪಿ- 2020 ಪ್ಯಾರಾ 5.20ನಲ್ಲಿ ಉಲ್ಲೇಖಿಸಲ್ಪಟ್ಟಿರುವ ಶಿಕ್ಷಕರಿಗೆ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ) ಎಲ್ಲ ವಿದ್ಯಾರ್ಥಿಗಳಿಗೂ ಅತ್ಯುನ್ನತ ಗುಣಮಟ್ಟದ ಶಿಕ್ಷಣ ಪಡೆಯಲು ಸಮಾನವಾದ ಅವಕಾಶ ಕಲ್ಪಿಸುವ ಗುರಿ ಹೊಂದಿದೆ. ಎಲ್ಲ ವಿದ್ಯಾರ್ಥಿಗಳಿಗೂ ಉತ್ಸಾಹಿ, ಆಸಕ್ತ, ಅತ್ಯುನ್ನತ ಶೈಕ್ಷಣಿಕ ಅರ್ಹತೆ ಹೊಂದಿರುವ, ವೃತ್ತಿಪರ ತರಬೇತಿ ಹೊಂದಿರುವ ಹಾಗೂ ಅತ್ಯುತ್ತಮ ಸಿದ್ಧತೆ ಮಾಡಿಕೊಂಡಿರುವ ಶಿಕ್ಷಕರು ಬೋಧನೆ ಮಾಡಲು ಸಾಧ್ಯವಾಗುವಗಬೇಕೆಂಬ ಎನ್.ಇ.ಪಿ- 2020ರ ಗುರಿಯನ್ನು ಸಾಧಿಸಲು ನೆರವು ನೀಡುವಂತಹ ಎನ್.ಪಿ.ಎಸ್.ಟಿ ಮಾರ್ಗದರ್ಶಿಯನ್ನು ಅಭಿವೃದ್ಧಿಪಡಿಸಲಾಗಿದೆ. ಇದು ಶಿಕ್ಷಕರ ವೃತ್ತಿ ನಿರ್ವಹಣೆ ಹಾಗೂ ಇತರ ಮನ್ನಣೆಗಳಿಗೆ ಸಂಬಂಧಿಸಿದಂತಹ ಎಲ್ಲ ವಿಚಾರಗಳನ್ನು ನಿರ್ಧಿಸುವ ಗುರಿ ಹೊಂದಿದೆ. ಇದೊಂದು ಗುಣಮಟ್ಟದ ವಿವರಣೆಯಾಗಿದ್ದು, ಶಿಕ್ಷಕರ ಸಾಮರ್ಥ್ಯವನ್ನು ವಿವಿಧ ಹಂತಗಳು/ಮಟ್ಟಗಳಲ್ಲಿ ವ್ಯಾಖ್ಯಾನಿಸುತ್ತದೆ.

ಎನ್.ಸಿ.ಟಿ.ಇ.ಯಲ್ಲಿ ಶಿಕ್ಷಕರ ಗುಣಮಟ್ಟದ ರಾಷ್ಟ್ರೀಯ ಕೇಂದ್ರ (ಎನ್.ಸಿ.ಟಿ.ಕ್ಯೂ) ಎಂಬ ಡಿಜಿಟಲ್ ವೇದಿಕೆ ಒಂದನ್ನು ಸ್ಥಾಪಿಸಲಾಗಿದೆ. ಇದು ಎನ್.ಪಿ.ಎಸ್.ಟಿ ಕಾರ್ಯನಿರ್ವಹಣೆಯ ಜವಾಬ್ದಾರಿ ಹೊತ್ತಿರುವ ರಾಷ್ಟ್ರೀಯ ಸಂಪುಟವನ್ನು ಹೊಂದಿರಲಿದೆ. ಹೆಚ್ಚು ಸಂಪನ್ಮೂಲ ವ್ಯಕ್ತಿಗಳು/ಏಜೆನ್ಸಿಗಳನ್ನು ಸೃಷ್ಟಿಗಾಗಿ ಮಧ್ಯಸ್ಥಗಾರರು /ಅನುಷ್ಠಾನಗೊಳಿಸುವ ಏಜೆನ್ಸಿಗಳ ಸಾಮರ್ಥ್ಯ ವೃದ್ಧಿ ಕಾರ್ಯಕ್ರಮಗಳನ್ನು ಕೂಡ ನಡೆಸಲಾಗುವುದು.

ಹೊಸ ಶಿಕ್ಷಣ ನೀತಿಯ ಶಾಲಾ ರಚನೆಗೆ (5+3+3+4) ಅನುಗುಣವಾಗಿ ಶಿಕ್ಷಕರಿಗೆ ನಿಗದಿಪಡಿಸಿರುವ ನಿರೀಕ್ಷಿತ ಕೌಶಲಗಳ ಮಟ್ಟವನ್ನು ತಲುಪಲು ಸಾಧ್ಯವಾಗುವಂತೆ ಎನ್.ಪಿ.ಎಸ್.ಟಿ.ಯನ್ನು ಅನುಷ್ಠಾನಗೊಳಿಸಬಲ್ಲ ಮಾನದಂಡಗಳು ಹಾಗೂ ಸಂಸ್ಥೆಗಳನ್ನು ರಾಜ್ಯಗಳು /ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು ಅಳವಡಿಸಿಕೊಳ್ಳಬಹುದು.

# 2. ಬೋಧನೆ: ಒಂದು ವೃತ್ತಿ

## 2.1 ವೃತ್ತಿಯಾಗಿ ಬೋಧನೆ

ಜಾಗತಿಕವಾಗಿ ಅಧ್ಯಾಪನ ವೃತ್ತಿಯನ್ನು ಒಂದು ಶ್ರೇಷ್ಠ ವೃತ್ತಿಯಾಗಿ ಪರಿಗಣಿಸಲಾಗುತ್ತದೆ ಹಾಗೂ ಇದು ಸಾಮಾಜಿಕ ಪ್ರಗತಿಗೆ ಸಂಬಂಧಿಸಿದೆ. ಪ್ರಾಚೀನ ಕಾಲದಲ್ಲಿ ಶಿಕ್ಷಕ ಸಮಾಜದ ಅತ್ಯಂತ ಗೌರವಾನ್ವಿತ ಸದಸ್ಯನಾಗಿದ್ದ ಹಾಗೂ ಬಹುತೇಕ ಶಿಕ್ಷಿತ ವ್ಯಕ್ತಿಗಳಿಗೆ ಈ ಹುದ್ದೆ ಆಯ್ದುಕೊಳ್ಳಲು ಅನುಮತಿ ಇತ್ತು. ಶಿಕ್ಷಕರು ಶೈಕ್ಷಣಿಕ ವ್ಯವಸ್ಥೆಯ ಕೇಂದ್ರಬಿಂದುವಾಗಿದ್ದಾರೆ. ಅವರು ತಮ್ಮ ಜ್ಞಾನ, ಕೌಶಲಗಳು ಹಾಗೂ ನೈತಿಕ ಮೌಲ್ಯಗಳನ್ನು ಗರಿಷ್ಠ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ವರ್ಗಾಯಿಸುವುದು ಕೂಡ ಅಗತ್ಯ. ಶಿಕ್ಷಣ ವ್ಯವಸ್ಥೆಯಲ್ಲಿನ ಪರಿವರ್ತನೆ ಹಾಗೂ ಶಿಕ್ಷಕರ ಪಾತ್ರದಲ್ಲಿನ ಬದಲಾವಣೆಗಳ ಪರಿಣಾಮವಾಗಿ ಶಿಕ್ಷಕರ ಗುಣಮಟ್ಟ ವೃದ್ಧಿಗೆ ಒತ್ತು ನೀಡುವುದು ದೀರ್ಘಾವಧಿಯ ಹಾಗೂ ಸುಸ್ಥಿರ ದೇಶ ನಿರ್ಮಾಣದ ದೃಷ್ಟಿಯಿಂದ ಅತ್ಯಂತ ಮಹತ್ವದ ಕೆಲಸವಾಗಿದೆ. ಸಾಮಾಜಿಕ ಕ್ರಿಯೆ ಹಾಗೂ ಸಾಮಾಜಿಕ ವಿಚಾರಣೆಯ ರೂಪದಲ್ಲಿ ನೋಡಿವುದಾದರೆ, ಬೋಧನೆ ಅನ್ನುವುದು ಅತ್ಯಂತ ನೈತಿಕತೆಯುಳ್ಳ ಹಾಗೂ ರೂಢಿಗತ ಅಭ್ಯಾಸವಾಗಿದ್ದು, ಇದರಲ್ಲಿ ತೊಡಗಿರುವ ವೃತ್ತಿಪರರು ಈ ಕೆಳಗಿನ ಗುಣಗಳನ್ನು ಹೊಂದಿರುವುದು ಅವಶ್ಯಕವಾಗಿದೆ:

- ಮಕ್ಕಳ ಬಗ್ಗೆ ಕಾಳಜಿ ಹೊಂದಿರಬೇಕು ಹಾಗೂ ಅವರ ಜೊತೆಗೆ ಕಾಲ ಕಳೆಯಲು ಇಷ್ಟಪಡಬೇಕು. ವಿದ್ಯಾರ್ಥಿಯ ವೈವಿಧ್ಯತೆಯನ್ನು ಗೌರವಿಸಬೇಕು, ಮಕ್ಕಳನ್ನು ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳಲ್ಲಿ ಅರ್ಥೈಸಿಕೊಳ್ಳಬೇಕು, ಅವರ ಅಗತ್ಯಗಳು ಹಾಗೂ ಸಮಸ್ಯೆಗಳಿಗೆ ಸ್ಪಂದಿಸುವ ಸೂಕ್ಷ್ಮ ಸಂವೇದನೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ಎಲ್ಲ ಮಕ್ಕಳನ್ನು ಸಮಾನವಾಗಿ ಕಾಣಬೇಕು.
- ಮಕ್ಕಳನ್ನು ಬರೀ ಜ್ಞಾನವನ್ನು ಸ್ವೀಕರಿಸುವ ನಿಷ್ಕ್ರಿಯ ವಸ್ತುವನ್ನಾಗಿ ಗ್ರಹಿಸಬೇಡಿ, ವಿಷಯಗಳನ್ನು ಅರ್ಥೈಸಿಕೊಳ್ಳುವ ಅವರ ನೈಸರ್ಗಿಕ ಪ್ರವೃತ್ತಿಯನ್ನು ವೃದ್ಧಿಸಿ, ಉರು ಹಚ್ಚುವ ಕಲಿಕೆಯನ್ನು ಪ್ರೋತ್ಸಾಹಿಸದೆ, ಕಲಿಕೆಯನ್ನು ಸಂತಸಭರಿತ, ಸಹಭಾಗಿತ್ವ ಹಾಗೂ ಅರ್ಥ ಪೂರ್ಣವನ್ನಾಗಿಸಬೇಕು.
- ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವುದು ಹಾಗೂ ಸ್ಥಳೀಯ ಅಗತ್ಯಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ಸರಿಹೊಂದಿಸಬೇಕು.
- ಜ್ಞಾನವನ್ನು ಪಠ್ಯಕ್ರಮದಲ್ಲಿ ನೀಡಿರುವಷ್ಟೇ ಎಂದು ಪರಿಗಣಿಸಬಾರದು.
- ಆಟ, ಪ್ರಾಜೆಕ್ಟ್ ಗಳು, ಚರ್ಚೆ, ಸಂಭಾಷಣೆ, ವೀಕ್ಷಣೆ, ಭೇಟಿಗಳು ಹಾಗೂ ಕಲಿಕೆ ಅವರ ಅಭ್ಯಾಸಗಳಲ್ಲಿ ಪ್ರತಿಫಲಿಸುವಂತಹ ವಿದ್ಯಾರ್ಥಿ ಕೇಂದ್ರೀಕೃತ, ಚಟುವಟಿಕೆ ಆಧಾರಿತ ಹಾಗೂ ಸಹಭಾಗಿತ್ವದ ಕಲಿಕಾ ಅನುಭವಗಳನ್ನು ನೀಡುವ ವೇಳಾಪಟ್ಟಿ ಆಯೋಜಿಸಬೇಕು.
- ವಿದ್ಯಾರ್ಥಿಗಳ ಸಾಮಾಜಿಕ ಹಾಗೂ ವೈಯಕ್ತಿಕ ವಾಸ್ತವಗಳ ಜೊತೆಗಿನ ಸಮನ್ವಯದ ಕಲಿಕೆಯಿಂದ ತರಗತಿಯಲ್ಲಿನ ವಿಭಿನ್ನತೆಗಳಿಗೆ ಪ್ರತಿಕ್ರಿಯಿಸಲು ಸಾಧ್ಯವಾಗುತ್ತದೆ.
- ಶಾಂತಿ, ಪ್ರಜಾಸತ್ತಾತ್ಮಕ ವಿಧಾನದ ಬದುಕು, ಸಮಾನತೆ, ನ್ಯಾಯ, ಸ್ವಾತಂತ್ರ್ಯ, ಭ್ರಾತೃತ್ವ, ಜಾತ್ಯತೀತತೆ, ಹಾಗೂ ಸಮಾಜದ ಮರುನಿರ್ಮಾಣಕ್ಕೆ ಉತ್ಸಾಹದಂತಹ ಮೌಲ್ಯಗಳನ್ನು ಉತ್ತೇಜಿಸಬೇಕು.

ಮಧ್ಯಸ್ಥಗಾರರ ನಡುವಿನ ಚರ್ಚೆಗಳ ಮೂಲಕ ಸಂದೇಹಗಳನ್ನು ಪರಿಹರಿಸಿಕೊಂಡು, ಮಾನದಂಡಗಳಿಗೆ ಸಂಬಂಧಿಸಿದ ಒಮ್ಮತಕ್ಕೆ ಬರುವುದರಿಂದ ಈ ಕೆಳಗಿನವುಗಳಿಗೆ ಕಾರಣವಾಗಬಹುದು.

- ಉತ್ತಮ ಬೋಧನೆ ನಿಟ್ಟಿನಲ್ಲಿ ಹೆಚ್ಚಿನ ಸ್ಪಷ್ಟತೆ ಹಾಗೂ ಬದ್ಧತೆ.
- ಉತ್ತಮ ಬೋಧನೆಗೆ ಬೆಂಬಲ ನೀಡುವ ಹಾಗೂ ಸಮನ್ವಯಗೊಳಿಸುವ ಸಂದರ್ಭೋಚಿತ ಪರಿಗಣನೆಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.
- ವೃತ್ತಿಪರ ಅಭ್ಯಾಸಗಳಿಗೆ ಅಗತ್ಯವಾದ ಆಯಾಮಗಳ ಬಗ್ಗೆ ಶಿಕ್ಷಕರಿಗೆ ಪುನಾರವರ್ತನೆ ಹಾಗೂ ಸ್ಪಷ್ಟತೆ ಸಿಗಲಿದೆ. ಹಾಗೆಯೇ ತರಗತಿಗಳನ್ನು ವಿದ್ಯಾರ್ಥಿ -ಕೇಂದ್ರೀಕೃತ ಮಾಡಲು ಶ್ರಮಿಸುವಂತೆ ಒತ್ತಿ ತಿಳಿಸುವ ಜೊತೆಗೆ ಅವರ ಆತ್ಮಾವಲೋಕನಕ್ಕೆ ಮಾರ್ಗದರ್ಶನ ನೀಡಲಿದೆ.
- ಶಿಕ್ಷಕರಿಗೆ, ಉತ್ತಮ ಬೋಧನೆಗೆ ಹಾಗೂ ವೃತ್ತಿ ಬೆಳವಣಿಗೆಗೆ ಶಿಕ್ಷಕರನ್ನು ಸಿದ್ಧಪಡಿಸಲು ನೆರವು ನೀಡುವ ಪರಿಸರ ವ್ಯವಸ್ಥೆಯ ವಿನ್ಯಾಸ ಹಾಗೂ ನಿರ್ವಹಣೆಯನ್ನು ಅರ್ಥೈಸಿಕೊಳ್ಳಲು ನೆರವು ನೀಡಲಿದೆ.

ಶಿಕ್ಷಣ ಹಕ್ಕು ಕಾಯ್ದೆ (ಆರ್ ಟಿಇ), 2009 ಶಿಕ್ಷಕರು ಹಾಗೂ ಬೋಧನೆಯ ಗುಣಮಟ್ಟದ ನಿರೀಕ್ಷೆಗಳನ್ನು ಪ್ರಕಟಿಸಿದ್ದು, ಅದರ ಅನ್ವಯ ಶಾಲೆಯಲ್ಲಿ ಮಕ್ಕಳು ಸಕಾರಾತ್ಮಕ ಶೈಕ್ಷಣಿಕ ಅನುಭವಗಳನ್ನು ಹೊಂದಲಿದ್ದು, ಅದು ಶಿಕ್ಷಣದ ಮೂಲಕ ಸಬಲೀಕರಣಕ್ಕೆ ದಾರಿ ಮಾಡಿಕೊಡಲಿದೆ ಎಂಬ ಭರವಸೆ ನೀಡಿತ್ತು. ಆರ್.ಟಿ.ಐ ಕಾಯಿದೆ 2009ರ ದೃಷ್ಟಿಕೋನದಲ್ಲಿ ಬೋಧನೆ ಹೀಗಿರಬೇಕು (ಸೆಕ್ಷನ್ 29/2, ಆರ್.ಟಿ.ಇ ಕಾಯಿದೆ 2009):

- ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಿರುವ ಮೌಲ್ಯಗಳ ಅನುಸಾರ ಪ್ರಜಾಸತ್ತಾತ್ಮಕ, ನ್ಯಾಯಯುತ ಹಾಗೂ ಶಾಂತಿಯುತ ಸಮಾಜವನ್ನು ಉತ್ತೇಜಿಸಬೇಕು.
- ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ನೆರವು ನೀಡಬೇಕು.
- ವಿದ್ಯಾರ್ಥಿಗಳ ಜ್ಞಾನ, ಸಾಮರ್ಥ್ಯ ಹಾಗೂ ಪ್ರತಿಭೆಯನ್ನು ರೂಪಿಸಬೇಕು.
- ವಿದ್ಯಾರ್ಥಿಗಳ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಬೇಕು.
- ಮಗು ಸ್ನೇಹಿ ಹಾಗೂ ಮಗು ಕೇಂದ್ರೀಕೃತ ವಿಧಾನದಲ್ಲಿ ಚಟುವಟಿಕೆಗಳು, ಅನ್ವೇಷಣೆ ಹಾಗೂ ಶೋಧನೆ ಮೂಲಕ ಕಲಿಕೆ ನಡೆಯುವಂತೆ ಮಾಡಬೇಕು.
- ಸಾಧ್ಯವಾದಷ್ಟು ಮಟ್ಟಿಗೆ ವಿದ್ಯಾರ್ಥಿಯ ಮಾತೃಭಾಷೆಯಲ್ಲಿಯೇ ಕಲಿಕಾಭ್ಯಾಸ ನಡೆಯಬೇಕು.
- ಭಯ, ಆತಂಕ ಹಾಗೂ ಉದ್ವೇಗ ರಹಿತವಾಗಿ ಕಲಿಕೆ ನಡೆಯುವಂತೆ ನೋಡಿಕೊಳ್ಳಬೇಕು ಹಾಗೂ ವಿದ್ಯಾರ್ಥಿಗೆ ಮುಕ್ತವಾಗಿ ಸಂವಹನ ನಡೆಸಲು ನೆರವು ನೀಡಬೇಕು.
- ಮಗುವಿನ ಅರ್ಥೈಸಿಕೊಳ್ಳುವಿಕೆ ಹಾಗೂ ಸಾಮರ್ಥ್ಯ ಎರಡರ ಸಮಗ್ರ ಮೌಲ್ಯಮಾಪನ ನಿರಂತರವಾಗಿ ನಡೆಯಬೇಕು.

ಈ ಮೂಲಕ ಪ್ರತಿ ಮಗು ಘನತೆಯಿಂದ ಜೀವನ ನಡೆಸಲು ಸಾಧ್ಯವಾಗಿಸಬೇಕು.

ಭಾರತದ ಸಂವಿಧಾನವು ಶಿಕ್ಷಣವು ಎಲ್ಲರನ್ನೊಳಗೊಂಡಿರುವಂತೆ ಹಾಗೂ ಅಲ್ಪಸಂಖ್ಯಾತ ಸಮುದಾಯ, ಭಾಷಾ ಹಾಗೂ ಸಾಂಸ್ಕೃತಿಕ ಅಲ್ಪಸಂಖ್ಯಾತ ಗುಂಪುಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಹಾಗೂ ವಿಶೇಷ ಚೇತನ ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡಲು ವಿಶೇಷ ಪ್ರಯತ್ನದ ಅಗತ್ಯವಿರುವ ಬಗ್ಗೆ ಗಮನ ಸೆಳೆದಿದೆ. ಶಿಕ್ಷಣ ಹಕ್ಕು ಹಾಗೂ ಎನ್ ಇಪಿ 2020ರಲ್ಲಿರುವ ಶಿಕ್ಷಣದ ಕುರಿತ ದೃಷ್ಟಿ ಎಲ್ಲರನ್ನೊಳಗೊಂಡ ಶಿಕ್ಷಣ ಹಾಗೂ ಶಾಲೆಯ ಎಲ್ಲ ಹಂತಗಳಲ್ಲಿನ ತರಗತಿಗಳಲ್ಲಿ ವೈವಿಧ್ಯತೆ ತರಲು ಒತ್ತು ನೀಡಿದೆ. ಎನ್ ಇಪಿ 2020 ನಿರ್ದಿಷ್ಟ ಸವಾಲುಗಳ ಕುರಿತು ಗಮನ ಸೆಳೆದಿದ್ದು, ಅದಕ್ಕೆ ಶಿಕ್ಷಕರ ಬೋಧನ ಅಭ್ಯಾಸಗಳು ಪ್ರತಿಕ್ರಿಯೆಯಾಗಬೇಕು: (ಕಾರ್ಯನೀತಿಯ ತತ್ತ್ವಗಳು)

- ಕಲಿಕೆಯನ್ನು ಕಂಠಪಾಠದಿಂದ ಉನ್ನತ ಮಾದರಿಯ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತನಿಖೆ ಹಾಗೂ 21ನೇ ಶತಮಾನದ ಕೌಶಲಗಳಿಗೆ ಬದಲಾಯಿಬೇಕು.

- ಕಲಿಕೆಯನ್ನು ಬಹುಶಿಸ್ತಿನ ಅಥವಾ ಹಲವು ವಿಷಯಗಳಿಗೆ ಸಂಬಂಧಿಸಿದ, ಪ್ರಾಯೋಗಿಕ ಹಾಗೂ ಸ್ವಯಂ ಅನುಭವ ನೀಡುವಂತೆ ಮಾರ್ಪಡಿಸಬೇಕು.
- ಬಹುಭಾಷಾವಾದ.
- ಜ್ಞಾನದ ಸ್ಥಳೀಯ ಪರಂಪರೆಯನ್ನು ಸಂಯೋಜಿಸಲು ಹಾಗೂ ಗೌರವಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವುದು.

## 2.2 ವೃತ್ತಿಪರ ಮಾನದಂಡಗಳ ಅರಿವು

'ಮಾನದಂಡ' ಎಂಬ ಪದವನ್ನು ವಿವಿಧ ಸಂದರ್ಭಗಳಲ್ಲಿ ಹಾಗೂ ರಾಷ್ಟ್ರಗಳಲ್ಲಿ ವಿವಿಧ ಅರ್ಥ ನೀಡುವಂತೆ ವಿವರಿಸಲಾಗಿದೆ. ವೃತ್ತಿಯಲ್ಲಿ ಯಾವುದಕ್ಕೆ ಪ್ರಾಮುಖ್ಯತೆ ನೀಡಲಾಗುತ್ತದೆ ಎಂಬುದರ ಅಭಿವ್ಯಕ್ತಿಯೇ 'ಮಾನದಂಡಗಳು'. ಸಾಮಾನ್ಯವಾಗಿ ಮಾನದಂಡಗಳನ್ನು ಕಲಿಕೆ ಅಥವಾ ಅಭ್ಯಾಸದಲ್ಲಿ ಯಾವುದನ್ನು ಸಾಧಿಸುವುದು ಹೆಚ್ಚು ಸೂಕ್ತ ಎಂಬುದನ್ನು ವಿವರಿಸಲು ಹಾಗೂ ತಿಳಿಸಲು ಬಳಸಲಾಗುತ್ತದೆ. ಕಲಿಕೆ ಸಂದರ್ಭದಲ್ಲಿ ಮಾನದಂಡಗಳನ್ನು ಕಲಿಕೆಯ ಫಲಿತಾಂಶ ಎಂದು ವಿವರಿಸಬಹುದು. ಆದರೆ, ವೃತ್ತಿ ಅಥವಾ ಔದ್ಯೋಗಿಕ ನೆಲೆಯಲ್ಲಿ, ಮಾನದಂಡಗಳನ್ನು ಸಾಮರ್ಥ್ಯದ ಆಯಾಮಗಳೆಂದು ವಿವರಿಸಲಾಗಿದೆ. ಅಂದರೆ ಒಂದು ನಿರ್ದಿಷ್ಟ ವೃತ್ತಿ ಕ್ಷೇತ್ರದಲ್ಲಿ ಒಬ್ಬ ಉದ್ಯೋಗಿಯನ್ನು ಸಮರ್ಥ ಎಂದು ಪರಿಗಣಿಸಲು ಆತ ಏನನ್ನು ತಿಳಿದಿರಬೇಕು ಹಾಗೂ ಏನನ್ನು ಮಾಡಲು ಸಮರ್ಥನಾಗಿರಬೇಕು ಎಂಬುದನ್ನು ತಿಳಿಸುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಮಾನದಂಡಗಳನ್ನು ಒಬ್ಬ ವೃತ್ತಿಪರನ ನಿರ್ವಹಣೆಯನ್ನು ಅಳೆಯಲು ಒಂದು ಸಾಧನ ಅಥವಾ ಗುರುತಾಗಿ ಬಳಸಲಾಗುತ್ತದೆ. ಮಾನದಂಡಗಳು ವಿವರಣೆಗಳಾಗಿದ್ದು, ಅವು ವೃತ್ತಿಯಲ್ಲಿ ಯಾವುದಕ್ಕೆ ಮನ್ನಣೆ ನೀಡಲಾಗುತ್ತದೆ ಎಂಬುದನ್ನು ಪ್ರತಿಬಿಂಬಿಸುತ್ತವೆ. ಅಷ್ಟೇ ಅಲ್ಲ, ಗುಣಮಟ್ಟದ ಬೋಧನೆ ಎಂದರೇನು ಎಂಬುದನ್ನು ತಿಳಿಸುವ ಜೊತೆಗೆ ಗುಣಮಟ್ಟದ ಕಲಿಕೆ ಹೇಗಿರಬೇಕು ಎಂಬ ಅಂತರ್ಗತ ಕಲ್ಪನೆಯನ್ನು ಕೂಡ ಒದಗಿಸುತ್ತವೆ. ವಿವರಣೆಗಳು ಈ ಮೌಲ್ಯಗಳು ಏನನ್ನು ಸೂಚಿಸುತ್ತವೆ, ಶಿಕ್ಷಕರು ಏನನ್ನು ತಿಳಿದಿರಬೇಕು, ಏನನ್ನು ನಂಬಬೇಕು ಹಾಗೂ ಏನನ್ನು ಮಾಡಲು ಸಮರ್ಥರಾಗಿರಬೇಕು ಎಂಬುದನ್ನು ತಿಳಿಸುತ್ತವೆ.

## 2.3 ಶಿಕ್ಷಕರು ಹಾಗೂ ಬೋಧನೆಗೆ ವೃತ್ತಿಪರ ಮಾನದಂಡಗಳ ಪ್ರಾಮುಖ್ಯತೆ

ಉತ್ತಮ, ಅಪೇಕ್ಷಣೆಯ ಬೋಧನೆ, ಶಿಕ್ಷಕರ ಸಾಮರ್ಥ್ಯ ಹಾಗೂ ಗುಣಲಕ್ಷಣಗಳ ವಿವರಣೆ ಹೀಗೆ ಅನೇಕ ಕಾರ್ಯನೀತಿ ದಾಖಲೆಗಳಲ್ಲಿ ಸ್ಪಷ್ಟವಾಗಿ ಅಥವಾ ಸೂಚ್ಯವಾಗಿ ವಿವರಿಸಲಾಗಿದೆ. ಈ ವಿಚಾರಗಳು ಕೇಂದ್ರ ಪ್ರಾಯೋಜಿತ ಶಿಕ್ಷಣ ಸುಧಾರಣೆಯ ಕಾರ್ಯಕ್ರಮವಾದ ಸರ್ವ ಶಿಕ್ಷ ಅಭಿಯಾನದ (ಎಸ್.ಎಸ್.ಎ) ಮೂಲಕ ಸೇವೆಯಲ್ಲಿನ ಶಿಕ್ಷಣ ಹಾಗೂ ತರಬೇತಿಯ ಗುರಿಗಳ ಬಗ್ಗೆ ಮಾಹಿತಿ ನೀಡಿವೆ. ಈ ವಿಚಾರಗಳನ್ನು ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನಲ್ಲಿನ (ಎನ್.ಸಿ.ಎಫ್.ಟಿ.ಇ, 2009) ಮಾರ್ಗಸೂಚಿಗಳಲ್ಲಿ ಕೂಡ ಪ್ರಸ್ತಾಪಿಸಲಾಗಿದೆ. ಹಾಗೆಯೇ ಎನ್.ಇ.ಪಿ- 2020ರ ಶಿಕ್ಷಕರ ಸೇವಾಪೂರ್ವ ಶಿಕ್ಷಣ ಕಾರ್ಯಕ್ರಮದ ಪಠ್ಯಕ್ರಮದ ಚೌಕಟ್ಟಿನ ವಿನ್ಯಾಸ ಹಾಗೂ ಅಭಿವೃದ್ಧಿಯಲ್ಲಿನ ಇತ್ತೀಚಿನ ಆವೃತ್ತಿಯಲ್ಲಿ ಕೂಡ ಈ ವಿಚಾರಗಳನ್ನು ಕಾಣಬಹುದು.

ಹೊಣೆಗಾರಿಕೆ, ನಿರ್ವಹಣೆ, ವೃತ್ತಿಪರ ಅಭಿವೃದ್ಧಿ, ಪ್ರತಿ ಹಂತದಲ್ಲಿನ ವೃತ್ತಿ ಮಾರ್ಗಗಳು ಹಾಗೂ ಮೇಲ್ಮುಖದ ಚಲನೆಯೊಂದಿಗೆ ಸಂಬಂಧ ಹೊಂದಿರುವ ಸೃಷ್ಟಿಸಲ್ಪಟ್ಟಿರುವ ಅಥವಾ ಸ್ಥಾಪಿತವಾಗಿರುವ ವೃತ್ತಿಯನ್ನು ಆಳುವಂತಹ ವೃತ್ತಿಪರ ಮಾನದಂಡಗಳನ್ನು ಎನ್ ಇಪಿ 2020 ಪ್ರಸ್ತಾಪಿಸುತ್ತದೆ. ಶಿಕ್ಷಕರಿಗೆ ಸಂಬಂಧಿಸಿದ ಕೆಲವು ವೃತ್ತಿಪರ ಮಾನದಂಡಗಳು ಈ ಕೆಳಗಿನವುಗಳನ್ನು ಮಾಡಬಲ್ಲವು:

- ಶಿಕ್ಷಕರ ಕಾರ್ಯದ ಸ್ವರೂಪವನ್ನು ವಿವರಿಸುತ್ತವೆ.
- ಕಾರ್ಯನಿರ್ವಹಣೆ ಹಾಗೂ ಸೇವೆಯ ಪರಿಸ್ಥಿತಿಗಳನ್ನು ಸೃಷ್ಟಿಸುವುದು.
- ಶಿಕ್ಷಕರ ಶಿಕ್ಷಣ ಕಾರ್ಯಕ್ರಮವನ್ನು ಮರುರೂಪಿಸುವುದು.

- ಶಿಕ್ಷಕರ ನೋಂದಣಿ
- ಜೀವನಪರ್ಯಂತ ಕಲಿಕೆ ಹಾಗೂ ವೃತ್ತಿ ಅಭಿವೃದ್ಧಿಯನ್ನು ಉತ್ತೇಜಿಸುವುದು.
- ಶಿಕ್ಷಕರ ವಿದ್ಯಾರ್ಹತೆಯಲ್ಲಿ ಸಮಾನತೆ ತರೋದು ಹಾಗೂ ಹೆಚ್ಚಿನ ಶಿಕ್ಷಣ ಪಡೆಯಲು ಅವಕಾಶವನ್ನು ಕೂಡ ಕಲ್ಪಿಸುವುದು.
- ಶಿಕ್ಷಕರ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡುವುದು.
- ಶಿಕ್ಷಕರ ಪ್ರೇರಣೆಗೆ ಬೆಂಬಲ ನೀಡುವುದು.
- ಶಿಕ್ಷಕರ ಹೊಣೆಗಾರಿಕೆ/ಕರ್ತವ್ಯಗಳನ್ನು ಖಚಿತಪಡಿಸುವುದು.

ಮಾನದಂಡಗಳಿಗೆ ನೀಡುವ ಮಹತ್ವ ಅವುಗಳ ನಿರ್ದಿಷ್ಟ ಉಪಯೋಗದ ಆಧಾರದಲ್ಲಿ ಬೇರೆ ಬೇರೆಯಾಗಿರಬಹುದು. ಆದರೂ ಸಾಮಾನ್ಯ ಮಾನದಂಡಗಳು ಶಿಕ್ಷಕರು ಹಾಗೂ ಅಧ್ಯಾಪನಾ ವೃತ್ತಿಗೆ ಸಂಬಂಧಿಸಿದ ವಿವಿಧ ವಿಷಯಗಳಲ್ಲಿನ ನೀತಿಗಳಲ್ಲಿ ಸುಸಂಬದ್ಧತೆಯಿರುವುದನ್ನು ಖಾತ್ರಿಪಡಿಸುತ್ತದೆ.

# 3. ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ)

ಜ್ಞಾನದ ಪರಿಕಲ್ಪನೆಗೆ ಸಂಬಂಧಿಸಿದಂತೆ ಭಾರತದಲ್ಲಿ ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಹೀಗಾಗಿ 21ನೇ ಶತಮಾನದ ಬೇಡಿಕೆಗಳನ್ನು ಈಡೇರಿಸಲು ಶಿಕ್ಷಣ ವ್ಯವಸ್ಥೆಯನ್ನು ನವೀಕರಿಸುವುದು ಅತೀ ಮುಖ್ಯವಾಗಿದೆ. ಭಾರತದ ಎನ್.ಇ.ಪಿ- 2020, 21ನೇ ಶತಮಾನದ ದೇಶದ ಮೊದಲ ಶಿಕ್ಷಣ ನೀತಿಯಾಗಿದೆ ಹಾಗೂ ಇದು ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಅಭಿವೃದ್ಧಿಗೆ ಸಂಬಂಧಿಸಿದ ಅನೇಕ ಅಸಮಾನತೆಗಳನ್ನು ಸರಿಪಡಿಸುವ ಗುರಿ ಹೊಂದಿದೆ. ಶಿಕ್ಷಕರು ನಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುತ್ತಾರೆ ಹಾಗೂ ಆ ಮೂಲಕ ನಮ್ಮ ದೇಶದ ಭವಿಷ್ಯವನ್ನು ಕೂಡ ರೂಪಿಸುತ್ತಾರೆ. ಎಲ್ಲರಿಗೂ ಸರ್ವತೋಮುಖ ಹಾಗೂ ಗುಣಮಟ್ಟದ ಶಿಕ್ಷಣವನ್ನು ನೀಡುವ ಗುರಿಯನ್ನು ಸಾಧಿಸಲು ಎನ್.ಇ.ಪಿ- 2020 ಅಧ್ಯಾಪನಾ ವೃತ್ತಿಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದೆ ಹಾಗೂ ಶಿಕ್ಷಕರನ್ನು ಎಲ್ಲ ಸುಧಾರಣೆಗಳ ಕೇಂದ್ರಬಿಂದುವನ್ನಾಗಿ ಮಾಡಿದೆ. ಶಿಕ್ಷಣ ವೃತ್ತಿಗೆ ಪ್ರವೇಶಿಸಲು ಹಾಗೂ ಶಿಕ್ಷಕರ ಸಬಲೀಕರಣಕ್ಕೆ ಉತ್ತೇಜನ ನೀಡಲು ಹಾಗೂ ಅವರಿಗೆ ತಮ್ಮ ವೃತ್ತಿಯನ್ನು ಎಷ್ಟು ಸಾಧ್ಯವೋ ಅಷ್ಟು ಪರಿಣಾಮಕಾರಿಯಾಗಿ ನಿರ್ವಹಿಸಲು ನೆರವು ನೀಡಲಿದೆ.

## 3.1 ಎನ್. ಪಿ.ಎಸ್. ಟಿ ಪ್ರಸ್ತುತತೆ

"ಸಾಮಾನ್ಯ ಮಾರ್ಗದರ್ಶಿ ಸೂತ್ರಗಳನ್ನು 2022ರೊಳಗೆ ಅಭಿವೃದ್ಧಿಪಡಿಸಲಾಯಿತು. ಇದನ್ನು ಶಿಕ್ಷಕರ ಶಿಕ್ಷಣ ರಾಷ್ಟ್ರೀಯ ಮಂಡಳಿಯ ಮರುರಚಿತ ನೂತನ ಸ್ವರೂಪವಾದ ವೃತ್ತಿಪರ ಮಾನದಂಡಗಳ ನಿಗದಿ ಸಂಸ್ಥೆಯು (ಪಿ.ಎಸ್.ಎಸ್.ಬಿ) ಸಾಮಾನ್ಯ ಶಿಕ್ಷಣ ಮಂಡಳಿ (ಜಿ.ಇ.ಸಿ) ಅಡಿಯಲ್ಲಿ ರೂಪಿಸಿದೆ. ಇದನ್ನು ಎನ್.ಸಿ.ಇ.ಆರ್.ಟಿ, ಎಸ್.ಸಿ.ಇ.ಆರ್.ಟಿ.ಎಸ್, ವಿವಿಧ ಹಂತಗಳು ಹಾಗೂ ಪ್ರದೇಶಗಳಲ್ಲಿನ ಶಿಕ್ಷಕರ ಜೊತೆಗೆ ಸಮಾಲೋಚನೆ ನಡೆಸಿ ರೂಪಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ಸಿದ್ಧಪಡಿಸುವ ಹಾಗೂ ಅಭಿವೃದ್ಧಿಪಡಿಸುವ ಪರಿಣಿತ ಸಂಸ್ಥೆಗಳು, ವೃತ್ತಿಪರ ಶಿಕ್ಷಣ ಕ್ಷೇತ್ರದ ಪರಿಣತ ಸಂಸ್ಥೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆಗೆ ಕೂಡ ಸಮಾಲೋಚನೆ ನಡೆಸಲಾಗಿದೆ. ವಿವಿಧ ಮಟ್ಟಗಳ ಪರಿಣತಿ/ವಿವಿಧ ಹಂತಗಳಲ್ಲಿ ಶಿಕ್ಷಕರ ಪಾತ್ರ ಹಾಗೂ ಆ ಹಂತದಲ್ಲಿ ಅವರಲ್ಲಿರಬೇಕಾದ ಸಾಮರ್ಥ್ಯದ ಕುರಿತ ನಿರೀಕ್ಷೆಗಳನ್ನು ಈ ಮಾನದಂಡಗಳು ಒಳಗೊಂಡಿರುತ್ತವೆ. ಹಾಗೆಯೇ ನಿಯಮಿತವಾಗಿ ನಡೆಸುವ ಪ್ರತಿ ಹಂತದ ಕಾರ್ಯನಿರ್ವಹಣೆಯ ಮೌಲ್ಯಮಾಪನಕ್ಕೆ ಅಗತ್ಯವಾದ ಮಾನದಂಡಗಳನ್ನು ಕೂಡ ಇದು ಒಳಗೊಂಡಿದೆ. ಇನ್ನು ಇದು ಎನ್.ಪಿ.ಎಸ್.ಟಿ ಶಿಕ್ಷಕರ ಸೇವಾಪೂರ್ವ ಶಿಕ್ಷಣ ಕಾರ್ಯಕ್ರಮದ ವಿನ್ಯಾಸದ ಬಗ್ಗೆ ಕೂಡ ಮಾಹಿತಿಯನ್ನು ಒಳಗೊಂಡಿದೆ. ಇದನ್ನು ಆ ಬಳಿಕ ರಾಜ್ಯಗಳು ಕೂಡ ಅಳವಡಿಸಿಕೊಳ್ಳಬಹುದಾಗಿದೆ ಹಾಗೂ ಸೇವಾ ಅವಧಿ, ವೃತ್ತಿಪರ ಅಭಿವೃದ್ಧಿಗೆ ಪ್ರಯತ್ನಗಳು, ವೇತನ ಹೆಚ್ಚಳಗಳು, ಪದೋನ್ನತಿಗಳು ಹಾಗೂ ಇತರ ಮನ್ನಣೆಗಳು ಸೇರಿದಂತೆ ಅಧ್ಯಾಪನಾ ವೃತ್ತಿ ನಿರ್ವಹಣೆಯ ಎಲ್ಲ ಅಂಶಗಳನ್ನು ಇದು ನಿರ್ಧರಿಸುತ್ತದೆ. ಇದರಡಿಯಲ್ಲಿ ಸೇವೆಯ ಅವಧಿ ಅಥವಾ ಹಿರಿತನದ ಆಧಾರವಾಗಿ ಪದೋನ್ನತಿ ಹಾಗೂ ವೇತನ ಹೆಚ್ಚಳ ನಡೆಯುವುದಿಲ್ಲ. ಬದಲಿಗೆ ಮೌಲ್ಯಮಾಪನಗಳ ಆಧಾರದಲ್ಲಿಯೇ ನಡೆಯಲಿದೆ. ವೃತ್ತಿಪರ ಮಾನದಂಡಗಳನ್ನು 2030ರಲ್ಲಿ ಪರಿಶೀಲಿಸಲಾಗುವುದು ಹಾಗೂ ಪರಿಷ್ಕರಿಸಲಾಗುವುದು. ಇದಾದ ಬಳಿಕ ಪ್ರತಿ 10 ವರ್ಷಗಳಿಗೊಮ್ಮೆ ವ್ಯವಸ್ಥೆಯ ಫಲದಾಯಕತ್ವವನ್ನು ಕಟ್ಟುನಿಟ್ಟಿನ ಪ್ರಾಯೋಗಿಕ ವಿಶ್ಲೇಷಣೆಗೊಳಪಡಿಸಿ, ಅದರ ಆಧಾರದಲ್ಲಿ ಪರಿಷ್ಕರಿಸಲಾಗುವುದು" [ಪ್ಯಾರಾ 5.20, ಎನ್.ಇ.ಪಿ 2020].




ಚಿತ್ರ 1. ಶಿಕ್ಷಕನ ಸಿದ್ಧತೆಯ ವಿವರಣೆ

**3.1.1 ಶಿಕ್ಷಕನ ಶಿಕ್ಷಣ:** ಎನ್.ಇ.ಪಿ- 2020ರಲ್ಲಿ ನಮೂದಿಸಿರುವಂತೆ ಶಿಕ್ಷಕನ ಸೇವಾಪೂರ್ವದ 4 ವರ್ಷ, 2 ವರ್ಷ ಹಾಗೂ 1 ವರ್ಷದ ಬಿ.ಎಡ್ ಶಿಕ್ಷಣ ಕಾರ್ಯಕ್ರಮಗಳ ವಿನ್ಯಾಸದ ಬಗ್ಗೆ ಎನ್.ಪಿ.ಎಸ್.ಟಿ ಮಾಹಿತಿ ನೀಡುತ್ತದೆ.

**3.1.2 ಶಿಕ್ಷಕ ಪಾತ್ರ ನಿರ್ವಹಣೆ:** ವಿವಿಧ ಮಟ್ಟಗಳ ನೈಪುಣ್ಯತೆ/ವಿವಿಧ ಹಂತಗಳಲ್ಲಿ ಶಿಕ್ಷಕನ ಪಾತ್ರ ಹಾಗೂ ಆ ಹಂತಕ್ಕೆ ಅಗತ್ಯವಾದ ಸಾಮರ್ಥ್ಯದ ಕುರಿತ ನಿರೀಕ್ಷೆಗಳನ್ನು ಮಾನದಂಡಗಳು ಹೊಂದಿವೆ. ಪ್ರತಿ ಹಂತಕ್ಕೂ ಕಾರ್ಯನಿರ್ವಹಣೆಯ ಮೌಲ್ಯಮಾಪನಕ್ಕೆ ಎನ್.ಪಿ.ಎಸ್.ಟಿ ಮಾನದಂಡಗಳನ್ನು ಒಳಗೊಂಡಿದೆ.

**3.1.3 ಶಿಕ್ಷಕನ ವೃತ್ತಿಜೀವನ ನಿರ್ವಹಣೆ:** ಸೇವಾ ಅವಧಿ, ವೃತ್ತಿಪರ ಅಭಿವೃದ್ಧಿಗೆ ಪ್ರಯತ್ನಗಳು, ವೇತನ ಹೆಚ್ಚಳಗಳು, ಪದೋನ್ನತಿಗಳು ಹಾಗೂ ಇತರ ಮನ್ನಣೆಗಳು ಸೇರಿದಂತೆ ಅಧ್ಯಾಪನಾ ವೃತ್ತಿಜೀವನ ನಿರ್ವಹಣೆಯ ಎಲ್ಲ ಅಂಶಗಳನ್ನು ಇದು ಒಳಗೊಂಡಿದೆ.

**3.1.4 ಶಿಕ್ಷಕ ವೃತ್ತಿಯ ಪ್ರಗತಿ:** ಸ್ವ-ಪ್ರಗತಿ ಹಾಗೂ ಅವರ ವೃತ್ತಿಯಲ್ಲಿನ ನೂತನ ಆವಿಷ್ಕಾರಗಳು ಹಾಗೂ ಬೆಳವಣಿಗೆಗಳನ್ನು ಕಲಿಯಲು ಶಿಕ್ಷಕರಿಗೆ ನಿರಂತರ ಅವಕಾಶಗಳನ್ನು ನೀಡಲಾಗುತ್ತದೆ.

ಎನ್.ಇ.ಪಿ- 2020ರ ಅನ್ವಯ ಶಿಕ್ಷಕರ ತಯಾರಿ ಒಂದು ಚಟುವಟಿಕೆ ಆಗಿದ್ದು, ಅದು ಬಹುಶಿಸ್ತಿನ ಆಯಾಮಗಳು ಹಾಗೂ ಜ್ಞಾನವನ್ನು ಹೊಂದಿರಬೇಕಾದ ಅಗತ್ಯವಿದೆ. ಹಾಗೆಯೇ ಪ್ರವೃತ್ತಿಗಳು ಹಾಗೂ ಮೌಲ್ಯಗಳನ್ನು ರೂಪಿಸುವ ಹಾಗೂ ಅತ್ಯುತ್ತಮ ಮಾರ್ಗದರ್ಶಕರ ಅಡಿಯಲ್ಲಿ ಅಭ್ಯಾಸವನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಕೂಡ ಹೊಂದಿದೆ. ಶಿಕ್ಷಕರು ಶಿಕ್ಷಣ ಹಾಗೂ ಬೋಧನಶಾಸ್ತ್ರದಲ್ಲಿನ ನೂತನ ವಿದ್ಯಮಾನಗಳ ಬಗ್ಗೆ ಪೂರ್ಣ ಮಾಹಿತಿ ಹೊಂದಿರುವ ಜೊತೆಗೆ ಭಾರತೀಯ ಮೌಲ್ಯಗಳು, ಭಾಷೆಗಳು, ಜ್ಞಾನ, ನೈತಿಕತೆ ಹಾಗೂ ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರಬೇಕು ಎಂದು ಇದು ಬಯಸುತ್ತದೆ. ಎನ್.ಪಿ.ಎಸ್.ಟಿ.ಯು ಯಾವುದು ಶಿಕ್ಷಣದ ಗುಣಮಟ್ಟವನ್ನು ರೂಪಿಸುತ್ತದೆ ಹಾಗೂ ಭಾರತದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಫಲಿತಾಂಶವನ್ನು ಸುಧಾರಿಸಲು ಯಾವುದು ಅಗತ್ಯ ಎಂಬುದನ್ನು ತಿಳಿಸುವ ಸಾರ್ವಜನಿಕ ವಿವರಣೆಯಾಗಿದೆ. ಈ ಮಾನದಂಡಗಳು ಮಾರ್ಗದರ್ಶಿ ವಿವರಣೆಗಳ ಒಂದು ಸಮೂಹವಾಗಿದ್ದು, ಶಿಕ್ಷಕ ವೃತ್ತಿಯ ವಿವಿಧ ಹಂತಗಳಲ್ಲಿ ಅಪೇಕ್ಷಿಸುವ ವಿವಿಧ ಮಟ್ಟದ ಪರಿಣತಿಯನ್ನು ಹೊಂದುವಲ್ಲಿ ಶಿಕ್ಷಕನ ಪಾತ್ರದ ಕುರಿತ ನಿರೀಕ್ಷೆಗಳನ್ನು ವಿವರಿಸುತ್ತದೆ. ಇನ್ನು ಈ ಮಾನದಂಡಗಳು ಪರಿಣಾಮಕಾರಿ ಬೋಧನೆ ಹೇಗಿರುತ್ತದೆ ಎಂಬುದನ್ನು ಕೂಡ ವಿವರಿಸುತ್ತವೆ. ಅಷ್ಟೇ ಅಲ್ಲದೆ,

21ನೇ ಶತಮಾನದಲ್ಲಿ ಅಧ್ಯಾಪನಾ ವೃತ್ತಿಯ ಪ್ರತಿ ಹಂತದಲ್ಲಿ ಒಬ್ಬ ಶಿಕ್ಷಕನಾಗಿ ಕಾರ್ಯನಿರ್ವಹಿಸಲು ಯಾವೆಲ್ಲ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ಕೂಡ ವಿವರಿಸುತ್ತದೆ.

## 3.2 ಶಿಕ್ಷಕರಿಗೆ ವೃತ್ತಿನಿರತ ಮಾನದಂಡಗಳು

ಉತ್ತಮ ಶಿಕ್ಷಕರು ಹಾಗೂ ಉತ್ತಮ ಬೋಧನೆಗೆ ಸಂಬಂಧಿಸಿದ ಗುಣಲಕ್ಷಣಗಳನ್ನು ಶಿಕ್ಷಕರಿಗೆ ವೃತ್ತಿನಿರತ ಮಾನದಂಡಗಳ ಚೌಕಟ್ಟಿನಲ್ಲಿ ಸ್ಪಷ್ಟವಾಗಿ ಅಥವಾ ಸೂಚ್ಯವಾಗಿ ವಿವರಿಸಲಾಗಿದೆ. ಇದರ ಜೊತೆಗೆ ಇದು ಬೋಧನೆ ಹಾಗೂ ಭಾರತದಲ್ಲಿ ಶಿಕ್ಷಕನನ್ನು ರೂಪಿಸುವ ವಿಧಾನದ ಮೇಲೆ ಸಂಶೋಧನೆ ನಡೆಸಲು ಕೂಡ ಗಮನ ಕೇಂದ್ರೀಕರಿಸಿದೆ. ಹಾಗೆ ಇದೇ ಸಮಯದಲ್ಲಿ ಶಿಕ್ಷಕರು ಹಾಗೂ ಬೋಧನೆ ಗುಣಮಟ್ಟವನ್ನು ವಿವರಿಸುವ ಹಾಗೂ ಮೌಲ್ಯಮಾಪನ ಮಾಡುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಕೂಡ ರೂಪಿಸಿದೆ.

**ಎ) ಸಾಮರ್ಥ್ಯ**

ಶಿಕ್ಷಕರಿಗೆ ವೃತ್ತಿಪರ ಮಾನದಂಡಗಳನ್ನು ರೂಪಿಸುವಾಗ ಶಿಕ್ಷಣ ವೃತ್ತಿಗೆ ಅಗತ್ಯವೆಂದು ಗುರುತಿಸಲಾದ ಸಾಮರ್ಥ್ಯಕ್ಕೆ ಸಂಬಂಧಿಸಿದ ಒಂದು ಸಾಮಾನ್ಯ ಮೂಲ ಮಾನದಂಡಗಳ ರಾಶಿಯ ಕಡೆಗೆ ಗಮನ ಹರಿಸಲಾಗಿತ್ತು. ಸಾಮರ್ಥ್ಯ ಎನ್ನುವುದು ಜ್ಞಾನ, ಕೌಶಲಗಳ ಅರಿವು, ಮೌಲ್ಯಗಳು, ವರ್ತನೆಗಳು ಹಾಗೂ ಹಂಬಲದ ಒಂದು ಸಮ್ಮಿಶ್ರಣವಾಗಿದ್ದು, ಒಂದು ನಿರ್ದಿಷ್ಟ ಕ್ಷೇತ್ರದಲ್ಲಿ ವ್ಯಕ್ತಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ನೆರವು ನೀಡುತ್ತದೆ.

**ಬಿ) ವಲಯ**

ಶಿಕ್ಷಕರ ಜ್ಞಾನ ಹಾಗೂ ಬೋಧನಾ ಅಭ್ಯಾಸ (ಬೋಧನೆ ಮುನ್ನ, ಬೋಧನೆ ಸಮಯದಲ್ಲಿ ಹಾಗೂ ಬೋಧನೆ ಬಳಿಕ) ಒಂದಕ್ಕೊಂದು ಬೆಸೆದುಕೊಂಡಿರುವ ವಲಯಗಳಾಗಿವೆ. ಹಾಗೆಯೇ ಇವೆರಡೂ ನಂಬಿಕೆಗಳು, ಕೌಶಲಗಳು, ಸಂವಹನ ಸಾಮರ್ಥ್ಯಗಳು, ವೃತ್ತಿಪರ ಗುರುತು, ನೈತಿಕತೆ, ಮೌಲ್ಯಗಳು ಹಾಗೂ ಮನೋಧರ್ಮದ ಜೊತೆಗೆ ಸಂಬಂಧ ಹೊಂದಿವೆ. ಈ ಕೆಳಗಿನ ಮೂರು ವಲಯಗಳನ್ನು ಮಾನದಂಡಗಳಾಗಿ ಗುರುತಿಸಲಾಗಿದೆ.

1.ಮೂಲ ಮೌಲ್ಯಗಳು ಹಾಗೂ ನೈತಿಕತೆ

2.ಜ್ಞಾನ ಹಾಗೂ ಅಭ್ಯಾಸ

3.ವೃತ್ತಿಜೀವನದ ಪ್ರಗತಿ ಹಾಗೂ ಬೆಳವಣಿಗೆ

**ಸಿ) ಶಿಕ್ಷಕರ ಪ್ರೊಫೈಲ್ (ವ್ಯಕ್ತಿಚಿತ್ರ)**

ಬೋಧನೆಯಲ್ಲಿ ಪರಿಣತಿಯ ಪ್ರಗತಿ ಹಾಗೂ ಅಭಿವೃದ್ಧಿಯ ಅಗತ್ಯವಿದೆ ಎಂಬ ಆಲೋಚನೆ ಉತ್ತಮ ಬೋಧನಾ ವಾತಾವರಣದ ಬೆಳವಣಿಗೆಯ ವಿಧಾನ ಹಾಗೂ ಮುನ್ನಡೆ ಕಡೆಗೆ ಗಮನ ಸೆಳೆಯುತ್ತದೆ. ಇದು ಪ್ರಗತಿ ಹಾಗೂ ಬೆಳವಣಿಗೆಯ ಜೊತೆಗೆ ವೃತ್ತಿನಿರತರು ತಲುಪಬಹುದಾದ ಉನ್ನತ ಮಾನದಂಡಗಳನ್ನು ಗುರುತಿಸಲು ಮೂಲವಾಗುವ ಹಂಬಲ ಹಾಗೂ ಮಾರ್ಗ ಎರಡನ್ನೂ ಹೊಂದಿರಬೇಕು. ಶಾಲಾ ವಿವಿಧ ಹಂತಗಳುದ್ದಕ್ಕೂ ಹಾಗೂ ವಿಷಯ ಬೋಧನೆ ವಲಯದಲ್ಲಿ ಬೋಧನಾ ಸಾಮರ್ಥ್ಯಗಳು ಹಾಗೂ ಎಲ್ಲ ವಲಯಗಳಿಗೂ ಅನ್ವಯವಾಗುವಂತೆ ಈ ಕೆಳಗಿನ ಮೂರು ಹಂತಗಳನ್ನು ಎನ್.ಪಿ.ಎಸ್.ಟಿ.ಗಾಗಿ ಪ್ರಸ್ತಾಪಿಸಲಾಗಿದೆ. ಶಿಕ್ಷಕರು ಏನನ್ನು ಮಾಡಲು ಸಮರ್ಥರಾಗಿದ್ದಾರೆ ಹಾಗೂ ಯಾವ ವಲಯಗಳಲ್ಲಿ ಅವರು ಇನ್ನೂ ಹೆಚ್ಚಿನ ಅಭಿವೃದ್ಧಿ ಸಾಧಿಸಬಹುದು ಎಂಬುದರ ಬಗ್ಗೆ ಅಭಿಪ್ರಾಯ ರೂಪಿಸಿಕೊಳ್ಳಲು ಈ ಮಟ್ಟಗಳು ಹಾಗೂ ಅವುಗಳ ವಿವರಣೆಗಳನ್ನು ಬಳಸಿಕೊಳ್ಳಬಹುದು. ಈ ಕೆಳಗಿನ ಹಂತಗಳಲ್ಲಿ ಶಿಕ್ಷಕರು ಪಡೆದ ಸಾಮರ್ಥ್ಯಗಳ ಆಧಾರದಲ್ಲಿ ಅವರನ್ನು ನೇಮಕ ಮಾಡಲು ಕೂಡ ಇದು ನೆರವು ನೀಡುತ್ತದೆ.

1. ಪ್ರವೀಣ

2. ಪ್ರೌಢ
3. ತಜ್ಞ

ಅತ್ಯುನ್ನತ ಗುಣಮಟ್ಟದ ಶಿಕ್ಷಕರನ್ನು ಸಿದ್ಧಪಡಿಸುವ ಹಾಗೂ ತಯಾರಿಸುವ ಕಾರ್ಯದಲ್ಲಿ ತೊಡಗಿರುವ ಎಲ್ಲ ಮಧ್ಯಸ್ಥಗಾರರಿಗೆ ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆಯಾಗಿದೆ. ಇದು ಶಿಕ್ಷಕರಾಗಬೇಕೆಂಬ ನಿರ್ಧಾರ ಕೈಗೊಂಡ ಕ್ಷಣದಿಂದ ಹಿಡಿದು ಅಧ್ಯಾಪನಾ ಪಯಣವನ್ನು ಪೂರ್ಣಗೊಳಿಸುವ ತನಕ ಶಿಕ್ಷಕರಿಗೆ ಸ್ಪಷ್ಟ ಕೌಶಲದ ಮಾರ್ಗವನ್ನು ಒದಗಿಸುತ್ತದೆ. ಈ ದಾಖಲೆ ಶಿಕ್ಷಕರ ತರಬೇತಿ ಸಂಸ್ಥೆಗಳಿಗೆ ಗುಣಮಟ್ಟದ ಶಿಕ್ಷಕರನ್ನು ಸಿದ್ಧಪಡಿಸಲು ಮಾರ್ಗದರ್ಶನ ನೀಡುತ್ತದೆ. ಅಧ್ಯಾಪನಾ ವೃತ್ತಿಯಲ್ಲಿ ನಿರ್ದಿಷ್ಟ ಹಂತ ತಲುಪಲು ಮಾನದಂಡಗಳನ್ನು ಪೂರ್ವಾಪೇಕ್ಷಿತ ಸಾಮರ್ಥ್ಯಗಳೆಂದು ವಿವರಿಸಲಾಗಿದೆ ಹಾಗೂ ವಿಂಗಡಿಸಲಾಗಿದೆ. ವೃತ್ತಿ ಜೀವನದಲ್ಲಿ ನಿಗದಿತ ಗುರಿಯ ಹಂತ ತಲುಪಲು ಅಗತ್ಯವಾದ ಕೌಶಲಗಳನ್ನು ಪಡೆದುಕೊಳ್ಳುವ ಮೂಲಕ ಹಾಗೂ ತನ್ನ ಸಾಮರ್ಥ್ಯದ ಬಗ್ಗೆ ಸಾಕ್ಷಿಗಳನ್ನು ಹಂಚಿಕೊಳ್ಳುವ ಮೂಲಕ ಒಬ್ಬ ಶಿಕ್ಷಕ ಪೂರ್ವಾಪೇಕ್ಷಿತ ಮಾನದಂಡಗಳನ್ನು ಪೂರೈಸಬಲ್ಲ. ಒಂದು ಹಂತದ ಮಾನದಂಡಗಳನ್ನು ತಲುಪಿದ ಬಳಿಕ ಒಬ್ಬ ಶಿಕ್ಷಕನಿಗೆ ಆ ಬಗ್ಗೆ ಪ್ರಮಾಣೀಕರಣ ಸಿಗುತ್ತದೆ ಹಾಗೂ ಅಧಿಕೃತವಾಗಿ ಆ ಹಂತಕ್ಕೆ ಆತ ಮುನ್ನಡೆ ಸಾಧಿಸುತ್ತಾನೆ. ಆ ನಂತರ ಶಿಕ್ಷಕರ ತಾನು ಗಳಿಸಿರುವ ಸಾಮರ್ಥ್ಯವನ್ನು ಬೋಧನಾ ಕ್ರಮದಲ್ಲಿ ಅಳವಡಿಸಿಕೊಳ್ಳಬಹುದು ಹಾಗೂ ವೃತ್ತಿಜೀವನದ ಮುಂದಿನ ಹಂತಕ್ಕೆ ಅಗತ್ಯವಾದ ಸಾಮರ್ಥ್ಯವನ್ನು ಗಳಿಸುವ ನಿಟ್ಟಿನಲ್ಲಿ ಕಾರ್ಯನಿರತನಾಗಬಹುದು.

ಯಶಸ್ವಿ ಬೋಧನಾ ವೃತ್ತಿಗೆ ಸಿದ್ಧತೆ ನಡೆಸುವ ಪ್ರಯಾಣ ಶಿಕ್ಷಕರ ಶೈಕ್ಷಣಿಕ ಕಾರ್ಯಕ್ರಮಕ್ಕೆ (ಟೀಚರ್ ಎಜುಕೇಷನ್ ಪ್ರೋಗ್ರಾಮ್-ಡಿ.ಇ.ಪಿ) ವ್ಯಕ್ತಿಯೊಬ್ಬನ ಪ್ರವೇಶವಾದ ಮೊದಲ ದಿನದಿಂದಲೇ ಪ್ರಾರಂಭವಾಗುತ್ತದೆ. ಅಧ್ಯಾಪನಾ ವೃತ್ತಿಗೆ ಸಿದ್ಧತೆ ನಡೆಸುತ್ತಿರುವ ಪ್ರಾರಂಭಿಕ ಹಂತದಲ್ಲಿ ಒಬ್ಬ ವಿದ್ಯಾರ್ಥಿ ಶಿಕ್ಷಕ ಯಾವ ಸಾಮರ್ಥ್ಯವನ್ನು ಗಳಿಸಬೇಕು ಎಂಬುದನ್ನು ಎನ್.ಪಿ.ಎಸ್.ಟಿ ತೋರಿಸುತ್ತದೆ. ಹೀಗಾಗಿ ಯಾವಾಗ ಒಬ್ಬ ಭವಿಷ್ಯದ ಶಿಕ್ಷಕ ಬೋಧನಾ ವೃತ್ತಿಗೆ ಸೇರಲು ನಿರ್ಧರಿಸುತ್ತಾನೋ ಆಗ ಆತನನ್ನು ಎನ್.ಸಿ.ಟಿ.ಇ ಮಾನ್ಯತೆ ಪಡೆದಿರುವ ಟಿ.ಇ.ಐ. ಗಳಲ್ಲಿ (ಟೀಚರ್ ಎಜುಕೇಷನ್ ಇನ್ಸ್'ಟಿಟ್ಯೂಟ್ಸ್) ದಾಖಲಿಸಬೇಕು. ಈ ಶಿಕ್ಷಣ ಸಂಸ್ಥೆ ಅಧ್ಯಾಪನಾ ವೃತ್ತಿಯ ಮೊದಲ ಹಂತವನ್ನು ತಲುಪಲು ಅಗತ್ಯವಾದ ಸಾಮರ್ಥ್ಯವನ್ನು ಆಧರಿಸಿ ಸಿದ್ಧಪಡಿಸಿರುವ ಪಠ್ಯಕ್ರಮದಂತೆ ವಿದ್ಯಾರ್ಥಿ ಶಿಕ್ಷಕನನ್ನು ತರಬೇತುಗೊಳಿಸುತ್ತದೆ. ಪಠ್ಯಕ್ರಮ ರೂಪಿಸುವುದು ಹಾಗೂ ಕಾರ್ಯಕ್ರಮದ ಅನುಷ್ಠಾನದಲ್ಲಿ ಶಿಕ್ಷಕ ಸೇವಾಪೂರ್ವ ಶಿಕ್ಷಣ ಸಂಸ್ಥೆಗಳು ಈ ಮಾನದಂಡಗಳಲ್ಲಿ ಕನಿಷ್ಠ ಮಾನದಂಡಗಳನ್ನು ಅನುಸರಿಸಬೇಕು. ತಮ್ಮ ಆರಂಭಿಕ ಶಿಕ್ಷಕ ತರಬೇತಿಯಲ್ಲಿ ಸುಸ್ಥಿರ ಅಭ್ಯಾಸ ಹಾಗೂ ಮಾರ್ಗದರ್ಶಕರ ಬೆಂಬಲದ ಮೂಲಕ ವಿದ್ಯಾರ್ಥಿ ಶಿಕ್ಷಕ ಬೋಧನೆ ಹಾಗೂ ಕಲಿಕೆ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿಸಲು ನೆರವು ನೀಡುವ ಜ್ಞಾನ, ಕೌಶಲಗಳು, ಮೌಲ್ಯಗಳು ಹಾಗೂ ವರ್ತನೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾನೆ.

ವಿದ್ಯಾರ್ಥಿ ಶಿಕ್ಷಕ ಅಧ್ಯಾಪನಾ ವೃತ್ತಿಗೆ ಪ್ರವೇಶಿಸಲು ಶಾಲೆಯ ಪ್ರತಿ ಹಂತಕ್ಕೂ ಶಿಕ್ಷಕ ಅರ್ಹತಾ ಪರೀಕ್ಷೆ (ಟೀಚರ್ ಎಜುಕೇಷನ್ ಟೆಸ್ಟ್-ಟಿ.ಇ.ಟಿ) ಎದುರಿಸುವುದು ಅತ್ಯಗತ್ಯ ಎಂದು ಎನ್.ಇ.ಪಿ- 2020 ನಿರ್ದೇಶಿಸಿದೆ. ಹೀಗಾಗಿ ಟಿ.ಇ.ಟಿ.ಯು ಅವರ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ, ಅರ್ಹ ಅಭ್ಯರ್ಥಿಗಳನ್ನು ಗುರುತಿಸುತ್ತದೆ ಹಾಗೂ ಅವರ ಟಿ.ಇ.ಟಿ ಪ್ರೊಫೈಲ್ ಅವರ ಸಾಮರ್ಥ್ಯದ ಪರಿಚಯವನ್ನು ನೀಡುತ್ತದೆ. ಒಮ್ಮೆ ಹೊಸ ಶಿಕ್ಷಕರು ಬೋಧನಾ ವೃತ್ತಿಯಲ್ಲಿ ನೆಲೆ ಕಂಡುಕೊಂಡ ಬಳಿಕ ಆತ/ಆಕೆಗೆ ಎನ್.ಪಿ.ಎಸ್.ಟಿ ಆಧಾರಿತ ವೃತ್ತಿ ಹಂತಕ್ಕೆ ಸಿದ್ಧತೆ ನಡೆಸಲು ಮಾರ್ಗದರ್ಶನ ನೀಡಲಾಗುತ್ತದೆ. ಕಾರ್ಯನಿರ್ವಹಣೆ ಸೂಚ್ಯಂಕದ (ಪರ್ಫಾರ್ಮೆನ್ಸ್ ಇಂಡೆಕ್ಸ್- ಪಿಐ) ಮೂಲಕ ಶಿಕ್ಷಕನ ಸಾಮರ್ಥ್ಯವನ್ನು ಅಳೆಯಲಾಗುತ್ತದೆ. ವೃತ್ತಿಗೆ ಅಗತ್ಯವಾದ ಮಾನದಂಡಗಳನ್ನು ತಲುಪಲು ಎಷ್ಟರ ಮಟ್ಟಿಗೆ ಸಮರ್ಥರು ಎಂಬುದನ್ನು ಪಿಐ ಸೂಚಿಸುತ್ತದೆ. ಹಂತ ಹಂತವಾಗಿ ಸಾಮರ್ಥ್ಯವನ್ನು ಗಳಿಸಿಕೊಳ್ಳಲು ನಿಗದಿಪಡಿಸಿರುವ ಕನಿಷ್ಠ ಸಮಯಾವಧಿ ಐದು ವರ್ಷಗಳಾಗಿವೆ. ಶಿಕ್ಷಕನ ಗುಣಮಟ್ಟ ಭರವಸೆ ಹಾಗೂ ಕಾರ್ಯನಿರ್ವಹಣೆ ಸೂಚ್ಯಂಕಗಳನ್ನು ಮಾರ್ಗದರ್ಶಿ ರಾಷ್ಟ್ರೀಯ ಅಭಿಯಾನದ ಕಾರ್ಯಕ್ರಮಕ್ಕೆ ಜೋಡಿಸಲಾಗುತ್ತದೆ ಹಾಗೂ ಅತ್ಯುತ್ತಮ ನಿರ್ವಹಣೆ ತೋರಿದ ಶಿಕ್ಷಕರನ್ನು ಮಾರ್ಗದರ್ಶಿಗಳ

ಗುಂಪಿಗೆ ಸೇರಿಸಿಕೊಳ್ಳುವ ಸಾಧ್ಯತೆಯಿದೆ. ಇದು ವಿಭಿನ್ನ ವ್ಯಕ್ತಿಗಳ ನಡುವೆ ಪರಸ್ಪರ ಕಲಿಕೆಗೆ ಅವಕಾಶ ಕಲ್ಪಿಸುವ ಮೂಲಕ ಅವರ ವೃತ್ತಿ ಬದುಕಿನ ಅಭಿವೃದ್ಧಿಗೆ ನೆರವು ನೀಡುತ್ತದೆ.

ಗಳಿಸಿರುವ ಸಾಮರ್ಥ್ಯಗಳ ಆಧಾರದಲ್ಲಿ ಮೂರು ವಿವಿಧ ಮಟ್ಟದ ಶಿಕ್ಷಕರು ಈ ಕೆಳಗಿನಂತಿದ್ದಾರೆ:

**1. ನುರಿತ ಶಿಕ್ಷಕ (ಪ್ರವೀಣ ಶಿಕ್ಷಕ):**

ಈ ವೃತ್ತಿ ಹಂತದಲ್ಲಿ ಒಬ್ಬ ಶಿಕ್ಷಕ ಬೋಧನೆ ಹಾಗೂ ಕಲಿಕೆಗೆ ಸಂಬಂಧಿಸಿದ ಕೌಶಲಗಳನ್ನು ಪ್ರದರ್ಶಿಸಲು ವೃತ್ತಿಪರವಾಗಿ ಸ್ವತಂತ್ರನಾಗಿರಬೇಕೆಂದು ನಿರೀಕ್ಷಿಸಲಾಗುತ್ತದೆ. ನುರಿತ ಶಿಕ್ಷಕನಿಗೆ ವೃತ್ತಿ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಅಭ್ಯಾಸಗಳ ಮೂಲಕ ಗಳಿಸಿದ ಜ್ಞಾನವನ್ನು ಬಲಪಡಿಸಿಕೊಳ್ಳಲು ಶಾಲೆಯೊಳಗಿನ ಮಾರ್ಗದರ್ಶಕರಿಂದ ನೆರವು ಸಿಗುವ ಸಾಧ್ಯತೆಯಿದೆ. ಬೋಧನಾ ಕ್ರಮ ಸುಧಾರಣೆಗೆ ಶಾಲೆಯೊಳಗಿನ ಮಾರ್ಗದರ್ಶಕರು ನುರಿತ ಶಿಕ್ಷಕರಿಗೆ ನೆರವು ನೀಡಬಹುದು. ತಾನು ಗಳಿಸಿಕೊಂಡಿರುವ ಕೌಶಲಗಳನ್ನು ಅನುಷ್ಠಾನಗೊಳಿಸುವಲ್ಲಿ ನುರಿತ ಶಿಕ್ಷಕ ಒಮ್ಮೆಗೆ ಅತ್ಯುತ್ತಮ ಕಾರ್ಯನಿರ್ವಹಣಾ ಮಟ್ಟವನ್ನು ತಲುಪಿದ ಬಳಿಕ ಆತ ಅಥವಾ ಆಕೆಯನ್ನು ಮುಂದಿನ ವೃತ್ತಿ ಹಂತಕ್ಕೆ, ಅಂದರೆ ಮುಂದುವರಿದ ಶಿಕ್ಷಕನ ಹಂತಕ್ಕೆ ಸಿದ್ಧತೆ ನಡೆಸಲು ಮಾರ್ಗದರ್ಶನ ನೀಡಲಾಗುವುದು. ಮುಂದಿನ ಹಂತದ ವೃತ್ತಿಪರ ಅಭಿವೃದ್ಧಿಗೆ ಶಿಕ್ಷಕನಿಗೆ ಅವಕಾಶಗಳನ್ನು ನೀಡಲಾಗುವುದು ಹಾಗೂ ಕೌಶಲಗಳನ್ನು ಗಳಿಸಿಕೊಳ್ಳಲು ಹಾಗೂ ಅದೇ ಶಾಲೆಯ ಮಟ್ಟದಲ್ಲಿ ಮುಂದಿನ ವೃತ್ತಿ ಹಂತಕ್ಕೆ ಅಗತ್ಯವಾದ ಪುರಾವೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಮಾರ್ಗದರ್ಶನ ನೀಡಲಾಗುತ್ತದೆ. ಒಮ್ಮೆ ಶಿಕ್ಷಕ ಮುಂದಿನ ವೃತ್ತಿ ಹಂತಕ್ಕೆ ಸಿದ್ಧಗೊಂಡರೆ, ಆತ/ಆಕೆಗೆ ಅವರ ಕೌಶಲಗಳ ಮೌಲ್ಯಮಾಪನ ಹಾಗೂ ಮುಂದಿನ ಹಂತದ ಶಿಕ್ಷಕ ಹುದ್ದೆ ಪಡೆಯಲು ಮಾರ್ಗದರ್ಶನ ಮಾಡಲಾಗುತ್ತದೆ. ನುರಿತ ಶಿಕ್ಷಕ ಪಠ್ಯಕ್ರಮದ ಪರಿವಿಡಿಯ ಸಂಯೋಜನೆ, ಆಯ್ದ ಸಂಪನ್ಮೂಲಗಳು, ಪಠ್ಯಪುಸ್ತಕಗಳ ಅರ್ಥಪೂರ್ಣ ಬಳಕೆ, ವಿದ್ಯಾರ್ಥಿಗಳಿಗೆ ರೂಪಿಸಿರುವ ಪಠ್ಯಕ್ರಮದ ಉದ್ದೇಶಗಳನ್ನು ಪೂರ್ತಿಗೊಳಿಸಿ, ವಿದ್ಯಾರ್ಥಿಗಳ ಕ್ಷೇಮ ಹಾಗೂ ಅಭಿವೃದ್ಧಿಗೆ ಕಾಳಜಿ ಹಾಗೂ ಆಸಕ್ತಿ ತೋರುತ್ತಾರೆ. ಹಾಗೆಯೇ ವಿದ್ಯಾರ್ಥಿಗಳ ಜೊತೆಗೆ ಪರಿಣಾಮಕಾರಿ ಸಂವಹನ ಕೂಡ ನಡೆಸುತ್ತಾರೆ. ಕಲಿಕೆಗೆ ಅಗತ್ಯವಾದ ಸಂಗತಿಗಳನ್ನು ಗಮನಿಸಲು ಆತ/ಆಕೆ ವೈಯಕ್ತಿಕ ಕಲಿಕೆಯ ಅಗತ್ಯವನ್ನು ಗುರುತಿಸುತ್ತಾರೆ. ತಕ್ಷಣದ ಮಧ್ಯಸ್ಥಗಾರರು, ಪೋಷಕರು ಹಾಗೂ ಶಾಲಾ ಆಡಳಿತ ಮಂಡಳಿ ಜೊತೆಗೆ ಸಂವಹನ ನಡೆಸುತ್ತಾರೆ. ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಿಕ ಮೌಲ್ಯಗಳು ಹಾಗೂ ಅಭ್ಯಾಸಗಳನ್ನು ಬೆಂಬಲಿಸಲಿದ್ದಾರೆ.

**2. ಉನ್ನತ ಶಿಕ್ಷಕ:**

ಈ ವೃತ್ತಿ ಹಂತದಲ್ಲಿ ಒಬ್ಬ ಶಿಕ್ಷಕ ಬೋಧನೆ-ಕಲಿಕೆ ಪ್ರಕ್ರಿಯೆಗೆ ಸಂಬಂಧಿಸಿದ ಅತ್ಯುತ್ತಮ ಅಭ್ಯಾಸಗಳನ್ನೊಳಗೊಂಡ ಕಲಿಕೆಯ ಅತ್ಯುನ್ನತ ಮಾನದಂಡಗಳನ್ನು ಅಳವಡಿಸಿಕೊಂಡಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಆತ/ಆಕೆ ಬೋಧನೆ ಹಾಗೂ ಕಲಿಕೆಗೆ ಸಂಬಂಧಿಸಿದ ಕೌಶಲಗಳನ್ನು ಅನುಷ್ಠಾನಗೊಳಿಸಲು ವೃತ್ತಿಪರವಾಗಿ ಸಮರ್ಥರಾಗಿರಬೇಕು. ನುರಿತ ಹಂತದಲ್ಲಿರುವ ಶಿಕ್ಷಕರಿಗೆ ಉನ್ನತ ಶಿಕ್ಷಕರು ನಾಯಕರ ಸ್ಥಾನದಲ್ಲಿರುತ್ತಾರೆ. ಇನ್ನು ಉನ್ನತ ಶಿಕ್ಷಕರ ಅಭ್ಯಾಸಗಳನ್ನು ಅವರ ಪ್ರಾಂಶುಪಾಲರು/ಮುಖ್ಯಸ್ಥರು/ಹಿರಿಯ ಅಧಿಕಾರಿಗಳು ಗಮನಿಸುತ್ತಾರೆ ಹಾಗೂ ಅದಕ್ಕೆ ಅನುಗುಣವಾಗಿ ಅಗತ್ಯ ತರಬೇತಿಗಳನ್ನು ನೀಡುತ್ತಾರೆ. ಒಮ್ಮೆ ಉನ್ನತ ಶಿಕ್ಷಕ ಮುಂದಿನ ವೃತ್ತಿ ಹಂತಕ್ಕೆ ಸಿದ್ಧಗೊಂಡರೆ, ಆತ/ಆಕೆ ತಜ್ಞ ಶಿಕ್ಷಕರ ಹುದ್ದೆ ಪಡೆಯಲು ಮಾರ್ಗದರ್ಶನ ನೀಡಲಾಗುತ್ತದೆ. ಆತ/ಆಕೆ ವೃತ್ತಿಯ ಈ ಹಂತದಲ್ಲಿ ಒರೆ ಹಚ್ಚುವುದು, ಅಳವಡಿಕೆ ಹಾಗೂ ಅತ್ಯುನ್ನತ ಕಾರ್ಯಭಾರದೊಂದಿಗೆ ಕಾರ್ಯನಿರ್ವಹಿಸುವ ಬಗ್ಗೆ ಮಾಹಿತಿ ಹೊಂದಿರಬೇಕು. ವಿಷಯ ವಲಯದಲ್ಲಿ ಅಭಿವೃದ್ಧಿ ಬಗ್ಗೆ ಅರಿವು ಹೊಂದಿರಬೇಕು. ಹೊಸ ಪಠ್ಯಕ್ರಮ ವಿಷಯದಲ್ಲಿ ಕಾರ್ಯನಿರ್ವಹಣೆ ಹಾಗೂ ಕೌಶಲ್ಯ ಸಮನ್ವಯ ಸಾಧಿಸಬಹುದು. ಆತ/ಆಕೆ ವಿದ್ಯಾರ್ಥಿಗಳ ವೈಯಕ್ತಿಕ ಹಾಗೂ ವೈವಿಧ್ಯಮಯ ಕಲಿಕಾ ಅಗತ್ಯಗಳನ್ನು ಪೂರೈಸಲು ಸಮರ್ಥರಾಗಿರುತ್ತಾರೆ. ವಿದ್ಯಾರ್ಥಿಗಳು ಹಾಗೂ ಬೋಧನೆ ಪರಿಕಲ್ಪನೆಗಳನ್ನು ಅರ್ಥೈಸಿಕೊಂಡ ಬಳಿಕ ಅದನ್ನು ಬೋಧನೆಗಳಲ್ಲಿ ಅಳವಡಿಸಿಕೊಳ್ಳುತ್ತಾರೆ. ಹೋಲಿಕೆ, ಅನ್ವೇಷಣೆ ಹಾಗೂ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ವಿದ್ಯಾರ್ಥಿಗಳ ಕಲಿಕೆ

ಅಥವಾ ಶೈಕ್ಷಣಿಕ ಗುರಿಗಳ ತಕ್ಷಣದ, ಮಧ್ಯಮ ಅವಧಿ ಹಾಗೂ ದೀರ್ಘಾವಧಿಯ ಯೋಜನೆಗಳಿಗೆ ಆತ/ಆಕೆ ಸಂಪನ್ಮೂಲ ವ್ಯಕ್ತಿಯಾಗಬಹುದು. ಹಾಗೆಯೇ ಸವಾಲುಗಳನ್ನು ಪರಿಹರಿಸುವಲ್ಲಿ ಹಾಗೂ ಶಾಲೆ ಮತ್ತು ಸಮುದಾಯದಲ್ಲಿ ವಿಭಿನ್ನ ಮಧ್ಯವರ್ತಿಗಳೊಂದಿಗೆ ಕಾರ್ಯನಿರ್ವಹಿಸಲು ಸಮರ್ಥರಾಗಿರುತ್ತಾರೆ.

**3. ತಜ್ಞ ಶಿಕ್ಷಕ:**

ಈ ಹಂತದಲ್ಲಿ ಶಿಕ್ಷಕರು ಅತ್ಯುನ್ನತ ಮಾನದಂಡಗಳನ್ನು ಅಳವಡಿಸಿಕೊಂಡಿರುವ ಜೊತೆಗೆ ಮಾರ್ಗದರ್ಶಕರು ಅಥವಾ ಮುಖ್ಯಸ್ಥನ ಪಾತ್ರ ನಿರ್ವಹಿಸುವ ವಿಶೇಷ ಸಾಮರ್ಥ್ಯ ಹೊಂದಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಜೊತೆಗೆ ಇತರ ಶಿಕ್ಷಕರಿಗೆ ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಲು ನೆರವು ನೀಡುವುದರೊಂದಿಗೆ ಶಾಲೆಯ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮವನ್ನು ಮುನ್ನಡೆಸಬೇಕು. ವೃತ್ತಿಯ ಈ ಹಂತದಲ್ಲಿ ಒಬ್ಬ ಶಿಕ್ಷಕ ಅತ್ಯುತ್ತಮ ಮಟ್ಟದ ಕಾರ್ಯನಿರ್ವಹಣೆಯನ್ನು ತಮ್ಮ ಬೋಧನಾ ಅಭ್ಯಾಸದಲ್ಲಿ ನಿರಂತರವಾಗಿ ಪ್ರದರ್ಶಿಸುತ್ತಾರೆ. ಅಷ್ಟೇ ಅಲ್ಲದೆ, ಎಲ್ಲರೊಂದಿಗೆ ಬೆರೆತು ಕಾರ್ಯನಿರ್ವಹಿಸುತ್ತಾರೆ ಹಾಗೂ ಸಹೋದ್ಯೋಗಿಗಳಿಗೆ ಅವರ ಕಲಿಕೆ ಹಾಗೂ ಅಭ್ಯಾಸವನ್ನು ವೃದ್ಧಿಸಲು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಾರೆ. ಇದರೊಂದಿಗೆ ಒಬ್ಬ ತಜ್ಞ ಶಿಕ್ಷಕ ತನ್ನ ಹಾಗೂ ವಿದ್ಯಾರ್ಥಿಗಳ ಮತ್ತು ಸಹೋದ್ಯೋಗಿಗಳ ಕಲಿಕಾ ಅಗತ್ಯಗಳು ಅರಿತುಕೊಳ್ಳುವ ಮೂಲಕ ಆತ/ಆಕೆಯ ಸ್ವಂತ ವೃತ್ತಿ ಬದುಕಿನ ಜ್ಞಾನ ಹಾಗೂ ಅಭ್ಯಾಸವನ್ನು ಅಭಿವೃದ್ಧಿಪಡಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಾರೆ. ತಜ್ಞ ಶಿಕ್ಷಕರು ಸಹೋದ್ಯೋಗಿಗಳನ್ನು ಗಮನಿಸುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾರೆ ಹಾಗೂ ತಮ್ಮ ಹಾಗೂ ಇತರರ ಕಲಿಕೆಗೆ ಜವಾಬ್ದಾರರಾಗಿರುತ್ತಾರೆ. ತಜ್ಞ ಶಿಕ್ಷಕ ಇತರರಿಗೆ ವೃತ್ತಿಯ ಮುಂದಿನ ಹಂತಕ್ಕೆ ಪ್ರವೇಶಿಸಲು ಮಾರ್ಗದರ್ಶನ ನೀಡುತ್ತಾನೆ. ಕೌಶಲಗಳನ್ನು ಪಡೆದುಕೊಳ್ಳಲು ಹಾಗೂ ಮುಂದಿನ ವೃತ್ತಿ ಹಂತ ಪ್ರವೇಶಿಸಲು ಅಗತ್ಯವಾದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡಲಾಗುತ್ತದೆ. ತಮ್ಮ ಸ್ವ ಬೋಧನಾ ಅಭ್ಯಾಸವನ್ನು ಸುಧಾರಿಸಿಕೊಳ್ಳಲು ಆತ/ಆಕೆ ವಿಶಿಷ್ಟ ಸಾಮರ್ಥ್ಯವನ್ನು ಪ್ರದರ್ಶಿಸುತ್ತಾರೆ. ಹಾಗೆಯೇ ಶಾಲೆಗಳಲ್ಲಿ ಕಲಿಕಾ ಸಮುದಾಯಗಳನ್ನು ಅಭಿವೃದ್ಧಿಪಡಿಸುವ ಮೂಲಕ ಇತರರಿಗೂ ನೆರವು ನೀಡುತ್ತಾರೆ.

## 3.3 ಸಾಮರ್ಥ್ಯದ ಬೆಳವಣಿಗೆ ಹಾಗೂ ಅಭಿವೃದ್ಧಿ

ವಿವರಿಸಿದ ಎಲ್ಲ ವೃತ್ತಿ ವಲಯಗಳಲ್ಲೂ ಸಾಮರ್ಥ್ಯದ ಪ್ರಗತಿ ಹಾಗೂ ಅಭಿವೃದ್ಧಿ ಸಾಧ್ಯ ಹಾಗೂ ಅಪೇಕ್ಷಣೀಯ ಕೂಡ. ಈ ಬೆಳವಣಿಗೆ ಹಾಗೂ ಅಭಿವೃದ್ಧಿ ಜ್ಞಾನ, ವರ್ತನೆಗಳು, ನಂಬಿಕೆಗಳು, ಕೌಶಲಗಳು, ಮೌಲ್ಯಗಳು, ಆಂತರಿಕ ಗುಣಗಳು, ಬೋಧನೆಯ ವಿಷಯ, ವಿದ್ಯಾರ್ಥಿಗಳು, ಸಮುದಾಯ ಹಾಗೂ ಶಿಕ್ಷಣದ ತಾತ್ವಿಕ ಗುರಿಗಳನ್ನು ಅರ್ಥಮಾಡಿಕೊಳ್ಳುವುದು ಮುಂತಾದ ಬೋಧನೆಗೆ ಸಂಬಂಧಿಸಿದ ಎಲ್ಲ ವಿಧದ ಸಾಮರ್ಥ್ಯಗಳಿಗೂ ಅನ್ವಯಿಸುತ್ತದೆ. ಇಂಥ ಬೆಳವಣಿಗೆಗೆ ದಾರಿಮಾಡಿಕೊಡುವ ಮೂರು ಮಾರ್ಗಗಳಿವೆ:

**ಎ) ಅನುಭವ:** ಅನುಭವ ಹಾಗೂ ಪ್ರತಿಭೆ ಶಿಕ್ಷಕರಿಗೆ ಬೋಧನೆ ಅಭ್ಯಾಸದ ಬಗ್ಗೆ ಹೆಚ್ಚು ತಿಳಿದುಕೊಳ್ಳಲು, ಜ್ಞಾನವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು, ಸಿದ್ಧಾಂತಗಳು ಹಾಗೂ ನಂಬಿಕೆಗಳನ್ನು ಅರ್ಥಮಾಡಿಕೊಳ್ಳಲು, ವಿಷಯ, ವಿದ್ಯಾರ್ಥಿಗಳು ಹಾಗೂ ಅವರ ಕಲಿಕಾ ಪ್ರಕ್ರಿಯೆಯ ಜೊತೆಗೆ ಅವರ ಶೈಕ್ಷಣಿಕ ಗುರಿಗಳನ್ನು ಅರಿತುಕೊಳ್ಳಲು ನೆರವು ನೀಡುತ್ತವೆ. ವೃತ್ತಿಯ ಪ್ರಾರಂಭದಲ್ಲಿ ಒಬ್ಬ ಶಿಕ್ಷಕನ ಗಮನ ಬೋಧನ ದಿನಚರಿಗಳನ್ನು ಚೆನ್ನಾಗಿ ಅರಿತುಕೊಳ್ಳುವುದು ಹಾಗೂ ವಿವಿಧ ವೃತ್ತಿಪರ ಹಾಗೂ ಕಾರ್ಯನಿರ್ವಹಿಸುವ ಸ್ಥಳದ ಅಗತ್ಯಗಳಿಗೆ ಹೊಂದಿಕೊಳ್ಳುವುದರ ಮೇಲೆಯೇ ಇರುತ್ತದೆ. ಇದು ಯಾವುದೇ ವೃತ್ತಿಯಲ್ಲಿ ಕೂಡ ಸರ್ವೇಸಾಮಾನ್ಯವಾದ ಸಂಗತಿ. ಆ ಬಳಿಕ ನಿಧಾನವಾಗಿ ಹೆಚ್ಚಿನ ಸಮಯವನ್ನು ಬೋಧನೆಯ ಪ್ರಮುಖ ಕಾರ್ಯಗಳಿಗೆ ಮೀಸಲಿಡಲು ಪ್ರಾರಂಭಿಸುತ್ತಾರೆ ಹಾಗೂ ಎಲ್ಲ ವಿದ್ಯಾರ್ಥಿಗಳಿಗೆ ಕಲಿಕೆ ಹಾಗೂ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಅಗತ್ಯವಾದ ನೆರವು ಒದಗಿಸುತ್ತಾರೆ. ಶಿಕ್ಷಕನ ಸೇವಾಪೂರ್ವ ಶಿಕ್ಷಣ ಹಂತದಲ್ಲಿ ಕಲಿತ 'ಸೈದ್ಧಾಂತಿಕ' ಕಲಿಕೆಯ ಮಹತ್ವ ಹಾಗೂ ಮೌಲ್ಯ ಕೂಡ ಮೇಲ್ನೋಟಕ್ಕೆ ಕಾಣಿಸುತ್ತದೆ ಹಾಗೂ ಇದಕ್ಕೆ ಶಿಕ್ಷಕರು ಪ್ರಾಮುಖ್ಯತೆಯನ್ನು ಕೂಡ ನೀಡುತ್ತಾರೆ. ಶಿಕ್ಷಕರು ವೃತ್ತಿಯಲ್ಲಿ ಗುರುತಿಸಿಕೊಳ್ಳುವ ಹಾಗೂ ವೃತ್ತಿಯನ್ನು


ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಕೂಡ ಹೆಚ್ಚಿನ ಗಮನ ನೀಡುತ್ತಾರೆ. ಎಲ್ಲ ಶಿಕ್ಷಕರು ಅನುಭವದ ಮೂಲಕ ಕಲಿಯುತ್ತಾರೆ ಹಾಗೂ ಅಭಿವೃದ್ಧಿ ಹೊಂದುತ್ತಾರೆ.

**ಬಿ) ತೆರೆದುಕೊಳ್ಳುವಿಕೆ ಹಾಗೂ ಸಂವಹನ:** ವೃತ್ತಿಪರ ಕಲಿಕೆಯ ಸಾಮಾಜಿಕ ಗುಣವನ್ನು ಈಗ ಹೆಚ್ಚಾಗಿ ಒಪ್ಪಿಕೊಳ್ಳಲಾಗುತ್ತಿದೆ. ಸಮಾನ ವಯಸ್ಕರು ಹಾಗೂ ಸಹೋದ್ಯೋಗಿಗಳ ಜೊತೆಗೆ ಮಾತನಾಡುವ ಮೂಲಕ ಹಾಗೂ ಬೇರೆಡೆ ಕೆಲಸಗಳು ಹೇಗೆ ನಡೆಯುತ್ತವೆ ಇತ್ಯಾದಿ ಮಾಹಿತಿ ಪಡೆಯುವ ಮೂಲಕ ಕಲಿಯುವುದು ಶಿಕ್ಷಕರಿಗೆ ಕಲಿಕೆ ಹಾಗೂ ಬೆಳವಣಿಗೆಯ ಅತಿ ಮುಖ್ಯ ಮೂಲಗಳಾಗಿವೆ. ಸಮ್ಮೇಳನಗಳು ಹಾಗೂ ಕಾರ್ಯಾಗಾರಗಳಲ್ಲಿ ಭಾಗವಹಿಸುವುದು, ಅಭ್ಯಾಸ ಹಾಗೂ ವೃತ್ತಿಪರ ಕಲಿಕೆಯ ಭಾಗವೇ ಆಗಿವೆ. ಶಿಕ್ಷಣದ ಹೊರತಾಗಿ ವೃತ್ತಿಗೆ ಸಂಬಂಧಿಸಿದ ಇಂಥ ಕಾರ್ಯಕ್ರಮಗಳಲ್ಲಿ ಭಾಗಿಯಾಗುವುದು ಶಿಕ್ಷಕರಿಗೆ ಆತ್ಮಾವಲೋಕನ ಹಾಗೂ ಕಲಿಕೆಗೆ ಅವಕಾಶಗಳನ್ನು ಒದಗಿಸುತ್ತವೆ.

**ಸಿ) ನಿರಂತರ ವೃತ್ತಿ ಅಭಿವೃದ್ಧಿ:** ನಿರಂತರ ವೃತ್ತಿ ಜೀವನದ ಅಭಿವೃದ್ಧಿಗಾಗಿ ಆನ್ಲೈನ್ ಹಾಗೂ ಆಫ್'ಲೈನ್ ಕಾರ್ಯಾಗಾರಗಳು, ಸಾಮರ್ಥ್ಯ ನಿರ್ಮಾಣದ ತರಗತಿಗಳು, ಕೌಶಲಾಭಿವೃದ್ಧಿ ಕೋರ್ಸುಗಳು ಹೊಸ ಜ್ಞಾನ, ಅಭ್ಯಾಸಗಳನ್ನು ಕಲಿಯಲು ಅಥವಾ ಹೊಸ ಕೌಶಲದ ವಲಯಗಳು ಹಾಗೂ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶಗಳನ್ನು ಒದಗಿಸುತ್ತವೆ. ಈ ಮೂಲಕ ಸಂಬಂಧಿತ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಮೂಲಕ ವೃತ್ತಿಯ ಹೊಸ ಹಾದಿಗೆ ಮುನ್ನಡೆಯಲು ನೆರವು ನೀಡುತ್ತವೆ. ಹೀಗಾಗಿ ಹೊಸ ವಲಯಗಳ ಬಗ್ಗೆ ಕಲಿಯಲು ಹಾಗೂ ಹೆಚ್ಚಿನ ಪರಿಣತಿ ಅಭಿವೃದ್ಧಿಪಡಿಸಿಕೊಳ್ಳಲು ಇದೊಂದು ಪ್ರಮುಖ ಅವಕಾಶವಾಗಿದೆ.

## 3.4 ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು (ಎನ್.ಪಿ.ಎಸ್.ಟಿ)

ಮಾನದಂಡಗಳನ್ನು ಸಾಮಾನ್ಯವಾಗಿ ಬೋಧನೆಯ ಗುಣಮಟ್ಟವನ್ನು ಪರಿಣಾಮಕಾರಿಯಾಗಿ ವಿವರಿಸಲು ಹಾಗೂ ರೂಪಿಸುವ ನಿಟ್ಟಿನಲ್ಲಿ ಬಳಸಲಾಗುತ್ತದೆ. ಮಾನದಂಡಗಳು 'ಉತ್ತಮ ಬೋಧನೆಯನ್ನು' ಪ್ರತಿನಿಧಿಸುತ್ತವೆ ಹಾಗೂ ಮಾನದಂಡಗಳನ್ನು ತಲುಪುವುದರ ಅರ್ಥವೇನು ಎಂಬುದನ್ನು ಗುರುತಿಸುತ್ತವೆ. ವೃತ್ತಿಪರವಾಗಿ ಈ ಮಾನದಂಡಗಳನ್ನು ಅವುಗಳ ಉದ್ದೇಶ ಹಾಗೂ ವ್ಯಾಪ್ತಿಯ ಆಧಾರದಲ್ಲಿ ವಿಂಗಡಿಸಲಾಗುತ್ತದೆ. ಸಂಬಂಧಪಟ್ಟ ಅಭ್ಯಾಸದ ವಲಯಗಳಿಗೆ ಈ ಮಾನದಂಡಗಳು ಸಾಮಾನ್ಯ ಅಥವಾ ನಿರ್ದಿಷ್ಟವಾಗಿರುತ್ತವೆ. ಇದನ್ನು ಮೂಲ ಅರ್ಥದಲ್ಲೇ ವಿವರಿಸುವುದಾದರೆ ಬೋಧನಾ ವೃತ್ತಿಯಲ್ಲಿರುವ ಎಲ್ಲರನ್ನೂ ಒಳಪಡುವ ಅಥವಾ ವಿವಿಧ ವೃತ್ತಿ ಹಂತಗಳಲ್ಲಿರುವ ಶಿಕ್ಷಕರಿಗೆ ನುರಿತದಿಂದ ತಜ್ಞ ಹಂತ ತಲುಪಲು ದಾರಿತೋರುತ್ತದೆ.




ಚಿತ್ರ 2. ವೃತ್ತಿ ಮಾನದಂಡಗಳು ಹಾಗೂ ಸಾಮರ್ಥ್ಯದ ಚಿತ್ರ

ಎನ್.ಇ.ಪಿ- 2020ರ ದೂರದೃಷ್ಟಿಯನ್ನು ತಲುಪಲು ಈಗಾಗಲೇ ವಿವರಿಸಿರುವ ಮೂರು ವಲಯಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಅಧ್ಯಾಪನಾ ವೃತ್ತಿಯಲ್ಲಿರುವವರ ಜೀವನಪರ್ಯಂತದ ವೃತ್ತಿ ವಿಕಾಸದ ದೃಷ್ಟಿಯಿಂದ ವಿಸ್ತಾರವಾಗಿ ವಿವರಿಸಲಾಗಿದೆ. ಎನ್.ಸಿ.ಇ.ಆರ್.ಟಿ, ಎಸ್.ಸಿ.ಇ.ಆರ್.ಟಿ.ಎಸ್, ವಿವಿಧ ಮಟ್ಟಗಳು ಹಾಗೂ ಪ್ರದೇಶಗಳ ಶಿಕ್ಷಕರು, ಶಿಕ್ಷಕರ ತಯಾರಿ ಹಾಗೂ ಅಭಿವೃದ್ಧಿಯಲ್ಲಿ ತೊಡಗಿರುವ ಪರಿಣತ ಸಂಸ್ಥೆಗಳು, ತಜ್ಞ ಮಂಡಳಿಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ಜೊತೆಗೆ ಸಮಾಲೋಚನೆ ನಡೆಸಿ ಎನ್.ಪಿ.ಎಸ್.ಟಿ.ಯ ಸಾಮಾನ್ಯ ಮಾರ್ಗದರ್ಶಿ ಸೂತ್ರಗಳನ್ನು ಅಭಿವೃದ್ಧಿಪಡಿಸಲಾಗಿದೆ.

# 4. ಶಿಕ್ಷಕರ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ (ಎನ್.ಪಿ.ಎಸ್.ಟಿ) ಚೌಕಟ್ಟು

ಶಿಕ್ಷಕರ ಚೌಕಟ್ಟಿನ ರಾಷ್ಟ್ರೀಯ ವೃತ್ತಿಪರ ಮಾನದಂಡಗಳ ವೃತ್ತಿ ಆಯಾಮಗಳನ್ನು ಶಿಕ್ಷಕರ ಕೆಲಸದ ನಿರ್ದಿಷ್ಟ ದೃಷ್ಟಿಕೋನದ ಮೂಲಕ ವಿವರಿಸಬಹುದು. ಚೌಕಟ್ಟನ್ನು 'ಮಾನದಂಡಗಳು' ಎಂದು ಕರೆಯಲಾಗುವ ಈ ಕೆಳಗಿನ ಮೂರು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವ ವಲಯಗಳಲ್ಲಿ ಜೋಡಿಸಲಾಗಿದ್ದು, ವಿವರಿಸಿರುವಂತೆ ಇದು ಬಹು ವಲಯಗಳನ್ನು ಆವರಿಸುತ್ತದೆ.

**4.1 ಮಾನದಂಡ 1: ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆ:** ಒಬ್ಬ ಶಿಕ್ಷಕ ಅಭಿವೃದ್ಧಿಪಡಿಸಿಕೊಳ್ಳಬೇಕೆಂದು ನಿರೀಕ್ಷಿಸುವ ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆಗಳನ್ನು ಈ ಮಾನದಂಡಗಳು ಒಳಗೊಂಡಿವೆ. ಅಧ್ಯಾಪನಾ ವೃತ್ತಿಯಲ್ಲಿ ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಸಮಗ್ರತೆಗೆ ಸಂಬಂಧಿಸಿದ ಬದ್ಧತೆ, ವೃತ್ತಿಪರತೆ, ಪ್ರಾಮಾಣಿಕತೆ, ಗೌರವ, ನಂಬಿಕೆ ಹಾಗೂ ತರಗತಿಯೊಳಗಿನ ಪರಸ್ಪರ ಅರ್ಥಮಾಡಿಕೊಳ್ಳುವ ವಿಚಾರಗಳಿಗೆ ಸಂಬಂಧಿಸಿ ಶಿಕ್ಷಕರ ಮೌಲ್ಯಗಳನ್ನು ವೃತ್ತಿಪರವಾಗಿ ರೂಪುಗೊಳಿಸುವಲ್ಲಿ ಅವು ಮಾರ್ಗದರ್ಶಕ ತತ್ವಗಳಾಗಿರುತ್ತವೆ. ಹಾಗೆಯೇ ಶಿಕ್ಷಕರಿಗೆ ನಿರಂತರವಾಗಿ ತಮ್ಮ ಬೋಧನ ಕೌಶಲಗಳನ್ನು ಪರಿಷ್ಕರಿಸಿಕೊಳ್ಳಲು ಹಾಗೂ ಜೀವನಪರ್ಯಂತ ಕಲಿಯಲು ನೆರವು ನೀಡುತ್ತವೆ. ಈ ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆಗಳನ್ನು ಎತ್ತಿಹಿಡಿಯುವ ಮೂಲಕ ಶಿಕ್ಷಕರು ನ್ಯಾಯಯುತ ಹಾಗೂ ಎಲ್ಲರನ್ನೊಳಗೊಂಡ ಬುನಾದಿಯೊಂದನ್ನು ಸೃಷ್ಟಿಸಬಹುದು.




ಚಿತ್ರ 3. ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆ ಚಿತ್ರ

**4.2 ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ:** ಈ ಮಾನದಂಡ ಒಬ್ಬ ಶಿಕ್ಷಕ ತನ್ನ ವಿದ್ಯಾರ್ಥಿಗಳ ಬಗ್ಗೆ ಏನನ್ನು ತಿಳಿದುಕೊಂಡಿರಬೇಕು ಹಾಗೂ ಅರ್ಥಮಾಡಿಕೊಂಡಿರಬೇಕು ಹಾಗೂ ವೃತ್ತಿಯ ಪ್ರತಿ ಹಂತದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಬೋಧನೆಗೆ ಸಂಬಂಧಿಸಿದಂತೆ ಏನು ಕಲಿಯಬೇಕು ಎಂಬ ವಲಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮಾನದಂಡ ಬೋಧನೆ-ಕಲಿಕೆ ಪ್ರಕ್ರಿಯೆ ಹಾಗೂ ಕಲಿಕೆಯ ಮೌಲ್ಯಮಾಪನವನ್ನು ನಿರ್ವಹಿಸುವ ಸಂದರ್ಭದಲ್ಲಿ ಒಬ್ಬ ಶಿಕ್ಷಕ ವಿದ್ಯಾರ್ಥಿಗಳಿಗೆ ಹೇಗೆ

ಸೂಕ್ತವಾದ ಕಲಿಕಾ ಅನುಭವಗಳನ್ನು ರೂಪಿಸುತ್ತಾನೆ ಎಂಬುದಕ್ಕೆ ಕೂಡ ನಕಾಶೆಯನ್ನು ಒದಗಿಸುತ್ತದೆ. ಶಿಕ್ಷಕನ ಜ್ಞಾನ ಹಾಗೂ ಅಭ್ಯಾಸದ ವಲಯ ವಿಸ್ತಾರವಾಗಿದ್ದು, ವಿಷಯಾಧರಿತ ಜ್ಞಾನ ಹಾಗೂ ಬೋಧನಶಾಸ್ತ್ರದ ವಿಷಯದ ಜ್ಞಾನ, ವಿಷಯವನ್ನು ಪ್ರಸ್ತುತಪಡಿಸುವ ವಿಧಾನಗಳ ಜ್ಞಾನ, ಶೈಕ್ಷಣಿಕ ಗುರಿಗಳು ಹಾಗೂ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಜ್ಞಾನ ಹಾಗೂ ಶೈಕ್ಷಣಿಕ ಅಭ್ಯಾಸಗಳ ಜ್ಞಾನವನ್ನು ಒಳಗೊಂಡಿದೆ. ಜ್ಞಾನ ಹಾಗೂ ಅಭ್ಯಾಸ ಮಾಡಬೇಕಾದ ವಿಚಾರಗಳಿಗೆ ಸಂಬಂಧಿಸಿದ ಸಾಮರ್ಥ್ಯಗಳು ಹಾಗೂ ಮನೋಧರ್ಮವನ್ನು ಒಳಗೊಂಡಿದೆ. ಹಾಗೆಯೇ  ಕಾರ್ಯಭಾರದ ಪ್ರಜ್ಞೆಯನ್ನು ಕೂಡ ಒಳಗೊಂಡಿದೆ. ವಿದ್ಯಾರ್ಥಿಗಳು ಆಸಕ್ತಿಯಿಂದ ಹಾಗೂ ಅರ್ಥಪೂರ್ಣವಾಗಿ ತೊಡಗಿಕೊಳ್ಳುವಂತೆ ಮಾಡಲು ಯೋಜನೆ ರೂಪಿಸಲು, ಬೋಧಿಸಲು, ಮೌಲ್ಯಮಾಪನ ಹಾಗೂ ಮನನ, ಆಯ್ಕೆ, ಅಭಿವೃದ್ಧಿ ಹಾಗೂ ಸಂಪನ್ಮೂಲಗಳ ಬಳಕೆ, ತರಗತಿ, ಗ್ರಂಥಾಲಯ, ಪ್ರಯೋಗಾಲಯ, ಕ್ಷೇತ್ರ ಪ್ರವಾಸ, ಕಾರಿಡಾರ್ ಗಳು ಹಾಗೂ ಆಟದ ಮೈದಾನಗಳು ಸೇರಿದಂತೆ ವಿವಿಧ ಕಲಿಕಾ ತಾಣಗಳಲ್ಲಿ ಕಲಿಕೆಯ ಅನುಭವಗಳನ್ನು ರೂಪಿಸುವುದು ಹಾಗೂ ಕಾರ್ಯರೂಪಕ್ಕೆ ತರುವುದು. ಹಾಗೆಯೇ ಎಲ್ಲ ವಿದ್ಯಾರ್ಥಿಗಳಿಗೆ ಕಲಿಯಲು ಹಾಗೂ ಸರ್ವತೋಮುಖ ಅಭಿವೃದ್ಧಿ ಹೊಂದಲು ನೆರವು ನೀಡುವುದು.




ಚಿತ್ರ 4. ಜ್ಞಾನ ಹಾಗೂ ಅಭ್ಯಾಸದ ಚಿತ್ರ

**4.3 ಮಾನದಂಡ 3: ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿ:** ವೃತ್ತಿಪರ ಜ್ಞಾನ/ ಸಾಮರ್ಥ್ಯ ವೃದ್ಧಿಗೆ ಒಬ್ಬ ಶಿಕ್ಷಕ ಏನು ಮಾಡಬೇಕು ಎಂಬುದನ್ನು ಈ ಮಾನದಂಡ ತಿಳಿಸುತ್ತದೆ. ಹಾಗೆಯೇ ನಿರಂತರ ವೃತ್ತಿಬದುಕಿನ ಅಭಿವೃದ್ಧಿಗೆ (ಕಂಟಿನ್ಯೂಯಸ್ ಪ್ರೊಫೆಷನಲ್ ಡೆವಲೆಪ್ಮೆಂಟ್- CPD) ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಮೂಲಕ ಪ್ರತಿ ವೃತ್ತಿ ಹಂತದಲ್ಲಿ ಅಭ್ಯಾಸ ನಡೆಸುವ ವಿಚಾರವನ್ನು ಒಳಗೊಂಡಿದೆ. ವೃತ್ತಿಪರರಾಗಿ ಶಿಕ್ಷಕರು ತಮ್ಮ ವೃತ್ತಿ ಗುರುತನ್ನು ಗೌರವಿಸುವುದು ಅಗತ್ಯ ಹಾಗೂ ತಮ್ಮ ಸಾಮರ್ಥ್ಯಗಳನ್ನು ಬೆಳೆಸಲು ಹಾಗೂ ಅಭಿವೃದ್ಧಿಗೊಳಿಸಲು ನಿರಂತರವಾಗಿ ಪ್ರಯತ್ನಗಳನ್ನು ನಡೆಸಬೇಕು. ಈ ದಾಖಲೆಯಲ್ಲಿ ಬಳಸಿರುವ ಸಾಮರ್ಥ್ಯದ ಕಾರ್ಯನಿರ್ವಹಣೆ ವಿವರಣೆಯಲ್ಲಿ ಸ್ಪಷ್ಟಪಡಿಸಿರುವಂತೆ ಸಾಮರ್ಥ್ಯವು ಜ್ಞಾನ, ಮನೋಧರ್ಮ ಹಾಗೂ ಯೋಗ್ಯತೆಯ ಎಲ್ಲ ರೂಪಗಳನ್ನು ಆವರಿಸುತ್ತದೆ




ಚಿತ್ರ 5. ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿಯ ಚಿತ್ರ

| ಮಾನದಂಡ 1: ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆ | | | |
|---|---|---|---|
| ಒಬ್ಬ ಶಿಕ್ಷಕ ವ್ಯಕ್ತಪಡಿಸಬೇಕಾದ ಪ್ರಮುಖ ಮೌಲ್ಯಗಳು ಹಾಗೂ ವೃತ್ತಿಪರ ನೈತಿಕತೆ | | | |
| **ವಲಯ** | **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಿರುವ ಸಾಂವಿಧಾನಿಕ ಮೌಲ್ಯಗಳು** | ಸಾಂವಿಧಾನಿಕ ಮೌಲ್ಯಗಳನ್ನು ಉಲ್ಲೇಖಿಸಿ ಕಾರಣ, ಆದ್ಯತೆಗಳು, ಆತ್ಮಾವಲೋಕನ ಹಾಗೂ ವಿವರಣೆ ನೀಡುವ ಸಾಮರ್ಥ್ಯ | | |
| | ಮಾಹಿತಿಯನ್ನು ನೈತಿಕವಾಗಿ, ಜವಾಬ್ದಾರಿಯುತವಾಗಿ ಹಾಗೂ ವಿದ್ಯಾರ್ಥಿಗಳ ಘನತೆಯನ್ನು ಎತ್ತಿ ಹಿಡಿಯುವ ರೀತಿಯಲ್ಲಿ ಬಳಸುವ ಸಾಮರ್ಥ್ಯ. | | |
| | ಭಾರತ ಸಂವಿಧಾನದ ವಿಧಿ 51ಎಯಲ್ಲಿ ನೀಡಿರುವಂತೆ ಮೂಲಭೂತ ಕರ್ತವ್ಯಗಳ ಅಭ್ಯಾಸ ಹಾಗೂ ಅರಿವು | | |
| | ಸಂಘರ್ಷದ ಪರಿಸ್ಥಿತಿಯಲ್ಲಿ ಕಾನೂನಾತ್ಮಕ ಬದ್ಧತೆಗಳು, ನಿಯಮಗಳು, ಕಾಯಿದೆಗಳು, ನೀತಿಗಳು ಹಾಗೂ ನೈತಿಕ ಕಾರಣಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಹಾಗೂ ಸಂಕೀರ್ಣ ಪರಿಸರಗಳಲ್ಲಿ ಸಂಧಾನ ನಡೆಸುವುದು. | | |
| **ವೃತ್ತಿಪರ ಸಂಬಂಧಗಳು** | ಕಲಿಕಾರ್ಥಿಗಳಿಗೆ ಪಠ್ಯೇತರ ಅವಕಾಶಗಳನ್ನು ಒದಗಿಸಲು ಇತರ ವೃತ್ತಿಪರರು ಹಾಗೂ ಸಂಸ್ಥೆಗಳೊಂದಿಗೆ ಸಂವಹನ ನಡೆಸುವುದು. | | |
| | ಮಗುವಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಪೋಷಕರು ಹಾಗೂ ಸಮುದಾಯದ ಪಾತ್ರವನ್ನು ಅರ್ಥಮಾಡಿಕೊಳ್ಳುವುದು ಹಾಗೂ ಅಂಗೀಕರಿಸುವುದು. | | |
| | ಸ್ವಂತ ಶಾಲೆ, ಇತರ ಸಂಸ್ಥೆಗಳು ಹಾಗೂ ಸಮುದಾಯದ ನಡುವೆ ಸಂಪನ್ಮೂಲಗಳನ್ನು ಹಂಚಿಕೆ ಮಾಡಲು ಪರಸ್ಪರ ಸಂಪರ್ಕ ನಿರ್ವಹಿಸುವ ಸಾಮರ್ಥ್ಯ | | |
| | ಶಾಲೆಯ ಒಳಗೆ ಹಾಗೂ ಹೊರಗೆ ವಿವಿಧ ಮಧ್ಯಸ್ಥಗಾರರ ಜೊತೆಗೆ ಸಂಬಂಧಗಳನ್ನು ಬೆಳೆಸುವ ಹಾಗೂ ಸಂಕೀರ್ಣ ಹಾಗೂ ಸವಾಲಿನ ವಾತಾವರಣಗಳಲ್ಲಿ ವ್ಯವಹರಿಸುವ ಸಾಮರ್ಥ್ಯ | | |
| | ಎಲ್ಲ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಸಂಸ್ಥೆ ದಕ್ಷತೆ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಗುರಿಗಳು ಹಾಗೂ ತಂತ್ರಗಳನ್ನು ನಿಗದಿಪಡಿಸುವ ಸಾಮರ್ಥ್ಯ ಹಾಗೂ ಶಾಲೆಯ ಎಲ್ಲ ಸದಸ್ಯರಿಗೆ ಆರೋಗ್ಯಕರ ಹಾಗೂ ಅನುಕೂಲಕರ ಕಾರ್ಯನಿರ್ವಹಣೆ ಪರಿಸರ ಕಲ್ಪಿಸುವುದು. | | |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| ಪ್ರತಿ ಮಗುವಿನ ವಿಶಿಷ್ಟ ಸಾಮರ್ಥ್ಯಗಳನ್ನು ಗುರುತಿಸುವುದು, ಮನ್ನಣೆ ನೀಡುವುದು ಹಾಗೂ ಪೋಷಿಸುವುದು | ಮಗುವಿನ ಅಭಿವೃದ್ಧಿ ಹಾಗೂ ಕಲಿಕೆಯ ಪರಿಣಾಮ | ಅಭಿವೃದ್ಧಿಯ ವಿವಿಧ ಹಂತಗಳು ಹಾಗೂ ವಲಯಗಳಿಗೆ (ಅರಿವು, ಭಾಷೆ, ಸಾಮಾಜಿಕ, ಭಾವನಾತ್ಮಕ ಹಾಗೂ ಭೌತಿಕ) ಸಂಬಂಧಿಸಿದ ಸಿದ್ಧಾಂತಗಳನ್ನು ಅರ್ಥಮಾಡಿ ಕೊಳ್ಳುವುದು | ಪ್ರತಿ ವ್ಯಕ್ತಿಯ ಕಲಿಕಾ ವಿನ್ಯಾಸಗಳನ್ನು ಗುರುತಿಸಲು ಹಾಗೂ ಅಭಿವೃದ್ಧಿಪಡಿಸಲು ಮಗುವಿನ ಅಭಿವೃದ್ಧಿಯ ಅರಿವು ಹಾಗೂ ಜ್ಞಾನವನ್ನು ಅನ್ವಯಿಸಬೇಕು. | ಸಹೋದ್ಯೋಗಿಗಳಿಗೆ ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳ ಮಾದರಿ ಅನ್ವಯ |
| | ವಿದ್ಯಾರ್ಥಿಗಳ ವೈವಿಧ್ಯತೆ | ವಿದ್ಯಾರ್ಥಿಗಳ ವೈವಿಧ್ಯತೆಯ ವಿವಿಧ ವಿಧಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದನ್ನು ಅಭಿವೃದ್ಧಿಪಡಿಸಿ (ಕಲಿಕಾ ಶೈಲಿಗಳು, ಕಲಿಕಾ ಅಗತ್ಯಗಳು, ಸಾಮಾಜಿಕ-ಆರ್ಥಿಕ ಸ್ಥಿತಿಗಳು, ಸಂಸ್ಕೃತಿ, ಭಾಷೆ, ಕುಟುಂಬ ವಿನ್ಯಾಸ ಇತ್ಯಾದಿ ಒಳಗೊಂಡಂತೆ) ಹಾಗೂ ಶಾಲೆ ಹಾಗೂ ತರಗತಿಯಲ್ಲಿನ ಈ ವೈವಿಧ್ಯತೆಯನ್ನು ಸಂಬೋಧಿಸುವುದು. | ವಿದ್ಯಾರ್ಥಿಗಳ ವೈವಿಧ್ಯಮಯ ಅಗತ್ಯಗಳನ್ನು ಪೂರೈಸುವ ಜೊತೆಗೆ ಎಲ್ಲರನ್ನೊಳಗೊಂಡ ತರಗತಿ ಸೃಷ್ಟಿಸಲು ಕಲಿಕಾ ಸಂಪನ್ಮೂಲಗಳ ಜ್ಞಾನವನ್ನು ಅನ್ವಯಿಸಬೇಕು. | ತರಗತಿ ಅನುಭವದ ಆಧಾರದಲ್ಲಿ ಪ್ರತಿ ವಿದ್ಯಾರ್ಥಿಯ ವಿಭಿನ್ನ ಅಗತ್ಯಗಳನ್ನು ವಿಶ್ಲೇಷಿಸುವ ಹಾಗೂ ಪೂರೈಸುವ ಸಾಮರ್ಥ್ಯ. |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | ವಿಶೇಷ ಚೇತನ ಹಾಗೂ ವಿಶೇಷ ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳು | ವಿವಿಧ ವಿಧದ ಅಂಗವೈಕಲ್ಯಗಳು ಹಾಗೂ ಅವುಗಳ ವಿಶೇಷ ಕಲಿಕಾ ಅಗತ್ಯಗಳ ಜ್ಞಾನ ಹಾಗೂ ವಿಶೇಷಚೇತನ ಮಕ್ಕಳ ಅಗತ್ಯಗಳು ಹಾಗೂ ಅವರ ಕಲಿಕೆಯನ್ನು ಬೆಂಬಲಿಸುವ ತಂತ್ರಗಳ ಜ್ಞಾನವನ್ನು ಪ್ರದರ್ಶಿಸುವುದು. | ತರಗತಿಯ ವಿವಿಧ ವಿದ್ಯಾರ್ಥಿಗಳ ಅಗತ್ಯಗಳನ್ನು ಗುರುತಿಸಲು ಹಾಗೂ ಪೂರೈಸಲು ವಿಶೇಷ ಅಗತ್ಯಗಳ ಜ್ಞಾನವನ್ನು ಅನ್ವಯಿಸಬೇಕು. | ತಜ್ಞರ ಪ್ರವೇಶದ ಅಗತ್ಯವಿರುವ ವಿಶೇಷ ಅಗತ್ಯಗಳನ್ನು ಗುರುತಿಸುವ ಸಾಮರ್ಥ್ಯ ಹಾಗೂ ಅಂಥ ಸನ್ನಿವೇಶಗಳನ್ನು ಹೇಗೆ ಎದುರಿಸಬೇಕು ಎಂಬ ಬಗ್ಗೆ ಸಹೋದ್ಯೋಗಿಗಳಿಗೆ ಮಾಹಿತಿ ಒದಗಿಸುವುದು. |
| ಜ್ಞಾನ, ವಿಷಯದ ಪರಿಕಲ್ಪನೆಯ ಅರಿವು ಹಾಗೂ ಅನ್ವಯ | | ಜ್ಞಾನದ ಹಂಚಿಕೆ, ವಿಷಯ ವಲಯದ ಅರಿವು ಹಾಗೂ ಅನ್ವಯಕ್ಕೆ ಸಂಬಂಧಿಸಿದ ಸಾಮರ್ಥ್ಯಗಳನ್ನು ಪ್ರದರ್ಶಿಸುವುದು. | ವಿಷಯದೊಳಗಿನ ಹಾಗೂ ಅಂತರ ವಿಷಯ ಸಂಪರ್ಕಗಳನ್ನು ಅನ್ವಯಿಸಿ ಹಾಗೂ ಸ್ಥಳೀಯ ಹಾಗೂ ದೇಶೀಯ ಜ್ಞಾನವನ್ನು ಸಂಯೋಜಿಸಬೇಕು. | ವಿಷಯ ವಲಯದಲ್ಲಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ಹೊಂದಿರುವುದು ಹಾಗೂ ಪಠ್ಯಕ್ರಮದ ವ್ಯವಹಾರದಲ್ಲಿ ಹೊಸ ವಿಷಯಗಳನ್ನು ತರುವುದು. |
| ಪಠ್ಯಕ್ರಮ | ಪಠ್ಯಕ್ರಮದ ಚೌಕಟ್ಟು | ವಿಷಯ ಅಥವಾ ವರ್ಗದಲ್ಲಿ ಪಠ್ಯಕ್ರಮದ ಗುರಿಗಳು ಹಾಗೂ ಪಠ್ಯದ ಚೌಕಟ್ಟನ್ನು ಸ್ಪಷ್ಟವಾಗಿ ಅರ್ಥೈಸಿ | ವಿಷಯದೊಳಗಿನ ಹಾಗೂ ವಿಷಯಗಳ ನಡುವಿನ ಪಠ್ಯದ ಸಂಪರ್ಕವನ್ನು ಅರ್ಥಮಾಡಿಕೊಳ್ಳಲು | ಇತ್ತೀಚಿನ ಅಭಿವೃದ್ಧಿಗಳು ಹಾಗೂ ಹೊಸ ಜ್ಞಾನವನ್ನು ಪರಿಗಣಿಸಿ ಪಠ್ಯಕ್ರಮದ ನಿರ್ವಹಣೆಯಲ್ಲಿ |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | | ಕೊಳ್ಳುವುದನ್ನು ಅಭಿವೃದ್ಧಿಪಡಿಸುವುದು. | ಹಾಗೂ ಅಭಿವೃದ್ಧಿಪಡಿಸಲು ಸಹೋದ್ಯೋಗಿಗಳ ಜೊತೆಗೆ ಸಹಯೋಗದೊಂದಿಗೆ ಕಾರ್ಯನಿರ್ವಹಿಸಬೇಕು | ಮಾರ್ಪಾಡು ತರುವುದು. |
| ವಿದ್ಯಾರ್ಥಿಗಳ ಕಲಿಕೆಗೆ ವಿಷಯ ಅಭಿವೃದ್ಧಿ | ಸೂಚನಾತ್ಮಕ/ಬೋಧನಶಾಸ್ತ್ರದ ತಂತ್ರಗಳು ಹಾಗೂ ಕಲಿಕಾ ವರ್ಗೀಕರಣಗಳು | ಬೋಧನೆ, ಸಾಮಾನ್ಯ ಬೋಧನಶಾಸ್ತ್ರ ವಿಧಾನಗಳು ಹಾಗೂ ಸಂಪನ್ಮೂಲಗಳಲ್ಲಿ ಬಳಸುವ ಕಲಿಕಾ ವರ್ಗೀಕರಣಗಳು, ಸಾಮಾನ್ಯ ಮಾರ್ಗದರ್ಶಿ ತಂತ್ರಗಳನ್ನು ಅರ್ಥಮಾಡಿ ಕೊಳ್ಳುವುದು. | ಸ್ವಂತ ವಿಷಯ/ ಬೋಧನೆ ವಲಯದಲ್ಲಿ ಅಭಿವೃದ್ಧಿಯ ಸೂಕ್ತ ಕಲಿಕಾ ಗುರಿಗಳು/ ಫಲಿತಾಂಶಗಳನ್ನು ಕಲಿಕಾ ವರ್ಗೀಕರಣಗಳು ಹಾಗೂ ಬೋಧನಶಾಸ್ತ್ರದ ತಂತ್ರಗಳನ್ನು ಬಳಸಿಕೊಂಡು ಅಭಿವೃದ್ಧಿಪಡಿಸಬೇಕು. | ಕಲಿಕಾ ಸಿದ್ಧಾಂತಗಳು, ಮಾರ್ಗದರ್ಶಿ / ಬೋಧನಶಾಸ್ತ್ರದ ತಂತ್ರಗಳು ಹಾಗೂ ಕಲಿಕಾ ವರ್ಗೀಕರಣಗಳ ಬಳಕೆ ಮೂಲಕ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಕೊಂಡಿರುವ ಪಠ್ಯಕ್ರಮದ ಯೋಜನೆಗಳನ್ನು ರೂಪಿಸುವುದು. |
| | ಭಿನ್ನತೆಯುಳ್ಳ ಮಾರ್ಗದರ್ಶನ/ ಬೋಧನೆ | ವಿಭಿನ್ನ ಬೋಧನೆ / ಬೋಧಾ ತಂತ್ರಗಳು ಹಾಗೂ ಕಲಿಕೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವಲ್ಲಿ ಅವರ ಪಾತ್ರವನ್ನು | ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ವಿಭಿನ್ನವಾದ ಬೋಧನೆಗಳನ್ನು ಅನ್ವಯಿಸುವುದು. | ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವಿಕೆ ಯನ್ನು ಹೆಚ್ಚಿಸಲು ಅಭಿವೃದ್ಧಿಗೆ ಸೂಕ್ತವಾದ ವಿಭಿನ್ನ ಚಟುವಟಿಕೆಗಳು ಮತ್ತು ತಂತ್ರಗಳನ್ನು |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | | ಅರ್ಥಮಾಡಿ ಕೊಳ್ಳುವುದು ಹಾಗೂ ಸ್ಪಷ್ಟವಾದ ಗ್ರಹಿಕೆ ಪ್ರದರ್ಶಿಸುವುದು | | ರಚಿಸುವಲ್ಲಿ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುವುದು |
| | ತಾರ್ಕಿಕ ಚಿಂತನೆ, ಸೃಜನಾತ್ಮಕ ಚಿಂತನೆ ಹಾಗೂ ಉನ್ನತ ಮಟ್ಟದ ಚಿಂತನಾ ಕೌಶಲಗಳಂತಹ ಜೀವನ ಕೌಶಲಗಳನ್ನು ಅಭಿವೃದ್ಧಿಪಡಿಸಲು ತಂತ್ರಗಳು ಹಾಗೂ ಸಾಧನಗಳು | ತಾರ್ಕಿಕ ಹಾಗೂ ಸೃಜನಾತ್ಮಕ ಚಿಂತನೆ ಅಭಿವೃದ್ಧಿಪಡಿಸುವ ಮತ್ತು/ ಅಥವಾ ಇತರ ಉನ್ನತ ಮಟ್ಟದ ಯೋಚನಾ ಕೌಶಲಗಳನ್ನು ಅಭಿವೃದ್ಧಿಪಡಿಸುವ ಸಾಮಾನ್ಯ ಅಧ್ಯಯನ ತಂತ್ರಗಳನ್ನು ಆಳವಾಗಿ ಅರ್ಥಮಾಡಿಕೊಳ್ಳುವುದು ಹಾಗೂ ಸ್ಪಷ್ಟವಾದ ಗ್ರಹಿಕೆಯನ್ನು ತೋರ್ಪಡಿಸುವುದು. | ಇಂಥ ಕೌಶಲಗಳನ್ನು ಅಭಿವೃದ್ಧಿಪಡಿಸಲು ಸೂಕ್ತವಾದ ಬೋಧನಶಾಸ್ತ್ರದ ತಂತ್ರಗಳನ್ನು ಬಳಸುವುದು. | ಈ ವಲಯದಲ್ಲಿನ ಇತ್ತೀಚಿನ ಅಭಿವೃದ್ಧಿಗಳ ಜ್ಞಾನದ ಆಧಾರದಲ್ಲಿ ಹೊಸ ಬೋಧನಶಾಸ್ತ್ರದ ತಂತ್ರಗಳನ್ನು ರೂಪಿಸುವುದು. |
| ಕಲಿಕಾ ಯೋಜನೆಗಳು | ಕಲಿಕಾ ಗುರಿಗಳು ಹಾಗೂ ಉದ್ದೇಶಗಳು | ಅಳತೆ ಮಾಡಬಹುದಾದ ಹಾಗೂ ಸಾಧಿಸಬಹುದಾದ ಕಲಿಕಾ ಗುರಿ ಹಾಗೂ ಉದ್ದೇಶವನ್ನು ಅರ್ಥ ಮಾಡಿಕೊಳ್ಳುವುದು | ಪಠ್ಯಕ್ರಮದ ವಿನ್ಯಾಸದ ಜೊತೆಗೆ ಸಂಪರ್ಕ ಹೊಂದಿರುವ ವಿಷಯಕ್ಕೆ ಮಾಪನ ಮಾಡಬಹುದಾದ ಹಾಗೂ ಸಾಧಿಸಬಹು ದಾದ ಕಲಿಕಾ | ಸಾಧಿಸಬಹುದಾದ ಗುರಿಗಳ ಕುರಿತು ಉನ್ನತ ನಿರೀಕ್ಷೆಗಳನ್ನು ಹೊಂದುವುದು ಹಾಗೂ ಅವುಗಳಿಗೆ ಸವಾಲು ಹಾಕುವ ಗುಣ ಬೆಳೆಸಿಕೊಳ್ಳಬೇಕು, |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | | | ಗುರಿಗಳನ್ನು ರೂಪಿಸುವುದು. | ವಿದ್ಯಾರ್ಥಿಗಳ ವಿವಿಧ ಅಗತ್ಯಗಳನ್ನು ಪೂರೈಸಿ ಹಾಗೂ ಅವರ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಬೇಕು. |
| | ಕಲಿಕಾ ಅನುಭವಗಳಿಗೆ ಯೋಜನೆ | ನಿರ್ದಿಷ್ಟ ಕಲಿಕಾ ಉದ್ದೇಶಕ್ಕೆ ಕಲಿಕಾ ಯೋಜನೆ ಅಭಿವೃದ್ಧಿಪಡಿಸುವ ಸಾಮರ್ಥ್ಯ | ಪ್ರತಿ ವಿದ್ಯಾರ್ಥಿಗಳ ಅಗತ್ಯಗಳ ಜೊತೆಗೆ ಸಂಪರ್ಕ ಹೊಂದಿರುವ ಭಿನ್ನವಾದ ಕಲಿಕಾ ಯೋಜನೆಗಳನ್ನು ರೂಪಿಸುವುದು. | ಪಠ್ಯಕ್ರಮದ ಆಧಾರದಲ್ಲಿ ಅಂತರ ಸಂಪರ್ಕ ಹೊಂದಿರುವ ಕಲಿಕಾ ಯೋಜನೆಗಳನ್ನು ರೂಪಿಸುವ ಸಾಮರ್ಥ್ಯ ಹೊಂದುವುದು. |
| ಕಲಿಕೆಯ, ಕಲಿಕೆಗೋಸ್ಕರ, ಕಲಿಕೆಯಾಗಿ ಮೌಲ್ಯಮಾಪನ | ಮೌಲ್ಯಮಾಪನ ತಂತ್ರಗಳು | ವಿವಿಧ ಮಾದರಿಯ ಮೌಲ್ಯಮಾಪನ ತಂತ್ರಗಳು ಹಾಗೂ ಸಾಧನಗಳನ್ನು ಅರ್ಥ ಮಾಡಿಕೊಳ್ಳುವುದು | ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳ ಆಧಾರದಲ್ಲಿ ಸೂಕ್ತ ಮೌಲ್ಯಮಾಪನ ತಂತ್ರಗಳನ್ನು ಆಯ್ಕೆ ಮಾಡುವುದು. | ಸಂಸ್ಥೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಮೌಲ್ಯಮಾಪನ ನೀತಿಗಳ ಜ್ಞಾನವನ್ನು ಪ್ರದರ್ಶಿಸುವುದು. |
| | ಮೌಲ್ಯಮಾಪನ ಅಂಕಿಅಂಶಗಳು | ಮೌಲ್ಯಮಾಪನ ಅಂಕಿಅಂಶಗಳ ಆಧಾರದಲ್ಲಿ ವಿದ್ಯಾರ್ಥಿಗಳನ್ನು ಅರಿತುಕೊಳ್ಳುವುದು. | ಗುರಿಗಳನ್ನು ನಿಗದಿಪಡಿಸಲು ಹಾಗೂ ಕಲಿಕಾ ಯೋಜನೆಗಳನ್ನು ಸಿದ್ಧಪಡಿಸಲು ಮೌಲ್ಯಮಾಪನ | ವಿದ್ಯಾರ್ಥಿಯ/ ಅವರ ತರಗತಿ ನಿರ್ವಹಣೆ ಬಗ್ಗೆ ಕ್ರೋಢೀಕೃತ ಅಭಿಪ್ರಾಯ ರೂಪಿಸಿಕೊಳ್ಳಲು ಅನೇಕ ಮೂಲಗಳಿಂದ |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | | | ಅಂಕಿಅಂಶಗಳನ್ನು ಬಳಸಿಕೊಳ್ಳುವುದು. | ಅಂಕಿಅಂಶಗಳನ್ನು ಸಂಗ್ರಹಿಸಿ ಹಾಗೂ ಸೂಕ್ತ ಪರಿಹಾರದ ಮೂಲಕ ಅವರ ಕಲಿಕೆಗೆ ಬೆಂಬಲ ನೀಡುವುದು. |
| | ಸಂವಹನ ಹಾಗೂ ಪ್ರತಿಕ್ರಿಯೆ | ವಿದ್ಯಾರ್ಥಿಗಳ ನಿರ್ವಹಣಾ ಅಂಕಿಅಂಶಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಜೊತೆಗೆ ಸಂವಹನ ನಡೆಸುವುದು ಮತ್ತು ಪ್ರಗತಿಯ ಬಗ್ಗೆ ಪ್ರತಿಕ್ರಿಯೆ ನೀಡುವುದು. | ವಿದ್ಯಾರ್ಥಿಯ ಪೋಷಕರು ಹಾಗೂ ಪಾಲಕರ ಜೊತೆಗೆ ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಕುರಿತ ನಿರ್ದಿಷ್ಟ ಅಭಿಪ್ರಾಯ ಹಂಚಿಕೊಳ್ಳುವುದು. | ವಿದ್ಯಾರ್ಥಿ ಕಲಿಕೆಗೆ ಮಾರ್ಗದರ್ಶನ ನೀಡಲು ಪೋಷಕರು ಹಾಗೂ ಸಮುದಾಯದ ಸದಸ್ಯರೊಂದಿಗೆ ಕೂಡಿ ಕಾರ್ಯ ನಿರ್ವಹಿಸುವುದು. |
| ಶಿಕ್ಷಣದಲ್ಲಿ ತಂತ್ರಜ್ಞಾನದ ಉಪಯೋಗ ಹಾಗೂ ಸಮನ್ವಯ | | ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದು. | ಬೋಧನೆ-ಕಲಿಕೆ, ಮೌಲ್ಯಮಾಪನ ಹಾಗೂ ತರಗತಿ ನಿರ್ವಹಣೆಗೆ ನೆರವು ನೀಡಲು ಐಸಿಟಿ ಸಾಧನಗಳನ್ನು ಬಳಸುವುದು. | ನಿಮ್ಮ ಹಾಗೂ ಸಹೋದ್ಯೋಗಿಗಳ ಬೋಧನೆ-ಕಲಿಕೆಗೆ ಬೆಂಬಲ ನೀಡಲು ಸೂಕ್ತ ತಾಂತ್ರಿಕ ಸಂಪನ್ಮೂಲಗಳನ್ನು ಸೃಷ್ಟಿಸುವುದು. |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| ತರಗತಿ ಅಂಶಗಳು ಹಾಗೂ ಕ್ರಿಯಾತ್ಮಕಗಳು | ಸುರಕ್ಷಿತ, ಪೋಷಿಸುವ ಹಾಗೂ ಬೆಂಬಲ ನೀಡುವ ಕಲಿಕಾ ವಾತಾವರಣ | ಸುರಕ್ಷಿತ ಹಾಗೂ ಎಲ್ಲವನ್ನೊಳಗೊಂಡ ತರಗತಿ ಸೃಷ್ಟಿಸಲು ಸೌಲಭ್ಯಗಳು ಹಾಗೂ ಸಂಪನ್ಮೂಲಗಳನ್ನು ವ್ಯವಸ್ಥಿತ ಗೊಳಿಸುವುದು. | ವಿದ್ಯಾರ್ಥಿಗಳಿಗೆ ಯಾವುದೇ ಭಯವಿಲ್ಲದೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹ ನೀಡುವುದು ಸೇರಿದಂತೆ ಎಲ್ಲರನ್ನೊಳಗೊಂಡ ಹಾಗೂ ಬೆಂಬಲ ನೀಡುವ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು. | ಒಂದು ಸುರಕ್ಷಿತ ಹಾಗೂ ಎಲ್ಲರನ್ನೊಳಗೊಂಡ ತರಗತಿಯನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿಳನ್ನು ತೊಡಗಿಸಿಕೊಳ್ಳುವುದು . |
| | ತರಗತಿ ನಿರ್ವಹಣೆ | ತರಗತಿ ನಿರ್ವಹಣೆ ಆಯಾಮಗಳ ಜ್ಞಾನವನ್ನು ಹಾಗೂ ಅವುಗಳನ್ನು ಬಳಸುವ ಸಾಮರ್ಥ್ಯವನ್ನು ಪ್ರದರ್ಶಿಸುವುದು. | ವಿದ್ಯಾರ್ಥಿಗಳ ವರ್ತನೆಯಲ್ಲಿನ ವೈವಿಧ್ಯತೆಯನ್ನು ಅರ್ಥಮಾಡಿ ಕೊಳ್ಳುವುದು ಹಾಗೂ ಅದಕ್ಕೆ ಅವಕಾಶ ಕೂಡ ಕಲ್ಪಿಸುವುದು. | ವಿದ್ಯಾರ್ಥಿಗಳಲ್ಲಿ (ಮಾದರಿ) ಸ್ವ-ಶಿಸ್ತು, ವೈಯಕ್ತಿಕ ಜವಾಬ್ದಾರಿ ಹಾಗೂ ನಾಯಕತ್ವ ಗುಣಗಳನ್ನು ಅಭಿವೃದ್ಧಿಪಡಿಸುವುದು. |
| | ಪರಿಣಾಮಕಾರಿ ತರಗತಿ ಸಂವಹನ | ವಿವಿಧ ಮೌಖಿಕ ಹಾಗೂ ಅಮೌಖಿಕ ತರಗತಿ ಸಂವಹನ ತಂತ್ರಗಳನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು | ಕಲಿಕೆಯನ್ನು ಪಾಲ್ಗೊಳ್ಳುವಿಕೆ ಯನ್ನಾಗಿ ಮಾಡಲು ವಿವಿಧ ಮೌಖಿಕ ಹಾಗೂ ಅಮೌಖಿಕ ತರಗತಿ ಸಂವಹನ ತಂತ್ರಗಳನ್ನು ಬಳಸಿ | ತರಗತಿಯಲ್ಲಿ ಸಂವಹನ ಸುಧಾರಣೆಗೆ ಸಹೋದ್ಯೋಗಿಗಳಿಗೆ ಬೆಂಬಲ / ಮಾರ್ಗದರ್ಶನ ನೀಡಲು ರಚನಾತ್ಮಕ |

| ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ | | | | |
|---|---|---|---|---|
| ತರಗತಿಯಲ್ಲಿ ಪರಿಣಾಮಕಾರಿ ಬೋಧನಶಾಸ್ತ್ರದ ಅಭ್ಯಾಸಗಳ ನೆಲೆಯಲ್ಲಿ ಒಬ್ಬ ಶಿಕ್ಷಕ ಏನನ್ನು ತಿಳಿದಿರಬೇಕು, ಅರ್ಥಮಾಡಿಕೊಳ್ಳಬೇಕು ಹಾಗೂ ಮಾಡಲು ಸಾಮರ್ಥ್ಯನಾಗಿರಬೇಕೆಂದು ಎಂಬುದನ್ನು ನಿರೀಕ್ಷಿಸಲಾಗುತ್ತದೆ | | | | |
| ವಲಯ | ಉಪ ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| | | | ಹಾಗೂ ಅದಕ್ಕೆ ಪ್ರತಿಕ್ರಿಯಿಸುವುದು. | ಪ್ರತಿಕ್ರಿಯೆ ನೀಡುವುದು. |
| | ಭಾಷ ವೈವಿಧ್ಯತೆ ಹಾಗೂ ಬಹುಭಾಷಾವಾದ | ಭಾಷಾ ವೈವಿಧ್ಯತೆ ಹಾಗೂ ಸಂಬಂಧಪಟ್ಟ ಭಾಷೆಗಳಲ್ಲಿನ ಪರಿಣತಿಯ ಹೊರತಾಗಿಯೂ ಎಲ್ಲ ಮಕ್ಕಳೆಡೆಗೆ ಎಲ್ಲರನ್ನೊಳಗೊಂಡ ಭಾವನೆ ಪ್ರದರ್ಶಿಸುವುದು. | ಬೋಧನೆ ಹಾಗೂ ಕಲಿಕೆಯನ್ನು ಉತ್ತೇಜಿಸಲು ತರಗತಿಯಲ್ಲಿ ಬಹುಭಾಷಾ ಬಳಕೆಗೆ ಸಹೋದ್ಯೋಗಿಗಳಿಗೆ ಬೆಂಬಲ ನೀಡುವುದು. | ಸಹಪಾಠಿಗಳಲ್ಲಿ ಬೋಧನೆ ಹಾಗೂ ಕಲಿಕೆ ಉತ್ತೇಜಿಸಲು ಬಹುಭಾಷಾವಾದದ ಬಳಕೆಯನ್ನು ಪ್ರತಿಪಾದಿಸುವುದು. |

| ಕೋಷ್ಟಕ 3, ವೃತ್ತಿಪರ ಬೆಳವಣಿಗೆ ಮತ್ತು ಅಭಿವೃದ್ಧಿ | | | |
|---|---|---|---|
| ಮಾನದಂಡ 2: ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿ ಹಾಗೂ ವೃತ್ತಿಪರ ಅಭ್ಯಾಸದಲ್ಲಿ ಅಭಿವೃದ್ಧಿ ಹಾಗೂ ಬೆಳವಣಿಗೆ ಸಾಧ್ಯ. | | | |
| ವಲಯ | ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| ಕಲಿಕಾ ಅಗತ್ಯಗಳು | ಕಲಿಕಾ ಅಗತ್ಯಗಳನ್ನು ಗುರುತಿಸಿ ಹಾಗೂ ಸ್ವಂತ ವೃತ್ತಿಪರ ಅಭಿವೃದ್ಧಿಗೆ ಗುರಿಗಳನ್ನು ನಿಗದಿಪಡಿಸುವುದು. | ಮಧ್ಯಸ್ಥಗಾರರಿಂದ ದೊರೆತ ಮಾಹಿತಿಗಳನ್ನು ಆಧರಿಸಿ ವೃತ್ತಿಪರ ಅಭಿವೃದ್ಧಿ ಯೋಜನೆ ರೂಪಿಸುವುದು. | ಸಹೋದ್ಯೋಗಿಗಳಿಗೆ ವೃತ್ತಿಪರ ಅಭಿವೃದ್ಧಿ ಅವಕಾಶಗಳನ್ನು ಒದಗಿಸಿ ಹಾಗೂ ಯೋಜನೆ ರೂಪಿಸುವುದು. |
| ಆತ್ಮಾವಲೋಕನ ಅಭ್ಯಾಸ | ಆತ್ಮಾವಲೋಕನ ಅಭ್ಯಾಸಗಳ ಅರಿವು ಪ್ರದರ್ಶಿಸುವುದು. | ಸ್ವಂತ ಬೋಧನಾ ಅಭ್ಯಾಸ ಮಾರ್ಪಾಡಿಸಲು ಆತ್ಮಾವಲೋಕನ ಅಭ್ಯಾಸಗಳನ್ನು ಬಳಸುವುದು. | ಆತ್ಮಾವಲೋಕನದ ಅಭ್ಯಾಸಗಳ ಅಳವಡಿಕೆಗೆ ಸಹೋದ್ಯೋಗಿಗಳಿಗೆ ಬೆಂಬಲ/ಮಾರ್ಗದರ್ಶನ ನೀಡುವುದು. |
| ಕಲಿಕಾ ಸಮುದಾಯದಲ್ಲಿ ತೊಡಗಿಕೊಳ್ಳುವಿಕೆ ಹಾಗೂ ಭಾಗವಹಿಸುವಿಕೆ | ಶಾಲೆಯ ಒಳಗೆ ಹಾಗೂ ಹೊರಗೆ ಕಲಿಕಾ ಅವಕಾಶಗಳಲ್ಲಿ ಭಾಗವಹಿಸುವುದು. | ಸಮ್ಮೇಳನಗಳು, ಸೆಮಿನಾರ್‌ಗಳು ಅಥವಾ ವೆಬಿನ್ಯಾರ್‌ಗಳಲ್ಲಿ ಅವರ ಸಂಶೋಧನೆ ಹಾಗೂ ಕಲಿಕೆಯನ್ನು ಪ್ರಸ್ತುತಪಡಿಸುವುದು. | ಶಾಲೆಯೊಳಗೆ ಕಲಿಕಾ ಸಮುದಾಯ ಪ್ರಾರಂಭಿಸಿ ಹಾಗೂ ವೃತ್ತಿಪರ ಅಭಿವೃದ್ಧಿ ಸೆಷನ್ಸ್ ಆಯೋಜಿಸುವುದು. |

# 5. ಅನುಷ್ಠಾನ

ಶಿಕ್ಷಕರ ಗುಣಮಟ್ಟಕ್ಕೆ ರಾಷ್ಟ್ರೀಯ ಕೇಂದ್ರ (ನ್ಯಾಷನಲ್ ಸೆಂಟರ್ ಫಾರ್ ಟೀಚರ್ ಕ್ವಾಲಿಟಿ- ಎನ್.ಸಿ.ಟಿ.ಕ್ಯೂ) ಎಂಬ ಒಂದು ಡಿಜಿಟಲ್ ವೇದಿಕೆಯನ್ನು ಎನ್.ಸಿ.ಟಿ.ಇ.ಯಲ್ಲಿ ಸ್ಥಾಪಿಸಲಾಗಿದೆ. ಇದು ಶಿಕ್ಷಕರ ಸಂಪುಟ ಹೊಂದಿದೆ ಹಾಗೂ ಎನ್.ಪಿ.ಎಸ್.ಟಿ ಕಾರ್ಯನಿರ್ವಹಣೆಯ ಜವಾಬ್ದಾರಿ ಹೊತ್ತಿದೆ. ಇದರೊಂದಿಗೆ ಹೆಚ್ಚಿನ ಸಂಪನ್ಮೂಲ ವ್ಯಕ್ತಿ/ಸಂಸ್ಥೆಗಳನ್ನು ಹುಟ್ಟುಹಾಕಲು ಮಧ್ಯಸ್ಥಗಾರರು/ಅನುಷ್ಠಾನ ಸಂಸ್ಥೆಗಳ ಸಾಮರ್ಥ್ಯ ನಿರ್ಮಾಣದ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ದೇಶಾದ್ಯಂತ 75 ಕೇಂದ್ರ ಸರ್ಕಾರದ ಒಡೆತನದ ಶಾಲೆಗಳ 1175 ಶಿಕ್ಷಕರಿಗೆ ಪ್ರಾಯೋಗಿಕ  ಯೋಜನೆಯಾಗಿ ಎನ್.ಪಿ.ಎಸ್.ಟಿ ಮಾರ್ಗದರ್ಶನ ದಾಖಲೆ ಪರಿಣಾಮದ ಮೌಲ್ಯಮಾಪನ ಹಾಗೂ ಅನುಷ್ಠಾನ ಮಾಡಲಾಗಿದೆ. ಈ ಕೆಳಗೆ ವಿವರಿಸಿರುವ ಪ್ರಾಯೋಗಿಕ ಕಾರ್ಯಕ್ರಮದ ಉದ್ದೇಶಗಳನ್ನು ಸಾಧಿಸಲಾಗಿದೆ:

- ಶಿಕ್ಷಕರ ಸಾಮರ್ಥ್ಯದ ಮಟ್ಟ ಹಾಗೂ ವೃತ್ತಿ ಹಂತವನ್ನು ಗುರುತಿಸುವುದು.
- ಎನ್.ಪಿ.ಎಸ್.ಟಿ ಪ್ರಾಯೋಗಿಕ ಯೋಜನೆ  ಶಿಕ್ಷಕನ ಕೌಶಲ/ಸಾಮರ್ಥ್ಯ ಹಾಗೂ ಬೋಧನಾ ಅಭ್ಯಾಸಗಳ ಮೇಲೆ ಮಾಡಿರುವ ಪರಿಣಾಮವನ್ನು ಅಳೆಯುವುದು.
- ಎನ್.ಪಿ.ಎಸ್.ಟಿ ಅನುಷ್ಠಾನ ತಂತ್ರದ ಕುರಿತು ಮಧ್ಯಸ್ಥಗಾರರ ಅಭಿಪ್ರಾಯವನ್ನು ಸಂಗ್ರಹಿಸುವುದು.

## 5.1 ಕ್ರಿಯಾಯೋಜನೆ

ಶಿಕ್ಷಕರ ಗುಣಮಟ್ಟವನ್ನು ಅಳೆಯಲು ಸ್ಪಷ್ಟವಾಗಿ ವಿವರಿಸಬಲ್ಲ ಮಾನದಂಡಗಳ ಮೂಲಕ ಶಿಕ್ಷಣವನ್ನು ಆಮೂಲಾಗ್ರವಾಗಿ ಪರಿವರ್ತಿಸುವ ಸಾಮರ್ಥ್ಯವನ್ನು ಎನ್.ಪಿ.ಎಸ್.ಟಿ ಹೊಂದಿದೆ. ಹಾಗೆಯೇ ತಮ್ಮ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಶಿಕ್ಷಕರಿಗೆ ಅಭಿವೃದ್ಧಿಯ ಮಾರ್ಗವನ್ನು ಕೂಡ ಅದು ಸೂಚಿಸುತ್ತದೆ. ನಿಯಂತ್ರಿತ ವಿಧಾನದಲ್ಲಿ ಎನ್.ಪಿ.ಎಸ್.ಟಿ ಪ್ರಾಯೋಗಿಕ ಹಂತದಲ್ಲಿ ಅನುಷ್ಠಾನ ಯೋಜನೆಯನ್ನು ನಿರೂಪಿಸಲಾಗಿದೆ ಹಾಗೂ ಪರೀಕ್ಷಿಸಲಾಗಿದೆ. ಅನುಷ್ಠಾನದ ಪ್ರಕ್ರಿಯೆಗಳು ಈ ಕೆಳಗಿನ ಹಂತಗಳನ್ನು ಒಳಗೊಂಡಿವೆ:

- ನಿಗದಿತ ಗುಂಪಿನ ನೋಂದಣಿ
- ಮಾನದಂಡಗಳ ಅರ್ಜಿ-ಶಿಕ್ಷಕನ ವೃತ್ತಿ ಹಂತ ಗುರುತಿಸುವುದು
- ಗುಣಾತ್ಮಕ ಮೌಲ್ಯಮಾಪನ

ಎನ್.ಪಿ.ಎಸ್.ಟಿ ಪ್ರಕಾರ ಒಬ್ಬ ಶಿಕ್ಷಕ ತನ್ನ ಕೌಶಲಗಳು ಹಾಗೂ ಸಾಮರ್ಥ್ಯವನ್ನು ತನ್ನ ಅಧ್ಯಾಪನಾ ವೃತ್ತಿ ಬದುಕಿನುದ್ದಕ್ಕೂ ಅಭಿವೃದ್ಧಿಪಡಿಸಿಕೊಳ್ಳಬೇಕು. ಶಿಕ್ಷಕರು ತಮ್ಮ ಸಾಮರ್ಥ್ಯದ ನಕಾಶೆಯನ್ನು ಸ್ವಮೌಲ್ಯಮಾಪನ ಸಾಧನಗಳು ಹಾಗೂ ಇತರ ಮೌಲ್ಯಮಾಪನ ಸಾಧನಗಳ ಮೂಲಕ ರೂಪಿಸಿಕೊಳ್ಳಬಹುದು. ಅಧಿಕೃತ ಮೌಲ್ಯಮಾಪನವು ಒಬ್ಬ ಶಿಕ್ಷಕನ ಸಾಮರ್ಥ್ಯದ ಪೋರ್ಟ್ ಫೋಲಿಯೋ ಅಭಿವೃದ್ಧಿಯನ್ನು ಒಳಗೊಂಡಿದೆ. ಇದು ಬೋಧನೆ ನಿರ್ವಹಣೆಯ ಸಾಕ್ಷ್ಯ, ತರಗತಿಯಲ್ಲಿನ ಪ್ರಾತ್ಯಕ್ಷಿಕೆ, ಮಧ್ಯಸ್ಥಗಾರರಿಂದ ಅಭಿಪ್ರಾಯ ಸಂಗ್ರಹ ಅಥವಾ ಮಾರ್ಗದರ್ಶಕರು ಹಾಗೂ ಸಮಾನವಯಸ್ಕರು ಗಮನಿಸಿದ ವರದಿಗಳನ್ನೊಳಗೊಂಡಿರುತ್ತದೆ. ಕಾರ್ಯನಿರ್ವಹಣೆ ಸೂಚ್ಯಂಕಗಳು (ಪಿಐ) ನಮೂನೆ ಇತ್ಯಾದಿ ಸೇರಿದಂತೆ ಪರೀಕ್ಷೆ/ಮೌಲ್ಯಮಾಪನಕ್ಕೆ ಸಾಧನಗಳು/ಸಾಮಗ್ರಿಯನ್ನು ಅಧ್ಯಾಯ-6ರಲ್ಲಿ ನೀಡಿರುವ ಸಲಹಾತ್ಮಕ ಮೌಲ್ಯಮಾಪನ ಚೌಕಟ್ಟಿನ ಆಧಾರದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.

ಎನ್.ಪಿ.ಎಸ್.ಟಿ ಜಾರಿಗೆ ಕ್ರಿಯಾಯೋಜನೆ ಈ ಕೆಳಗಿನಂತಿದೆ:

ಎ) ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆ ಹಾಗೂ ಅನುಷ್ಠಾನದ ಹೊಣೆ ಹೊತ್ತಿರುವ ಸಂಸ್ಥೆಗಳು/ಏಜೆನ್ಸಿಗಳ ಸಾಮರ್ಥ್ಯ ನಿರ್ಮಾಣ.

ಬಿ) ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಂದ ಎನ್.ಪಿ.ಎಸ್.ಟಿ ಮಾರ್ಗದರ್ಶಿ ದಾಖಲೆ ಅಳವಡಿಕೆ.

ಸಿ) ಎನ್.ಇ.ಪಿ- 2020 ಪ್ಯಾರಾ 5.20ನಲ್ಲಿ ಉಲ್ಲೇಖಿಸಿರುವಂತೆ ಶಿಕ್ಷಕ ವೃತ್ತಿಪರ ಅಭಿವೃದ್ಧಿ ಜೊತೆಗೆ ಎನ್.ಪಿ.ಎಸ್.ಟಿ ಸಂಯೋಜನೆ, ಸಾಮರ್ಥ್ಯ ನಿರ್ಮಾಣ, ತರಬೇತಿ ಇತ್ಯಾದಿ.

ಡಿ) ಸಾಮರ್ಥ್ಯಗಳನ್ನು ತಲುಪಲು ಶಿಕ್ಷನಿಗೆ ನೆರವು ನೀಡುವ ಸಂಪನ್ಮೂಲಗಳು/ಸಾಮಗ್ರಿ/ ಸ್ವ-ಅಭಿವೃದ್ಧಿ ಮಾರ್ಗಸೂಚಿ/ಮೌಲ್ಯಮಾಪನ ಸಾಧನಗಳ ಅಭಿವೃದ್ಧಿ.

## 5.2 ಅನ್ವಯಿಸುವಿಕೆ

ಎ) ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸರ್ಕಾರ ನಿಯೋಜಿಸಿರುವ ಸೂಕ್ತವಾದ ಸಂಸ್ಥೆ ಎನ್.ಪಿ.ಎಸ್.ಟಿ ಅನುಷ್ಠಾನ ಮಾಡಲಾಗುತ್ತದೆ. ಇದೇ ಮಾದರಿಯಲ್ಲಿ ಕೇಂದ್ರ ಸರ್ಕಾರದ ಅಡಿಯಲ್ಲಿರುವ ಸಂಸ್ಥೆಗಳು/ಮಂಡಳಿಗಳಲ್ಲಿ ಕೂಡ ಎನ್.ಪಿ.ಎಸ್.ಟಿ ಅನುಷ್ಠಾನವಾಗಬೇಕು.
ಬಿ) ಶಿಕ್ಷಕನ ವೃತ್ತಿಜೀವನದ ಅಭಿವೃದ್ಧಿ ಹಾಗೂ ವೃತ್ತಿ ನಿರ್ವಹಣೆಗೆ ಎನ್.ಪಿ.ಎಸ್.ಟಿ ಮಾರ್ಗದರ್ಶನ ದಾಖಲೆ ಜೊತೆಗೆ ಸಂಯೋಜಿಸಲು ಹಾಗೂ ಅನುಷ್ಠಾನಕ್ಕಾಗಿ ನೇಮಕಗೊಂಡಿರುವ ಸಂಸ್ಥೆ (ಕೇಂದ್ರ/ರಾಜ್ಯ) ವಿಸ್ತೃತವಾದ ಪ್ರಕ್ರಿಯೆಯನ್ನು ರೂಪಿಸುತ್ತದೆ ಹಾಗೂ ಸೂಚನೆಗಳನ್ನು ನೀಡುತ್ತದೆ.

ಸಿ) ಎನ್.ಪಿ.ಎಸ್.ಟಿ.ಯಲ್ಲಿ ಎನ್.ಸಿ.ಟಿ.ಇ.ಯನ್ನು ಸಂಪರ್ಕಿಸುವ ಉದ್ದೇಶದಿಂದ ಸಂಬಂಧಪಟ್ಟ ಸರ್ಕಾರ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸುತ್ತದೆ.

ಡಿ) ನೋಡಲ್ ಅಧಿಕಾರಿಗಳಿಗೆ ಎನ್.ಸಿ.ಟಿ.ಇ. ಸಭೆಗಳು/ಕಾರ್ಯಗಾರಗಳನ್ನು ಏರ್ಪಡಿಸುತ್ತದೆ.

ಇ) ಎನ್.ಪಿ.ಎಸ್.ಟಿ. ಅನುಷ್ಠಾನಕ್ಕೆ ಹೊಣೆಯಾಗಿರುವ ಪ್ರತಿ ನಿಯೋಜಿತ ಸಂಸ್ಥೆ ಎನ್.ಸಿ.ಟಿ.ಇ. ಜೊತೆಗೆ ಮಾಹಿತಿಗಳನ್ನು ಹಂಚಿಕೊಳ್ಳುತ್ತದೆ.

ಎಫ್) ಎನ್.ಸಿ.ಟಿ.ಇ. ಮಾಹಿತಿಗಳ ಸಂಚಯದ ನಿರ್ವಹಣೆ ಮಾಡುತ್ತದೆ. ಇನ್ನು ಸಾಧನಗಳು ಸೇರಿದಂತೆ ಸಂಪನ್ಮೂಲಗಳು ಹಾಗೂ ತಜ್ಞರ ಸಂಪುಟವಾಗಿರುವ ಇದು, ಮಾಹಿತಿಗಳನ್ನು ಸಂಬಂಧಪಟ್ಟ ಸರ್ಕಾರ/ ಸಂಸ್ಥೆ ಜೊತೆಗೆ ಹಂಚಿಕೊಳ್ಳುತ್ತದೆ.

ಜಿ) ಎನ್.ಇ.ಪಿ. 2020 ಪ್ಯಾರಾ 5.20ನಲ್ಲಿ ಉಲ್ಲೇಖಿಸಿರುವಂತೆ ದೇಶಾದ್ಯಂತ ಎನ್.ಪಿ.ಎಸ್.ಟಿ.ಯನ್ನು ಶಿಕ್ಷಕನ ವೃತ್ತಿಪರ ಅಭಿವೃದ್ಧಿ ಹಾಗೂ ವೃತ್ತಿ ನಿರ್ವಹಣೆಯೊಂದಿಗೆ ಸಂಯೋಜಿಸುತ್ತದೆ.

## 5.3 ನಿಯಮಿತ ಪರಿಶೀಲನೆ

ಮಾನದಂಡಗಳ ಪರಿಣಾಮಕಾರಿತ್ವದ ಪ್ರಾಯೋಗಿಕ ವಿಶ್ಲೇಷಣೆ ಆಧಾರದಲ್ಲಿ ವೃತ್ತಿಪರ ಮಾನದಂಡಗಳನ್ನು ನಿಯಮಿತವಾಗಿ ಪರಿಶೀಲಿಸಲಾಗುತ್ತದೆ ಹಾಗೂ ಪರಿಷ್ಕರಿಸಲಾಗುತ್ತದೆ.

# 6. ಎನ್.ಪಿ.ಎಸ್.ಟಿ ಚೌಕಟ್ಟಿನ ಆಧಾರದಲ್ಲಿ ಮೌಲ್ಯಮಾಪನ ಸಾಧನಗಳು

## ಮಾನದಂಡ 1: ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆ

| ವಲಯ1: ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಿರುವ ಸಾಂವಿಧಾನಿಕ ಮೌಲ್ಯಗಳು. |
|---|
| **ಎಸ್.ಡಿ 1.1- ಕಾರಣ, ಆದ್ಯತೆಗಳು, ಮನನ ಹಾಗೂ ಸಾಂವಿಧಾನಿಕ ಮೌಲ್ಯಗಳನ್ನು ಉಲ್ಲೇಖಿಸಿ ವಿವರಿಸುವ ಸಾಮರ್ಥ್ಯ.** |
| 1.1.1. ಎಲ್ಲ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳನ್ನು ಗೌರವದಿಂದ ಹಾಗೂ ನ್ಯಾಯೋಚಿತವಾಗಿ ನಡೆಸಿಕೊಳ್ಳುವುದು.<br>1.1.2. ಜನರು ತಮ್ಮ ಆಲೋಚನೆಗಳು ಹಾಗೂ ಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ನೆರವಾಗುವಂತಹ ಸುರಕ್ಷಿತ ವಾತಾವರಣವನ್ನು ಸೃಷ್ಟಿಸುವ ಮೂಲಕ ಎಲ್ಲರ ನಡುವೆ ಏಕತೆ ಹಾಗೂ ಸಾಮರಸ್ಯವನ್ನು ಉತ್ತೇಜಿಸುವುದು. |
| **ಎಸ್.ಡಿ 1.2: ಮಾಹಿತಿಯನ್ನು ನೈತಿಕವಾಗಿ, ಜವಾಬ್ದಾರಿಯುತವಾಗಿ ಬಳಸುವ ಸಾಮರ್ಥ್ಯ ಹಾಗೂ ವಿದ್ಯಾರ್ಥಿಗಳ ಘನತೆ ಕಾಪಾಡುವುದು.** |
| 1.2.1 ವಿದ್ಯಾರ್ಥಿ ಮಾಹಿತಿ ಸಂರಕ್ಷಿಸುವುದು ಹಾಗೂ ಮೇಲಾಧಿಕಾರಿಗಳೊಂದಿಗೆ ನಿರ್ದಿಷ್ಟ ಉದ್ದೇಶಕ್ಕೆ ಅಗತ್ಯವಿದ್ದರೆ ಮಾತ್ರ ಹಂಚಿಕೊಳ್ಳಬೇಕೇ ಹೊರತು ಬೇರೆ ಸಂದರ್ಭಗಳಲ್ಲಿ ಹಂಚಿಕೊಳ್ಳುವಂತಿಲ್ಲ. |
| **ಎಸ್.ಡಿ 1.3 - ಭಾರತೀಯ ಸಂವಿಧಾನದ ವಿಧಿ 51ಎಯಲ್ಲಿರುವ ಮೂಲಭೂತ ಕರ್ತವ್ಯಗಳ ಅರಿವು ಹಾಗೂ ಅಭ್ಯಾಸ.** |
| 1.3.1. ಎಲ್ಲ ವಿದ್ಯಾರ್ಥಿಗಳಲ್ಲಿ ನಮ್ಮ ರಾಷ್ಟ್ರದ ಕುರಿತು ಪ್ರೇಮ ಹಾಗೂ ನಮ್ಮ ಶ್ರೀಮಂತ ಹಾಗೂ ವೈವಿಧ್ಯ ಪರಂಪರೆ ಬಗ್ಗೆ ಗೌರವ ಭಾವನೆಯನ್ನು ಹುಟ್ಟು ಹಾಕುವುದು.<br>1.3.2. ಪರಿಸರ ಸಂರಕ್ಷಣೆಗೆ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಿ, ವೈಜ್ಞಾನಿಕ ಮನೋಭಾವ ನಿರ್ಮಿಸಿ ಹಾಗೂ ರಾಷ್ಟ್ರೀಯ ಅಭಿವೃದ್ಧಿಗೆ ಕೊಡುಗೆ ನೀಡುವುದು. |
| **ಎಸ್.ಡಿ 1.4 -ಕಾನೂನು ನಿಬಂಧನೆಗಳನ್ನು ಅರ್ಥೈಸಿಕೊಳ್ಳುವುದು, ನಿಯಮಗಳು, ನಿಬಂಧನೆಗಳು, ನೀತಿಗಳು ಹಾಗೂ ಸಂಘರ್ಷದ ಪರಿಸ್ಥಿತಿಯಲ್ಲಿ ನೈತಿಕ ಕಾರಣ ಹಾಗೂ ಸಂಕೀರ್ಣ ವಾತಾವರಣದಲ್ಲಿ ಸಂಧಾನ ನಡೆಸುವ ಸಾಮರ್ಥ್ಯವಿರಬೇಕು.** |
| 1.4.1. ಪ್ರಸ್ತಾಪಿರುವ ನಿಯಮಗಳನ್ನು (ಶಾಲೆ ಹಾಗೂ ರಾಜ್ಯದ ನಿಬಂಧನೆಗಳು) ಶ್ರದ್ಧೆಯಿಂದ ಅನುಸರಿಸುವುದು ಹಾಗೂ ಅವುಗಳನ್ನು ನಿರ್ಲಕ್ಷಿಸುವುದರಿಂದ ಅಥವಾ ಮುರಿಯುವುದರಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಅರಿವು ಹೊಂದಿರುವುದು.<br>1.4.2. ನಿಯಮಗಳನ್ನು ಅನುಸರಿಸುವಂತೆ ವಿದ್ಯಾರ್ಥಿಗಳು ಹಾಗೂ ಸಹೋದ್ಯೋಗಿಗಳಿಗೆ ಪ್ರೋತ್ಸಾಹ ನೀಡಿ ಹಾಗೂ ಸಮಸ್ಯೆಗಳು ಎದುರಾದಾಗ ಅವುಗಳನ್ನು ಪರಿಹರಿಸಲು ನೆರವು ನೀಡಬೇಕು. |

| ವಲಯ 2: ವೃತ್ತಿಪರ ಸಂಬಂಧಗಳು |
|---|
| **ಎಸ್.ಡಿ 2.1: ವಿದ್ಯಾರ್ಥಿಗಳಿಗೆ ಪಠ್ಯೇತ್ತರ ಅವಕಾಶಗಳನ್ನು ಸೃಷ್ಟಿಸಲು ಇತರ ವೃತ್ತಿಪರರು ಹಾಗೂ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸುವುದು.** |
| 2.1.1. ವಿದ್ಯಾರ್ಥಿಗಳಿಗೆ ವೈವಿಧ್ಯಮಯ ಕಲಿಕಾ ಅವಕಾಶಗಳನ್ನು ಸೃಷ್ಟಿಸಲು ಶಾಲೆಯಲ್ಲಿ ಸಹೋದ್ಯೋಗಿಗಳು ಹಾಗೂ ಇತರ ವೃತ್ತಿಪರರ ಜೊತೆಗೆ ಸೇರಿ ಕೆಲಸ ಮಾಡುವುದು.<br><br>2.1.2.ವಿದ್ಯಾರ್ಥಿಗಳಿಗೆ ನೈಜ್ಯವಾದ ಗುರಿಗಳನ್ನು ನಿಗದಿಪಡಿಸಿ. ಹಾಗೆಯೇ ಪ್ರತಿಯೊಬ್ಬರೂ ಸುರಕ್ಷಿತ ಹಾಗೂ ಗೌರವಿಸಲ್ಪಡುವ ಬೆಂಬಲದಾಯಕ ಕಲಿಕಾ ವಾತಾವರಣವನ್ನು ಸೃಷ್ಟಿಸುವ ಮೂಲಕ ಆ ಗುರಿಗಳನ್ನು ಸಾಧಿಸಲು ನೆರವು ನೀಡುವುದು. |
| **ಎಸ್.ಡಿ 2.2 - ಮಗುವಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ಪೋಷಕರು ಹಾಗೂ ಸಮುದಾಯದ ಪಾತ್ರವನ್ನು ಅರ್ಥ ಮಾಡಿಕೊಳ್ಳುವುದು.** |
| 2.2.1. ಪೋಷಕರು ಹಾಗೂ ಸಮುದಾಯದ ಜೊತೆಗೆ ನಂಬಿಕೆಯ ಸಂಬಂಧ ನಿರ್ಮಿಸಿಕೊಳ್ಳಬೇಕು. ಈ ಮೂಲಕ ವಿದ್ಯಾರ್ಥಿಗಳಿಗೆ ಕಲಿಕೆಗೆ ಮನೆ ಹಾಗೂ ಸಮಾಜದಲ್ಲಿ ಬೆಂಬಲ ಸಿಗುವಂತೆ ನೋಡಿಕೊಳ್ಳುವುದು. |
| **ಎಸ್.ಡಿ 2.3 - ಸಂಪನ್ಮೂಲಗಳು ಇತ್ಯಾದಿ ಹಂಚಿಕೊಳ್ಳಲು ಸ್ವಂತ ಶಾಲೆ ಹಾಗೂ ಇತರ ಸಂಸ್ಥೆಗಳು ಹಾಗೂ ಸಮುದಾಯಗಳ ನಡುವೆ ಪರಸ್ಪರ ಸೌಹಾರ್ದ ಸಂಬಂಧ ನಿರ್ವಹಿಸುವ ಸಾಮರ್ಥ್ಯ.** |
| 2.3.1. ವಿದ್ಯಾರ್ಥಿಗಳ ಕಲಿಕೆ ಅನುಭವ ಹೆಚ್ಚಿಸಲು ಇತರ ಶಾಲೆಗಳು ಹಾಗೂ ಸಮುದಾಯದಲ್ಲಿನ ಶಿಕ್ಷಕರ ಜೊತೆಗೆ ಬಲಿಷ್ಠ ಸಂಬಂಧಗಳನ್ನು ನಿರ್ಮಾಣ ಮಾಡುವುದು. |
| **ಎಸ್.ಡಿ 2.4 - ಶಾಲೆಯ ಒಳಗೆ ಹಾಗೂ ಹೊರಗಿನ ವಿವಿಧ ಮಧ್ಯಸ್ಥಗಾರರ ಜೊತೆಗೆ ಸಂಬಂಧಗಳನ್ನು ವೃದ್ಧಿಸುವ ಜೊತೆಗೆ ಸಂಕೀರ್ಣ ಹಾಗೂ ಸವಾಲಿನಿಂದ ಕೂಡಿದ ಸಂದರ್ಭಗಳಲ್ಲಿ ವ್ಯವಹರಿಸುವ ಸಾಮರ್ಥ್ಯವನ್ನು ಹೊಂದಿರಬೇಕು.** |
| 2.4.1. ತಾಳ್ಮೆ ಹಾಗೂ ನಂಬಿಕೆಯಿಂದ ಸಂಬಂಧಗಳನ್ನು ನಿರ್ವಹಣೆ ಮಾಡುವುದು. ಹಾಗೆಯೇ ಪ್ರತಿಯೊಬ್ಬರೂ ಸಾಂವಿಧಾನಿಕ ಮೌಲ್ಯಗಳನ್ನು ಹಾಗೂ ವರ್ತನೆಗಳನ್ನು ಎತ್ತಿ ಹಿಡಿಯುವುದನ್ನು ಖಚಿತಪಡಿಸುವುದು. |
| **ಎಸ್.ಡಿ 2.5 - ಎಲ್ಲ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗುರಿಗಳನ್ನು ಸಾಧಿಸುವ ನಿಟ್ಟಿನಲ್ಲಿ ಸಂಸ್ಥೆಯು ಪರಿಣಾಮಕಾರಿಯಾಗಿ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸಲು ಗುರಿಗಳು ಹಾಗೂ ತಂತ್ರಗಳನ್ನು ರೂಪಿಸುವ ಸಾಮರ್ಥ್ಯ ಹೊಂದಬೇಕು. ಹಾಗೆಯೇ ಶಾಲೆಯ ಎಲ್ಲ ಸದಸ್ಯರಿಗೆ ಅನುಕೂಲಕರ ಹಾಗೂ ಆರೋಗ್ಯಕರ ಕಾರ್ಯನಿರ್ವಹಣೆಯ ಪರಿಸರವನ್ನು ರೂಪಿಸಬೇಕು.** |
| 2.5.1 ವಿದ್ಯಾರ್ಥಿಗಳಿಗೆ ನೈಜ್ಯವಾದ ಗುರಿಗಳನ್ನು ನಿಗದಿಪಡಿಸಬೇಕು. ಹಾಗೆಯೇ ಪ್ರತಿಯೊಬ್ಬರೂ ಸುರಕ್ಷಿತ ಹಾಗೂ ಗೌರವಿಸಲ್ಪಡುವ ಬೆಂಬಲದಾಯಕ ಕಲಿಕಾ ವಾತಾವರಣವನ್ನು ಸೃಷ್ಟಿಸುವ ಮೂಲಕ ಆ ಗುರಿಗಳನ್ನು ಸಾಧಿಸಲು ನೆರವು ನೀಡುವುದು.<br><br>2.5.2 ಸ್ವಯಂ ಹಾಗೂ ಸಹೋದ್ಯೋಗಿಗಳಿಗೆ ಒಂದು ಉತ್ಪಾದಕ ಕಾರ್ಯ ನಿರ್ವಹಣೆ ಸಂಸ್ಕೃತಿ ಸೃಷ್ಟಿಸಲು ನೆರವು ನೀಡುವುದು. |

## ಮಾನದಂಡ 2: ಜ್ಞಾನ ಹಾಗೂ ಅಭ್ಯಾಸ

| ವಲಯ 3: ಪ್ರತಿ ಮಗುವಿನ ವಿಶಿಷ್ಟ ಸಾಮರ್ಥ್ಯವನ್ನು ಗುರುತಿಸುವುದು, ಮಾನ್ಯತೆ ನೀಡುವುದು ಹಾಗೂ ಪ್ರೋತ್ಸಾಹಿಸುವುದು. | | |
|---|---|---|
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಎಸ್.ಡಿ 3.1 - ಮಗುವಿನ ಅಭಿವೃದ್ಧಿ ಹಾಗೂ ಕಲಿಕೆ** | | |
| **ಅಭಿವೃದ್ಧಿಯ ವಿವಿಧ ಹಂತಗಳು ಹಾಗೂ ವಲಯಗಳಿಗೆ ಸಂಬಂಧಿಸಿದ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳುವುದು (ಅರಿವು, ಭಾಷೆ, ಸಾಮಾಜಿಕ, ಭಾವನಾತ್ಮಕ ಹಾಗೂ ಭೌತಿಕ)** | **ಕಲಿಕೆಯ ವಿನ್ಯಾಸಗಳು ಹಾಗೂ ವೈಯಕ್ತಿಕ ಅಭಿವೃದ್ಧಿಯನ್ನು ಗುರುತಿಸಲು ಜ್ಞಾನ ಹಾಗೂ ಮಗುವಿನ ಅಭಿವೃದ್ಧಿ ಅರಿವನ್ನು ಅನ್ವಯಿಸುವುದು .** | **ಸಮಾನ ವಯಸ್ಕರಿಗೆ ಮಕ್ಕಳ ಅಭಿವೃದ್ಧಿ ಸಿದ್ಧಾಂತಗಳ ಮಾದರಿಯ ಅನ್ವಯ.** |
| 3.1.1. ಕಲಿಕಾ ಸಾಮರ್ಥ್ಯ ಹಾಗೂ ಸಾಧನೆಗಳಿಗೆ ತರಗತಿಗಳ ವಿವಿಧ ಅಗತ್ಯಗಳನ್ನು ಪೂರೈಸುವುದು. | 3.1.2. ವಿದ್ಯಾರ್ಥಿಗಳ ವಿವಿಧ ಕಲಿಕಾ ಅಗತ್ಯಗಳ ಅರಿವನ್ನು ಬಳಸಿಕೊಳ್ಳುವುದು ಹಾಗೂ ಈ ಜ್ಞಾನವನ್ನು ಪಠ್ಯದ ಯೋಜನೆ ರೂಪಿಸುವಲ್ಲಿ ಹಾಗೂ ನಿರ್ವಹಣೆಯಲ್ಲಿ ಬಳಸಿಕೊಳ್ಳುವುದು. | 3.1.3. ವಿದ್ಯಾರ್ಥಿಗಳ ವಿವಿಧ ಕಲಿಕಾ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಸಮಾನವಯಸ್ಕರಿಗೆ ನೆರವು ನೀಡುವುದು ಹಾಗೂ ಈ ಜ್ಞಾನವನ್ನು ಪಠ್ಯದ ಯೋಜನೆ ರೂಪಿಸುವಲ್ಲಿ ಹಾಗೂ ನಿರ್ವಹಣೆಯಲ್ಲಿ ಬಳಸಿಕೊಳ್ಳುವುದು. |
| **ಎಸ್.ಡಿ 3.2 - ಕಲಿಕಾರ್ಥಿಗಳ ವೈವಿಧ್ಯತೆ** | | |
| ವಿವಿಧ ವಿಧದ ಕಲಿಕಾರ್ಥಿಗಳ ವೈವಿಧ್ಯತೆಯ (ಕಲಿಕಾ ಸ್ಟೈಲ್ ಗಳು, ಕಲಿಕಾ ಅಗತ್ಯಗಳು, ಸಾಮಾಜಿಕ ಆರ್ಥಿಕ ಸ್ಟೇಟಸ್, ಕಲೆ, ಭಾಷೆ, ಕುಟುಂಬ ವಿನ್ಯಾಸ ಇತ್ಯಾದಿ) ಬಗ್ಗೆ ಸ್ಪಷ್ಟ ಅರಿವು ಬೆಳೆಸಿಕೊಳ್ಳಬೇಕು. ಶಾಲೆ ಹಾಗೂ ತರಗತಿಗಳಲ್ಲಿ ಈ ವೈವಿಧ್ಯತೆಗೆ ಸ್ಪಂದಿಸುವುದು. | ವಿದ್ಯಾರ್ಥಿಗಳ ವೈವಿಧ್ಯಮಯ ಅಗತ್ಯಗಳನ್ನು ಪೂರೈಸಲು ಹಾಗೂ ಎಲ್ಲವನ್ನೂ ಒಳಗೊಂಡ ತರಗತಿಯನ್ನು ಸೃಷ್ಟಿಸಲು ಕಲಿಕಾ ಸಂಪನ್ಮೂಲಗಳ ಜ್ಞಾನವನ್ನು ಅನ್ವಯಿಸುವುದು. | ತರಗತಿಯ ಅನುಭವದ ಆಧಾರದಲ್ಲಿ ವೈಯಕ್ತಿಕ ವಿದ್ಯಾರ್ಥಿಗಳ ವಿವಿಧ ಅಗತ್ಯಗಳನ್ನು ಪತ್ತೆಹಚ್ಚುವ ಹಾಗೂ ಪೂರೈಸುವ ಸಾಮರ್ಥ್ಯ. |
| 3.2.1. ಎಲ್ಲ ವಿದ್ಯಾರ್ಥಿಗಳನ್ನು ಸಮಾನವಾಗಿ ನಡೆಸಿಕೊಳ್ಳುವುದು ಹಾಗೂ ಅವರ ಸಾಮಾಜಿಕ, ಸಾಂಸ್ಕೃತಿಕ, ಲಿಂಗ ಅಥವಾ ಧಾರ್ಮಿಕ ಹಿನ್ನೆಲೆಗಳ ಹೊರತಾಗಿ ಶಾಲೆ ಹಾಗೂ ತರಗತಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು. | 3.2.2.ವೈವಿಧ್ಯಮಯ ಸಂಪನ್ಮೂಲಗಳನ್ನು ನೀಡಿ ಹಾಗೂ ಅವರ ದೃಷ್ಟಿಕೋನದಲ್ಲೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಾಗೂ ವೈಯಕ್ತಿಕ ವಿವರಣೆಗಳನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವುದು. | 3.2.3. ವೈಯಕ್ತಿಕ ಕಲಿಕಾರ್ಥಿಗಳ ಅಗತ್ಯಗಳನ್ನು ಪತ್ತೆಹಚ್ಚಿ ಹಾಗೂ ಅದಕ್ಕೆ ಅನುಗುಣವಾಗಿ ಬೋಧನೆ ಕಲಿಕೆ ಯೋಜನೆಗಳನ್ನು ಅಳವಡಿಸಿಕೊಳ್ಳುವುದು. |

| | | |
|---|---|---|
| **ಎಸ್.ಡಿ 3.3 - ಅಂಗವೈಕಲ್ಯ ಹಾಗೂ ವಿಶೇಷ ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳು** | | |
| **ವಿವಿಧ ವಿಧದ ಅಂಗವೈಕಲ್ಯಗಳು ಹಾಗೂ ಅವುಗಳ ವಿಶೇಷ ಕಲಿಕಾ ಅಗತ್ಯಗಳ ಜ್ಞಾನವನ್ನು ಪ್ರದರ್ಶಿಸಬೇಕು. ಹಾಗೆಯೇ ವಿಶೇಷ ಮಕ್ಕಳ ಅಗತ್ಯಗಳು ಹಾಗೂ ಅವರ ಕಲಿಕೆಯನ್ನು ಬೆಂಬಲಿಸುವ ಯೋಜನೆಗಳನ್ನು ರೂಪಿಸಬೇಕು.** | **ತರಗತಿಯಲ್ಲಿನ ವಿವಿಧ ವಿದ್ಯಾರ್ಥಿಗಳ ಅಗತ್ಯಗಳನ್ನು ಗುರುತಿಸಲು ಹಾಗೂ ಪೂರೈಸಲು ವಿಶೇಷ ಅಗತ್ಯಗಳ ಜ್ಞಾನವನ್ನು ಅನ್ವಯಿಸಬೇಕು.** | **ತಜ್ಞರ ಹಸ್ತಕ್ಷೇಪದ ಅವಶ್ಯಕತೆಯಿರುವ ವಿಶೇಷ ಅಗತ್ಯಗಳನ್ನು ಗುರುತಿಸುವ ಸಾಮರ್ಥ್ಯ ಹಾಗೂ ಇಂಥ ಸನ್ನಿವೇಶಗಳನ್ನು ನಿರ್ವಹಿಸುವುದುದು ಹೇಗೆ ಎಂಬ ಬಗ್ಗೆ ಸಮಾನ ಮನಸ್ಕರಿಗೆ ಅಗತ್ಯ ಸಲಹೆಗಳನ್ನು ಒದಗಿಸಬೇಕು.** |
| 3.3.1. ತರಗತಿ ಪರಿಸರ ಹಾಗೂ ಸಂಪನ್ಮೂಲಗಳನ್ನು ಅಂಗವೈಕಲ್ಯ ಹೊಂದಿರುವ ಹಾಗೂ ವಿಶೇಷ ವಿದ್ಯಾರ್ಥಿಗಳಿಗೆ ಸಂವೇದನಶೀಲತೆಯಿಂದ ಜೋಡಿಸಬೇಕು ಹಾಗೂ ಸಿಗುವಂತೆ ಮಾಡಬೇಕು.<br>3.3.2. ಓದು ಅಥವಾ ಗಣಿತ ಸೇರಿದಂತೆ ತರಗತಿ ಕೆಲಸಗಳಲ್ಲಿ ಸಮಸ್ಯೆ ಹೊಂದಿರುವ ವಿದ್ಯಾರ್ಥಿಗಳ ಕಡೆಗೆ ತಾಳ್ಮೆ ಹಾಗೂ ಗಮನ ಹರಿಸುತ್ತಾರೆಯೇ? | 3.3.3. ವೈಯಕ್ತಿಕ ವಿದ್ಯಾರ್ಥಿಯ ಅಗತ್ಯಗಳನ್ನು ಆಧರಿಸಿ ಸೂಕ್ತವಾದ ಸವಾಲಿನ ಸಂಪನ್ಮೂಲಗಳು ಹಾಗೂ ನಿರ್ದೇಶನ ನೀಡುವಂತಹ ಅನೇಕ ವಿಧದ ಯೋಜನೆಗಳನ್ನು ಬಳಸುವುದು.<br>3.3.4. ಕಲಿಕೆಯನ್ನು ಉತ್ತಮಪಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವು ನೀಡಲು ವಿದ್ಯಾರ್ಥಿಗಳ ಸಾಮರ್ಥ್ಯಗಳ ಆಧಾರದಲ್ಲಿ ವಿದ್ಯಾರ್ಥಿ ಗುಂಪುಗಳನ್ನು ಬುದ್ಧಿವಂತಿಕೆಯಿಂದ ರಚಿಸುವುದು. | 3.3.5. ವಿಶೇಷ ಅಗತ್ಯಗಳನ್ನು ಹೊಂದಿರುವ ಮಕ್ಕಳಿಗೆ ವೈಯಕ್ತಿಕ ಶಿಕ್ಷಣ ಯೋಜನೆಗಳನ್ನು (IEPs) ಸೃಷ್ಟಿಸುವುದು.<br>3.3.6 ಅಂಗವೈಕಲ್ಯ ಹಾಗೂ ವಿಶೇಷ ಸಾಮರ್ಥ್ಯದ ವಿದ್ಯಾರ್ಥಿಗಳ ಅಗತ್ಯಗಳಿಗೆ ತರಗತಿಗಳನ್ನು ಹೆಚ್ಚು ಸಿದ್ಧಪಡಿಸಲು ಮಾರ್ಗದರ್ಶಕರು ಬೋಧನಶಾಸ್ತ್ರದ ಯೋಜನೆಗಳ ಮೇಲೆ ಹಚ್ಚಿನ ಒತ್ತು ನೀಡಬೇಕು. |
| **ವಲಯ 4: ಜ್ಞಾನ, ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವುದು ಹಾಗೂ ವಿಷಯದ ಅನ್ವಯ** | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಎಸ್.ಡಿ 4.1- ಜ್ಞಾನ, ಪರಿಕಲ್ಪನೆ ಅರ್ಥಮಾಡಿಕೊಳ್ಳುವುದು ಹಾಗೂ ವಿಷಯದ ಅನ್ವಯ.** | | |
| **ಜ್ಞಾನ ಹಂಚಿಕೆಯಲ್ಲಿ ಸಾಮರ್ಥ್ಯಗಳನ್ನು ಪ್ರದರ್ಶಿಸುವುದು, ಅರ್ಥಮಾಡಿಕೊಳ್ಳುವುದು ಹಾಗೂ ವಿಷಯ ವಲಯದ ಅನ್ವಯ.** | **ಒಳಗಿನ ಹಾಗೂ ಅಂತರ ವಿಷಯ ಸಂಪರ್ಕಗಳನ್ನು ಅನ್ವಯಿಸುವುದು ಹಾಗೂ ಸ್ಥಳೀಯ ಹಾಗೂ ದೇಶೀಯ ಜ್ಞಾನದ ಸಂಯೋಜನೆ.** | **ವಿಷಯ ವಲಯಗಳಲ್ಲಿನ ಅಭಿವೃದ್ಧಿಗಳ ಬಗ್ಗೆ ಈ ತನಕದ ಮಾಹಿತಿ ಹೊಂದಿರುವುದು ಹಾಗೂ ಪಠ್ಯಕ್ರಮದ ವಹಿವಾಟಿನ ಬಗ್ಗೆ ಹೊಸ ಪರಿಕಲ್ಪನೆಗಳನ್ನು ತರುವುದು.** |
| 4.1.1. ವಿಷಯಾಧಾರಿತ ಬೋಧನೆಗೆ ಚಟುವಟಿಕೆಗಳು, ಕಥೆಗಳು, ಪ್ರಯೋಗಗಳು ಇತ್ಯಾದಿ ವೈವಿಧ್ಯಮಯ ತಂತ್ರಗಳನ್ನು ಬಳಸುವುದು.<br>4.1.2. ತರಗತಿಯಲ್ಲಿ ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆ ಅಗತ್ಯಕ್ಕೆ ತಕ್ಕಂತೆ ಸಮರ್ಪಕವಾಗಿ ಹಾಗೂ ವಿವರವಾಗಿ ಉತ್ತರಿಸುವುದು | 4.1.3. ಪ್ರಸಕ್ತ ಹಾಗೂ ಈ ಹಿಂದಿನ ಪಾಠಗಳ ಪರಿಕಲ್ಪನೆಗಳ ನಡುವೆ ಸಂಪರ್ಕ ಕಲ್ಪಿಸುವುದು.<br>4.1.4. ಎಲ್ಲಿ ಅನ್ವಯ ಮಾಡಲು ಸಾಧ್ಯವೋ ಅಲ್ಲಿ ಸ್ಥಾನಿಕ ಜ್ಞಾನವನ್ನು ಇತರ ಶಾಲಾ ವಿಷಯಗಳೊಂದಿಗೆ ಸಂಪರ್ಕಿಸುವುದು. | 4.1.5. ವಿಷಯದ ಪಠ್ಯೇತ್ತರ ನಿರೀಕ್ಷೆಗಳನ್ನು ತಲುಪಲು ಹೊಸ ಬೌಧನಶಾಸ್ತ್ರ ತಂತ್ರಗಳನ್ನು ಅನ್ವೇಷಿಸುವುದು.<br>4.1.6. ಒಬ್ಬರು ನಿರ್ವಹಿಸುವ ವಿಷಯ ಅಥವಾ ಇತರ ವಿಷಯಗಳಿಗೆ ಸಂಬಂಧಿಸಿದ ಸಂಶೋಧನಾ ಲೇಖನಗಳು, ಜರ್ನಲ್ ಗಳು, ಮ್ಯಾಗಜಿನ್ |

| | | |
|---|---|---|
| | | ಗಳು ಅಥವಾ ನಿಯತಕಾಲಿಕಾಗಳನ್ನು ನಿಯಮಿತವಾಗಿ ಪ್ರಸ್ತಾಪಿಸುತ್ತಿರಬೇಕು. |
| ವಲಯ 5: ಪಠ್ಯಕ್ರಮ | | |
| ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| **ಎಸ್.ಡಿ 5.1- ಪಠ್ಯಕ್ರಮದ ಚೌಕಟ್ಟು** | | |
| ವಿಷಯ/ ಅಧ್ಯಯನ ವಿಭಾಗದ ಪಠ್ಯಕ್ರಮ ಹಾಗೂ ಪಠ್ಯಕ್ರಮದ ಚೌಕಟ್ಟಿನಲ್ಲಿ ಗುರಿಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದನ್ನು ಅಭಿವೃದ್ಧಿಪಡಿಸಬೇಕು. | ಅಂತಃ ಹಾಗೂ ಅಂತರ ವಿಷಯ ಪಠ್ಯಕ್ರಮದ ನಡುವೆ ಸಂಪರ್ಕ ಅಭಿವೃದ್ಧಿಪಡಿಸಲು ಹಾಗೂ ಅರ್ಥ ಮಾಡಿಕೊಳ್ಳಲು ಸಹೋದ್ಯೋಗಿಗಳ ಸಹಭಾಗಿತ್ವ ಹೊಂದಬೇಕು. | ಪ್ರಚಲಿತ ಅಭಿವೃದ್ಧಿಗಳು ಹಾಗೂ ಹೊಸ ಜ್ಞಾನವನ್ನು ಪರಿಗಣಿಸಿ ಪಠ್ಯಕ್ರಮದ ನಿರ್ವಹಣೆ ಅಭಿವೃದ್ಧಿ ಹಾಗೂ ಮಾರ್ಪಾಡು ಮಾಡಬೇಕು. |
| 5.1.1. ವಿಷಯ ಬೋಧನೆ ಗುರಿಗಳು ಹಾಗೂ ಪಠ್ಯಕ್ರಮದ ನಿರೀಕ್ಷೆಗಳನ್ನು ಗಮನದಲ್ಲಿರಿಸಿಕೊಂಡು ಪಾಠಗಳನ್ನು ನಿರ್ವಹಿಸಬೇಕು. | 5.1.2. ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಕಲಿಕೆಯನ್ನು ಉತ್ತೇಜಿಸಲು ಪಠ್ಯಕ್ರಮದ ವಿಷಯ ಹಾಗೂ ಇತರ ವಿಷಯಗಳ ನಡುವೆ ಸ್ಪಷ್ಟ ಸಂಪರ್ಕ ಕಲ್ಪಿಸುವ ಮೂಲಕ ಪಾಠ ನಿರ್ವಹಿಸಬೇಕು. | 5.1.3. ವಿಷಯಕ್ಕೆ ಸಂಬಂಧಿಸಿದ ಯೋಜನೆ ಹಾಗೂ ನಿರ್ವಹಣೆಗೆ ಇತ್ತೀಚಿನ ಆಲೋಚನೆಗಳನ್ನು ಸೇರಿಸಿಕೊಳ್ಳಬೇಕು.<br>5.1.4. ಕಾರ್ಯಗಾರಗಳಿಂದ, ಓದು ಅಥವಾ ಇತರ ಯಾವುದೇ ಸಂಪನ್ಮೂಲಗಳಿಂದ ಕಲಿತ ವಿಚಾರಗಳನ್ನು ಯೋಜನೆ ಹಾಗೂ ನಿರ್ವಹಣೆಗೆ ಅನ್ವಯಿಸಬೇಕು. |
| ವಲಯ 6: ವಿದ್ಯಾರ್ಥಿಗಳ ಕಲಿಕೆಗೆ ವಿಷಯ ಅಭಿವೃದ್ಧಿ | | |
| ನುರಿತ ಶಿಕ್ಷಕ | ಉನ್ನತ ಶಿಕ್ಷಣ | ತಜ್ಞ ಶಿಕ್ಷಕ |
| **ಎಸ್.ಡಿ 6.1 - ಸೂಚನಾತ್ಮಕ/ ಬೋಧನಶಾಸ್ತ್ರ ತಂತ್ರಗಳು ಹಾಗೂ ಕಲಿಕಾ ವರ್ಗೀಕರಣಗಳು** | | |
| **ಸಾಮಾನ್ಯ ಬೋಧನೆಯ ತಂತ್ರಗಳನ್ನು ಅರ್ಥಮಾಡಿಕೊಳ್ಳುವುದು, ಬೋಧನೆಯಲ್ಲಿ ಬಳಸುವ ಕಲಿಕಾ ವರ್ಗೀಕರಣಗಳು ಹಾಗೂ ಸಾಮಾನ್ಯ ಬೋಧನಶಾಸ್ತ್ರೀಯ ವಿಧಾನಗಳು ಹಾಗೂ ಸಂಪನ್ಮೂಲಗಳನ್ನು ಬಳಸುವುದು.** | **ಸೂಕ್ತವಾದ ಕಲಿಕಾ ಗುರಿಗಳ/ಫಲಿತಾಂಶಗಳ ಅಭಿವೃದ್ಧಿಗೆ ಸ್ವಂತ ವಿಷಯ/ ಬೋಧನ ವಲಯದಲ್ಲಿ ಸಮರ್ಪಕವಾದ ಕಲಿಕಾ ವರ್ಗೀಕರಣಗಳು ಹಾಗೂ ಬೋಧನಶಾಸ್ತ್ರದ ತಂತ್ರಗಳನ್ನು ಬಳಸಬೇಕು.** | **ಕಲಿಕಾ ಸಿದ್ಧಾಂತಗಳು, ಬೋಧನೆ/ಬೋಧನಶಾಸ್ತ್ರದ ತಂತ್ರಗಳನ್ನು ಆಯ್ಕೆ ಮಾಡಲು ಸಹೋದ್ಯೋಗಿಗಳನ್ನು ಮಾರ್ಗದರ್ಶಕರನ್ನಾಗಿ ಮಾಡಿಕೊಳ್ಳಬೇಕು. ಎಲ್ಲರನ್ನೊಳಗೊಂಡ ಪಾಠದ ಯೋಜನೆಗಳನ್ನು ಸೃಷ್ಟಿಸಲು ಕಲಿಕಾ ಮಾರ್ಗದರ್ಶಿಗಳನ್ನು ಬಳಸುವುದು.** |

| | | |
|---|---|---|
| 6.1.1. ವಿಷಯ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವು ನೀಡಲು ಅವರ ನಡುವೆ ಮುಕ್ತ ಸಂಭಾಷಣೆಯನ್ನು ಉತ್ತೇಜಿಸುವುದು. | 6.1.2. ವಿವಿಧ ವಿಷಯಗಳ ಮೇಲೆ ಅವರ ಅಭಿಪ್ರಾಯಗಳ ಕುರಿತು ಪ್ರಶ್ನಿಸಲು, ಚರ್ಚೆ ಹಾಗೂ ವಾದ ಮಂಡನೆಗೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ. | 6.1.3. ಒಂದೇ ವಯಸ್ಸಿನವರ ಕಲಿಕೆಯನ್ನು ಉತ್ತೇಜಿಸಲು ಬಹುವಿನ್ಯಾಸದ ಹಾಗೂ ವಿನ್ಯಾಸವಿಲ್ಲದ ಸಂವಹನದ ಬಳಕೆಯಲ್ಲಿ ಮಾರ್ಗದರ್ಶಕರು ಸಮತೋಲನ ಕಾಯ್ದುಕೊಳ್ಳಬೇಕು. |
| **ಎಸ್.ಡಿ 6.2 - ವಿಭಿನ್ನ ನಿರ್ದೇಶನ / ಬೋಧನೆ** | | |
| **ಕಲಿಕೆಯಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಪಾತ್ರವನ್ನು ಉತ್ತೇಜಿಸಲು ವಿಭಿನ್ನ ಬೋಧನೆ/ ಕಲಿಕಾ ಸೂತ್ರಗಳನ್ನು ಗ್ರಹಿಸಿ ಹಾಗೂ ಅರ್ಥ ಮಾಡಿಕೊಳ್ಳುವುದು.** | **ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಲು ವಿಭಿನ್ನ ನಿರ್ದೇಶನಗಳ ಅನ್ವಯ** | **ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ವಿಭಿನ್ನ ಚಟುವಟಿಕೆಗಳು ಹಾಗೂ ತಂತ್ರಗಳನ್ನು ಅಭಿವೃದ್ಧಿಪಡಿಸಲು ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುವುದು.** |
| 6.2.1. ಪಠ್ಯಕ್ರಮದ ಉದ್ದೇಶಗಳನ್ನು ಪೂರ್ಣಗೊಳಿಸಲು ಬೋಧನೆ- ಕಲಿಕಾ ವಿಧಾನದ ಸಂಯೋಜನೆ ಬಳಸಿಕೊಳ್ಳಬೇಕು. | 6.2.3. ಗುಂಪಿನೊಳಗೆ ವಿಭಿನ್ನ ಕಲಿಕಾ ಅಗತ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರಶ್ನಿಸುವುದು / ಚಟುವಟಿಕೆಗಳನ್ನು ಬೇರ್ಪಡಿಸಬೇಕು. ಇದರಿಂದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸವಾಲುಗಳನ್ನು ಸಮರ್ಪಕವಾಗಿ ಪರಿಹರಿಸಬಹುದು. | 6.2.5. ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ನಿಯಮಿತವಾಗಿ ವಿಭಿನ್ನ ಸೂಚನಾ ತಂತ್ರಗಳನ್ನು ಸಾಕಷ್ಟು ಅವಕಾಶವಿರುವ ಸ್ಥಳಗಳಲ್ಲಿ ಬಳಸಿಕೊಳ್ಳಬೇಕು. |
| 6.2.1. ಎಲ್ಲ ವಿದ್ಯಾರ್ಥಿಗಳಿಗೆ ಯೋಚನಾಬದ್ಧ ಹಾಗೂ ಸಮರ್ಪಕವಾದ ಪ್ರತಿಕ್ರಿಯೆಗಳನ್ನು ನೀಡಬೇಕು. | 6.2.2. ವಿಭಿನ್ನ ಕಲಿಕಾ ಅಗತ್ಯಗಳನ್ನು ಹೊಂದಿರುವ ಗುಂಪಿನೊಳಗಿನ ವಿದ್ಯಾರ್ಥಿಗಳಿಗೆ ಪ್ರಶ್ನೆಗಳು /ಚಟುವಟಿಕೆಗಳನ್ನು ಬೇರ್ಪಡಿಸಿ. ಇದರಿಂದ ವಿದ್ಯಾರ್ಥಿಗಳ ಸವಾಲುಗಳನ್ನು ಸಮರ್ಪಕವಾಗಿ ಪರಿಹರಿಸಬಹುದು. | 6.2.3. ವಿದ್ಯಾರ್ಥಿಗಳಿಗೆ ಅವರ ಸ್ವಂತ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ವಿಭಿನ್ನ ಸೂಚನಾ ತಂತ್ರಗಳನ್ನು ಸಾಕಷ್ಟು ಸ್ಥಳಾವಕಾಶದಲ್ಲಿ ನಿಯಮಿತವಾಗಿ ಬಳಸಬೇಕು. |
| **ಎಸ್.ಡಿ 6.3 - ತಾರ್ಕಿಕ ಆಲೋಚನೆ, ಸೃಜನಾತ್ಮಕ ಚಿಂತನೆ ಹಾಗೂ ಉನ್ನತ ಮಟ್ಟದ ಚಿಂತನಾ ಕೌಶಲಗಳು ಸೇರಿದಂತೆ ಜೀವನ ಕೌಶಲಗಳನ್ನು ಅಭಿವೃದ್ಧಿಪಡಿಸಲು ತಂತ್ರಗಳು ಹಾಗೂ ಸಾಧನಗಳು.** | | |
| **ತಾರ್ಕಿಕ ಹಾಗೂ ಸೃಜನಾತ್ಮಕ ಚಿಂತನೆ ಅಭಿವೃದ್ಧಿಪಡಿಸಲು ಸಾಮಾನ್ಯ ಬೋಧನಶಾಸ್ತ್ರದ ತಂತ್ರಗಳನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕು, ಹಾಗೂ/ಅಥವಾ ಇತರ ಉನ್ನತ ಮಟ್ಟದ ಯೋಚನಾ ಕೌಶಲಗಳನ್ನು ಅಳವಡಿಸಿಕೊಳ್ಳಬೇಕು.** | **ಇಂಥ ಕೌಶಲಗಳನ್ನು ಅಭಿವೃದ್ಧಿಪಡಿಸಲು ಸಮರ್ಪಕವಾದ ಬೋಧನಶಾಸ್ತ್ರದ ತಂತ್ರಗಳನ್ನು ಬಳಸುವುದು.** | **ಈ ವಲಯದಲ್ಲಿನ ಇತ್ತೀಚಿನ ಅಭಿವೃದ್ಧಿಗಳ ಜ್ಞಾನದ ಆಧಾರದಲ್ಲಿ ನೂತನ ಬೋಧನಶಾಸ್ತ್ರದ ತಂತ್ರಗಳನ್ನುಸೃಷ್ಟಿಸುವುದು.** |

| | | |
|---|---|---|
| 6.3.1. ದಿನನಿತ್ಯದ ಜೀವನದ ಸವಾಲುಗಳಿಗೆ ಕಲಿತ ವಿಷಯಗಳನ್ನು ಅನ್ವಯಿಸಲು ನೆರವು ನೀಡುವ ತರಗತಿ ಚಟುವಟಿಕೆಗಳನ್ನು ಬಳಸಿಕೊಳ್ಳುವುದು.<br>6.3.2. ಸಾಮಾಜಿಕ-ಆರ್ಥಿಕ ಅಗತ್ಯಗಳನ್ನು ಪೂರೈಸಬಲ್ಲ ಕೆಲವು ತರಗತಿ ಚಟುವಟಿಕೆಗಳನ್ನು (ಉದಾಹರಣೆಗೆ ಧ್ಯಾನ, ಸರ್ಕಲ್ ಟೈಮ್ ಇತ್ಯಾದಿ) ಒಳಗೊಂಡಿದೆ. | 6.3.3. ತರಗತಿ ಬೋಧನೆಯ ಒಂದು ಭಾಗವಾಗಿ ಮಕ್ಕಳಿಗೆ ವಿಶ್ಲೇಷಣೆ ಹಾಗೂ ತನಿಖೆಗೆ ನಿಯಮಿತವಾಗಿ ಅವಕಾಶಗಳನ್ನು ನೀಡುವುದು.<br>6.3.4. ದಿನನಿತ್ಯದ ತರಗತಿ ಚಟುವಟಿಕೆಗಳಲ್ಲಿ ಸಾಮಾಜಿಕ ಚರ್ಚೆ, ಸಂವಹನ ಹಾಗೂ ಸಹಯೋಗ ಮುಂತಾದ ಸಾಮಾಜಿಕ-ಭಾವನಾತ್ಮಕ ಕೌಶಲಗಳ ಅಭಿವೃದ್ಧಿಯನ್ನು ಸಕ್ರಿಯವಾಗಿ ಸಂಯೋಜಿಸುತ್ತದೆ. | 6.3.5. ನಿರ್ದಿಷ್ಟ ವಿಷಯ ಅಥವಾ ವಿಷಯಗಳುದ್ದಕ್ಕೂ ತಾರ್ಕಿಕ ಚಿಂತನೆ, ಪರಿಶೋಧನೆ, ಪ್ರಶ್ನೆಗಳು, ಪ್ರತಿಫಲನೆ ಇತ್ಯಾದಿಯನ್ನು ಪ್ರೋತ್ಸಾಹಿಸಲು ಬೋಧನಶಾಸ್ತ್ರದ ಮಾರ್ಗಗಳನ್ನು ಸೃಷ್ಟಿಸುವುದು.<br>6.3.6. ಪ್ರತಿ ವಿದ್ಯಾರ್ಥಿಯ ಸಾಮಾಜಿಕ-ಭಾವನಾತ್ಮಕ ಅಗತ್ಯಗಳನ್ನು ಪೂರೈಸಲು ನಿಯಮಿತ ಪರಿಶೀಲನೆ. |
| ವಲಯ 7: ಕಲಿಕಾ ಯೋಜನೆಗಳು | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಣ** | **ತಜ್ಞ ಶಿಕ್ಷಕ** |
| **ಎಸ್.ಡಿ 7.1 - ಕಲಿಕಾ ಗುರಿಗಳು ಹಾಗೂ ಉದ್ದೇಶಗಳು** | | |
| **ಅಳೆಯಬಹುದಾದ ಹಾಗೂ ಸಾಧಿಸಬಹುದಾದ ಕಲಿಕಾ ಗುರಿ ಹಾಗೂ ಉದ್ದೇಶಗಳನ್ನು ಅರ್ಥ ಮಾಡಿಕೊಳ್ಳುವುದು.** | **ಪಠ್ಯಕ್ರಮದ ವಿನ್ಯಾಸದ ಜೊತೆಗೆ ಹೊಂದಿಕೊಂಡಿರುವ ವಿಷಯವನ್ನು ಅಳೆಯಬಲ್ಲ ಹಾಗೂ ಸಾಧಿಸಬಹುದಾದ ಕಲಿಕಾ ಗುರಿಗಳು ಹಾಗೂ ಉದ್ದೇಶಗಳನ್ನು ಸೃಷ್ಟಿಸುವುದು.** | **ಅತ್ಯಧಿಕ ನಿರೀಕ್ಷೆಗಳನ್ನು ನಿಗದಿಪಡಿಸುವುದು ಹಾಗೂ ಸಾಧಿಸಬಹುದಾದ ಗುರಿಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯದ ಜೊತೆಗೆ ವಿದ್ಯಾರ್ಥಿಗಳ ವಿವಿಧ ಅಗತ್ಯಗಳನ್ನು ಪೂರೈಸುವುದು ಹಾಗೂ ಅವರ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸುವುದು.** |
| 7.1.1. ವಿಶಾಲವಾದ ಉದ್ದೇಶಗಳನ್ನು ತಲೆಯಲ್ಲಿಟ್ಟುಕೊಂಡು ಪಠ್ಯದ ಯೋಜನೆಗಳನ್ನು ರೂಪಿಸುವುದು. ಕಲಿಕಾ ಫಲಿತಾಂಶಗಳ ಮೌಲ್ಯಮಾಪನಕ್ಕೆ ಚಟುವಟಿಕೆಗಳು ಹಾಗೂ ಮೌಲ್ಯಮಾಪನಗಳನ್ನು ಸಮರ್ಪಕವಾಗಿ ರೂಪಿಸುವುದು. | 7.1.2. ವಿಷಯದ ಗುರಿಗಳು ಹಾಗೂ ಉದ್ದೇಶಗಳನ್ನು ಸಾಧಿಸಲು ಕಲಿಕಾ ಫಲಿತಾಂಶ ರೂಪಿಸುವುದು. | 7.1.3. ನಿರ್ದಿಷ್ಟ ಕಲಿಕಾ ಫಲಿತಾಂಶವನ್ನು ವಿವರಿಸುವ ಸಂದರ್ಭದಲ್ಲಿ ಹಾಗೂ ಸ್ಥಳೀಯ ವಿಷಯಕ್ಕೆ ಅನ್ವಯಿಸುವುದು ಅಗತ್ಯವೆನಿಸಿದಾಗ ಪಾಠ ಹಾಗೂ ಯೋಜನೆಗಳನ್ನು ಸಂದರ್ಭೋಚಿತಗೊಳಿಸಬೇಕು. |
| **ಎಸ್.ಡಿ 7.2 - ಕಲಿಕಾ ಅನುಭವಗಳ ಯೋಜನೆ** | | |
| **ನಿರ್ದಿಷ್ಟ ಕಲಿಕಾ ಉದ್ದೇಶಕ್ಕೆ ಒಂದು ಕಲಿಕಾ ಯೋಜನೆಯನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯ.** | **ಪ್ರತಿ ವಿದ್ಯಾರ್ಥಿಯ ಅಗತ್ಯಗಳನ್ನು ಪೂರೈಸಲು ವೈವಿಧ್ಯಮಯ ಕಲಿಕಾ ಯೋಜನೆಗಳನ್ನು ಸೃಷ್ಟಿಸುವುದು.** | **ಪಠ್ಯಕ್ರಮದ ಆಧಾರದಲ್ಲಿ ಅಂತರ-ಸಂಬಂಧ ಕಲಿಕಾ ಯೋಜನೆಗಳ ಒಂದು ಸರದಿಯನ್ನು ಸೃಷ್ಟಿಸುವ ಸಾಮರ್ಥ್ಯ.** |

| | | |
|---|---|---|
| 7.2.3. ವಿಷಯ, ಫಲಿತಾಂಶಗಳು, ಚಟುವಟಿಕೆಗಳು ಹಾಗೂ ಮೌಲ್ಯಮಾಪನ ತಂತ್ರಗಳ ಆಧಾರದಲ್ಲಿ ಸಮಗ್ರ ಪಾಠದ ಯೋಜನೆಗಳನ್ನು ಅಭಿವೃದ್ಧಿಪಡಿಸಬೇಕು. | 7.2.4. ಹೆಚ್ಚುವರಿ ಬೆಂಬಲದ ಅಗತ್ಯವಿರುವ ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಚಟುವಟಿಕೆಗಳು ಹಾಗೂ ಸಂಪನ್ಮೂಲಗಳನ್ನು ರೂಪಿಸಬೇಕು. (ಉದಾಹರಣೆಗೆ ಶ್ರಮಪಡುವ ಓದುಗರಿಗೆ ಸರಳ ಪದಗಳು). | 7.2.5.ಈ ಹಿಂದಿನ ತರಗತಿಗಳಲ್ಲಿ ಹಾಗೂ ವಿಷಯವನ್ನು ಮಕ್ಕಳು ಹೇಗೆ ಕಲಿಯುತ್ತಾರೆ ಎಂಬ ಆಧಾರದಲ್ಲಿ ವಿಷಯಗಳು ಹಾಗೂ ಪಾಠಗಳನ್ನು ಕ್ರಮಬದ್ಧವಾಗಿ ಸಂಯೋಜಿಸುವ ಪಾಠದ ಯೋಜನೆಗಳನ್ನು ರೂಪಿಸುವುದು. |
| **ವಲಯ 8: ಕಲಿಕೆಯ, ಕಲಿಕೆಗೋಸ್ಕರ, ಕಲಿಕೆಯಾಗಿ ಮೌಲ್ಯಮಾಪನ** | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಎಸ್.ಡಿ 8.1- ಮೌಲ್ಯಮಾಪನ ತಂತ್ರಗಳು** | | |
| **ವಿವಿಧ ವಿಧದ ಮೌಲ್ಯಮಾಪನ ತಂತ್ರಗಳು ಹಾಗೂ ಸಾಧನಗಳನ್ನು ಅರ್ಥಮಾಡಿಕೊಳ್ಳುವುದು.** | **ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳ ಆಧಾರದಲ್ಲಿ ಸೂಕ್ತವಾದ ಮೌಲ್ಯಮಾಪನ ತಂತ್ರಗಳನ್ನು ಆಯ್ಕೆ ಮಾಡಬೇಕು.** | **ಮೌಲ್ಯಮಾಪನ ನೀತಿಗಳ ಜ್ಞಾನವನ್ನು ಸಂಸ್ಥೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶಿಸುವುದು.** |
| 8.1.1. ವಿದ್ಯಾರ್ಥಿಗಳ ಮೌಲ್ಯಮಾಪನ ನಡೆಸಲು ನೋಟ್ ಬುಕ್ ಗಳಲ್ಲಿ (ಪಾಠದ ಪ್ರಶ್ನೆಗಳು ಮುಗಿದ ಬಳಿಕ) ತರಗತಿ ವೀಕ್ಷಣೆ, ಪ್ರಶ್ನಿಸುವುದು ಹಾಗೂ ಬರವಣಿಗೆ ಕೆಲಸ ಸೇರಿದಂತೆ ತಂತ್ರಗಳನ್ನು ಬಳಸಬೇಕು.<br>8.1.2. ಬೋಧನೆ- ಕಲಿಕೆ ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿಗಳಿಗೆ ಮುಕ್ತವಾಗಿ ಪ್ರಶ್ನೆಗಳನ್ನು ಕೇಳಲು ಅವಕಾಶ ಕಲ್ಪಿಸಬೇಕು. | 8.1.3. ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳಿಗೆ ಅನುಗುಣವಾಗಿ ಪ್ರಾಜೆಕ್ಟ್ ಗಳು, ವಿಷಯ ಮಂಡನೆಗಳು, ಪೋರ್ಟ್ ಫೋಲಿಯೋಸ್, ಪ್ರಯೋಗಗಳು, ಕ್ವಿಜ್, ಸಮೀಕ್ಷೆಗಳು, ಕೇಸ್ ಸ್ಟಡೀಸ್ ಮುಂತಾದ ವಿಧಾನಗಳನ್ನು ನಿಯಮಿತವಾಗಿ ಬಳಸಬೇಕು.<br>8.1.4. ನೀಡಿರುವ ವಿಷಯದ ಬಗ್ಗೆ ಅವರು ಏನು ತಿಳಿದಿದ್ದಾರೆ ಹಾಗೂ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಪತ್ತೆ ಹಚ್ಚಲುವಿದ್ಯಾರ್ಥಿಗಳ ಜೊತೆಗೆ ಸಂಭಾಷಣೆ ಪ್ರಾರಂಭಿಸಬೇಕು. | 8.1.5. ಸಂಬಂಧಪಟ್ಟ ನೀತಿ ದಾಖಲೆಗಳಲ್ಲಿ ಶಿಫಾರಸ್ಸು ಮಾಡಿರುವಂತೆ ತರಗತಿಗಳಲ್ಲಿ ಅತ್ಯುತ್ತಮ ಮೌಲ್ಯಮಾಪನ ಅಭ್ಯಾಸಗಳನ್ನು ಅನುಷ್ಠಾನಗೊಳಿಸಬೇಕು.<br>8.1.6. ತರಗತಿಯಲ್ಲಿ ಕಲಿಕೆಗಾಗಿ ಹಾಗೂ ಕಲಿಕೆಯಾಗಿ ಮೌಲ್ಯಮಾಪನವನ್ನು ಸಕ್ರಿಯವಾಗಿ ಬಳಸಿಕೊಳ್ಳುವುದು. |
| **ಎಸ್.ಡಿ 8.2 - ಮೌಲ್ಯಮಾಪನ ಅಂಕಿಅಂಶ** | | |
| **ಮೌಲ್ಯಮಾಪನ ಅಂಕಿಅಂಶಗಳಿಂದ ವಿದ್ಯಾರ್ಥಿಗಳ ಬಗ್ಗೆ ಅರಿವು ಬೆಳೆಸಿಕೊಳ್ಳಬೇಕು.** | **ಗುರಿಗಳನ್ನು ನಿಗದಿಪಡಿಸಲು ಹಾಗೂ ಕಲಿಕಾ ಯೋಜನೆಗಳನ್ನು ರೂಪಿಸಲು ಮೌಲ್ಯಮಾಪನ ಅಂಕಿಅಂಶಗಳನ್ನು ಬಳಸಿಕೊಳ್ಳುವುದು.** | **ವಿದ್ಯಾರ್ಥಿ/ ತರಗತಿ ನಿರ್ವಹಣೆ ಬಗ್ಗೆ ಪ್ರಬಲವಾದ ಅಭಿಪ್ರಾಯ ರೂಪಿಸಲು ಅನೇಕ ಮೂಲಗಳಿಂದ ಪಡೆದ ಮಾಹಿತಿಗಳ ಪ್ರಯೋಜನ ಬಳಸಿಕೊಳ್ಳಬೇಕು ಹಾಗೂ ಸೂಕ್ತ ಪರಿಹಾರದ ಮೂಲಕ ಕಲಿಕೆಯನ್ನು ಬೆಂಬಲಿಸಬೇಕು.** |

| | | |
|---|---|---|
| 8.2.1. ತರಗತಿ ಕಲಿಕೆಯಲ್ಲಿ ಸಾಮಾನ್ಯ ವಿಷಯಗಳು ಹಾಗೂ ಪರ್ಯಾಯ ಭಾವನೆಗಳನ್ನು ಗುರುತಿಸಲು ಹಾಗೂ ಸಂಬೋಧಿಸಲು ಮೌಲ್ಯಮಾಪನ ಮಾಹಿತಿ ಬಳಸಿಕೊಳ್ಳುವುದು. | 8.2.2. ವಿದ್ಯಾರ್ಥಿಗಳ ನಿರ್ದಿಷ್ಟ ಕಲಿಕಾ ಅಗತ್ಯಗಳಿಗೆ ಸಮರ್ಪಕವಾಗಿ ಹೊಂದಿಕೊಳ್ಳುವ ಬೋಧನಶಾಸ್ತ್ರ ಹಾಗೂ ಪಾಠದ ಯೋಜನೆಗಳನ್ನು ಮಾರ್ಪಡಿಸಲು ಮೌಲ್ಯಮಾಪನ ಅಂಕಿಅಂಶಗಳನ್ನು ಬಳಸಿಕೊಳ್ಳುವುದು. | 8.2.3. ಬಹುಮಾದರಿ ಮೌಲ್ಯಮಾಪನಗಳನ್ನು ಬಳಸಿಕೊಂಡು ವಿದ್ಯಾರ್ಥಿ ಕಲಿಕೆ ಮೇಲೆ ಸಂಗ್ರಹಿಸಿದ ಮಾಹಿತಿ ಆಧಾರದಲ್ಲಿ ಬೋಧನೆ ಹಾಗೂ ಯೋಜನೆ ನಿರೂಪಣೆಯಲ್ಲಿ ಸುಧಾರಣೆ ಅಗತ್ಯವಿರುವ ವಲಯಗಳನ್ನು ಗುರುತಿಸುವುದು.<br>8.2.4 ಬೋಧನೆ ಹಾಗೂ ಯೋಜನೆಯಲ್ಲಿ ಸುಧಾರಣೆ ಅಗತ್ಯವಿರುವ ವಲಯಗಳನ್ನು ಗುರುತಿಸಿ ಹಾಗೂ ನಿರ್ದಿಷ್ಟ ಮಧ್ಯಸ್ಥಿಕೆಗಳನ್ನು ರೂಪಿಸುವುದು. |
| **ಎಸ್.ಡಿ 8.3- ಸಂವಹನ ಹಾಗೂ ಪ್ರತಿಕ್ರಿಯೆ** | | |
| **ವಿದ್ಯಾರ್ಥಿಗಳು, ಪೋಷಕರು ಹಾಗೂ ಪಾಲಕರ ಜೊತೆಗೆ ವಿದ್ಯಾರ್ಥಿಯ ನಿರ್ವಹಣೆ ಬಗ್ಗೆ ಸಂವಹನ ನಡೆಸುವುದು.** | **ವಿದ್ಯಾರ್ಥಿ, ಪೋಷಕರು ಹಾಗೂ ಪಾಲಕರ ಜೊತೆಗೆ ವಿದ್ಯಾರ್ಥಿಯ ನಿರ್ವಹಣೆ ಬಗ್ಗೆ ನಿರ್ದಿಷ್ಟ ಪ್ರತಿಕ್ರಿಯೆ ಹಂಚಿಕೊಳ್ಳುವುದು.** | **ವಿದ್ಯಾರ್ಥಿ ಕಲಿಕೆಗೆ ಮಾರ್ಗದರ್ಶನ ನೀಡಲು ಪೋಷಕರು ಹಾಗೂ ಸಮುದಾಯದ ಸದಸ್ಯರ ಜೊತೆಗೂಡಿ ಕಾರ್ಯನಿರ್ವಹಿಸಬೇಕು.** |
| 8.3.1. ವಿದ್ಯಾರ್ಥಿಗಳ ಕೆಲಸಗಳನ್ನು ಪರಿಶೀಲಿಸುವಾಗ ಅಥವಾ ಅವರ ಉತ್ತರಗಳಿಗೆ ಸ್ಪಂದಿಸುವಾಗ ನಿರ್ದಿಷ್ಟ ಗುಣಮಟ್ಟದ ಪ್ರತಿಕ್ರಿಯೆ ನೀಡಬೇಕು.<br>8.3.2. ಅಂಕಗಳು ಹಾಗೂ ತರಗತಿಯಲ್ಲಿ ಭಾಗವಹಿಸುವಿಕೆ ಆಧಾರದಲ್ಲಿ ಮಕ್ಕಳ ನಿರ್ವಹಣೆ ಬಗ್ಗೆ ಶಾಲೆ ಆಯೋಜಿಸುವ ಪಿಟಿಎ ಸಭೆಗಳಲ್ಲಿ ಪೋಷಕರು ಹಾಗೂ ಪಾಲಕರ ಜೊತೆಗೆ ಚರ್ಚಿಸಬೇಕು. | 8.3.3. ನಿಯಮಿತ ಸುಧಾರಣೆಗೆ ಅವಕಾಶವಿರುವಂತೆ ಅವರ ಸ್ವ ನಿರ್ವಹಣೆ ಬಗ್ಗೆ ಪ್ರತಿ ವಿದ್ಯಾರ್ಥಿಗೆ ನಿರ್ದಿಷ್ಟ ಸಲಹೆಗಳ ಜೊತೆಗೆ ಸವಿವರವಾದ ಪ್ರತಿಕ್ರಿಯೆಯನ್ನು ನೀಡಬೇಕು.<br>8.3.4. ವಿದ್ಯಾರ್ಥಿ ನಿರ್ವಹಣೆ ಬಗ್ಗೆ ನಿರ್ದಿಷ್ಟ ಹಾಗೂ ಸವಿವರವಾದ ಪ್ರತಿಕ್ರಿಯೆಗಳನ್ನು ಪೋಷಕರು /ಪಾಲಕರ ಜೊತೆಗೆ ಹಂಚಿಕೊಳ್ಳುವುದು. | 8.3.5. ಸ್ವಯಂ ಹಾಗೂ ಸಮಾನಮನಸ್ಕರ ಮೌಲ್ಯಮಾಪನಕ್ಕೆ ಅವಕಾಶ ನೀಡುವ ಮೂಲಕ ತಮ್ಮ ನಿರ್ವಹಣೆ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಸಕ್ರಿಯವಾಗಿ ಪ್ರೋತ್ಸಾಹ ನೀಡಬೇಕು.<br>8.3.6. ಮನೆಯಲ್ಲಿ ಮಕ್ಕಳ ಕಲಿಕೆಯನ್ನು ಬೆಂಬಲಿಸುವುದು ಹೇಗೆ ಎಂಬ ಬಗ್ಗೆ ಪೋಷಕರು/ ಪಾಲಕರಿಗೆ ನಿರ್ದಿಷ್ಟ ಹಾಗೂ ಉತ್ತಮ ಮಾರ್ಗದರ್ಶನ ನೀಡುವುದು. |
| ವಲಯ 9: ಶಿಕ್ಷಣದಲ್ಲಿ ತಂತ್ರಜ್ಞಾನದ ಉಪಯೋಗ ಹಾಗೂ ಸಮನ್ವಯ | | |
| ನುರಿತ ಶಿಕ್ಷಕ | ಉನ್ನತ ಶಿಕ್ಷಕ | ತಜ್ಞ ಶಿಕ್ಷಕ |
| **ಶಿಕ್ಷಣದಲ್ಲಿ ತಂತ್ರಜ್ಞಾನದ ಪಾತ್ರವನ್ನು ಅರ್ಥಮಾಡಿಕೊಳ್ಳುವುದು** | **ಬೋಧನೆ- ಕಲಿಕೆ, ಮೌಲ್ಯಮಾಪನ ಹಾಗೂ ತರಗತಿ ನಿರ್ವಹಣೆಗೆ ಬೆಂಬಲ ನೀಡುವ ಐಸಿಟಿ ಸಾಧನಗಳ ಉಪಯೋಗಗಳು** | **ಸ್ವಯಂ ಹಾಗೂ ಸಹೋದ್ಯೋಗಿಗಳಿಗೆ ಬೋಧನೆ-ಕಲಿಕೆಗೆ ನೆರವು ನೀಡುವ ಸಮರ್ಪಕ ತಾಂತ್ರಿಕ ಸಂಪನ್ಮೂಲಗಳನ್ನು ಸೃಷ್ಟಿಸುವುದು.** |
| 9.1.ನಿರ್ದಿಷ್ಟ ವಿಷಯಗಳ ಬೋಧನೆಯ ಪರಿಣಾಮವನ್ನುಸುಧಾರಿಸುವ ಸಮರ್ಪಕ ಐಸಿಟಿ ಸಂಪನ್ಮೂಲಗಳನ್ನು ಗುರುತಿಸುವುದು. | 9.2. ಬೋಧನ ಅಭ್ಯಾಸಗಳು ಹಾಗೂ ಮೌಲ್ಯಮಾಪನ ಅಭ್ಯಾಸಗಳನ್ನು ಸೃಜನಾತ್ಮಕವಾಗಿ ಮಾರ್ಪಾಡಿಸಲು ಪ್ರಸ್ತುತವಿರುವ ಐಸಿಟಿ | 9.3. ಸ್ವಯಂ ಹಾಗೂ ಸಮಕಾಲೀನರ ಬೋಧನ, ಕಲಿಕಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಸ್ವಂತ ಐಸಿಟಿ ಸಂಪನ್ಮೂಲಗಳನ್ನು ಸೃಷ್ಟಿಸುವುದು. |

| | | |
|---|---|---|
| | ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು. | |
| **ವಲಯ 10: ತರಗತಿ ಅಂಶಗಳು ಹಾಗೂ ಕ್ರಿಯಾತ್ಮಕಗಳು** | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಎಸ್ ಡಿ 10.1- ಸುರಕ್ಷಿತ, ಪೋಷಿಸುವ ಹಾಗೂ ಬೆಂಬಲ ನೀಡುವ ಕಲಿಕಾ ವಾತಾವರಣ** | | |
| **ಒಂದು ಸುರಕ್ಷಿತ ಹಾಗೂ ಎಲ್ಲವನ್ನೊಳಗೊಂಡ ತರಗತಿ ಸೃಷ್ಟಿಸಲು ಸೌಲಭ್ಯಗಳು ಹಾಗೂ ಸಂಪನ್ಮೂಲಗಳನ್ನು ವ್ಯವಸ್ಥಿತಗೊಳಿಸುವುದು.** | **ವಿದ್ಯಾರ್ಥಿಗಳಿಗೆ ಯಾವುದೇ ಭಯವಿಲ್ಲದೆ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹ ನೀಡುವ ಜೊತೆಗೆ ಎಲ್ಲರನ್ನೊಳಗೊಂಡ ಹಾಗೂ ಬೆಂಬಲ ನೀಡುವ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು.** | **ಒಂದು ಸುರಕ್ಷಿತ ಹಾಗೂ ಎಲ್ಲರನ್ನೊಳಗೊಂಡ ತರಗತಿಯನ್ನು ಅಭಿವೃದ್ಧಿಪಡಿಸಲು ವಿದ್ಯಾರ್ಥಿಯನ್ನು ತೊಡಗಿಸಿಕೊಳ್ಳುವುದು.** |
| 10.1.1 ತರಗತಿ ಕಾರ್ಯನಿರ್ವಹಣೆಗೆ ದಿನಚರಿ ಹಾಗೂ ಪ್ರಕ್ರಿಯೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸುವುದು.<br>10.1.2. ವಿದ್ಯಾರ್ಥಿಗಳ ನಡುವೆ ಓಡಾಟ, ಮಾತುಕತೆ ಹಾಗೂ ಸಂವಹನಕ್ಕೆ ಪ್ರೋತ್ಸಾಹ ನೀಡುವ ಮೂಲಕ ಒತ್ತಡಮುಕ್ತ ತರಗತಿ ವಾತಾವರಣ ನಿರ್ಮಾಣವಾಗುವಂತೆ ಮಾಡುವುದು. | 10.1.3. ವಿದ್ಯಾರ್ಥಿ ಸಲಹೆಗಳನ್ನು ಪರಿಗಣಿಸಿ ಹೊಂದಿಕೆಯುಳ್ಳ ತರಗತಿ ದಿನಚರಿಗಳನ್ನು ರೂಪಿಸುವುದು.<br>10.1.4. ವಿದ್ಯಾರ್ಥಿಗಳಿಗೆ ಮುಕ್ತವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಉತ್ತೇಜನ ನೀಡಬೇಕು ಹಾಗೂ ಸಂಬಂಧಪಟ್ಟ ದಿನನಿತ್ಯದ ವಿಷಯಗಳ ಬಗ್ಗೆ ಚರ್ಚೆಗಳನ್ನು ಆಯೋಜಿಸಬೇಕು. (ಉದಾಹರಣೆಗೆ ಉದ್ವೇಗದ ಭಾವನೆಗಳು, ಹಿಂಸೆಯ ವಿಷಯಗಳು, ನಂಬಿಕೆ ನಿರ್ಮಾಣ ಇತ್ಯಾದಿ). | 10.1.5. ವಿದ್ಯಾರ್ಥಿಗಳು ನೇತೃತ್ವ ವಹಿಸಿಕೊಳ್ಳುವ ತರಗತಿ ದಿನಚರಿಗಳನ್ನು ರೂಪಿಸುವುದು.<br>10.1.6. ಸುರಕ್ಷಿತ, ಎಲ್ಲರನ್ನೊಳಗೊಂಡ ಹಾಗೂ ಸ್ಥಳಾವಕಾಶದ ಭಾವನೆಯನ್ನು ಪ್ರತಿಬಿಂಬಿಸುವ ತರಗತಿ ನೀತಿಗಳನ್ನು ರೂಪಿಸುವುದು. |
| **ಎಸ್ ಡಿ 10.2 -ತರಗತಿ ನಿರ್ವಹಣೆ** | | |
| **ತರಗತಿ ನಿರ್ವಹಣೆಯ ಆಯಾಮಗಳ ಜ್ಞಾನವನ್ನು ಪ್ರದರ್ಶಿಸಬೇಕು ಹಾಗೂ ಅವುಗಳನ್ನು ಬಳಸುವ ಸಾಮರ್ಥ್ಯ ತೋರ್ಪಡಿಸಬೇಕು.** | **ವಿದ್ಯಾರ್ಥಿ ವರ್ತನೆಯಲ್ಲಿನ ವೈವಿಧ್ಯತೆಯನ್ನು ಅರ್ಥಮಾಡಿಕೊಳ್ಳಬೇಕು ಹಾಗೂ ಅದಕ್ಕೆ ಅವಕಾಶ ಕಲ್ಪಿಸಬೇಕು.** | **ವಿದ್ಯಾರ್ಥಿಗಳಲ್ಲಿ ಸ್ವಶಿಸ್ತು, ವೈಯಕ್ತಿಕ ಜವಾಬ್ದಾರಿ ಹಾಗೂ  ನಾಯಕತ್ವ ಅಭಿವೃದ್ಧಿಪಡಿಸಬೇಕು.** |
| 10.2.1. ತರಗತಿ ಹಾಗೂ ವಿದ್ಯಾರ್ಥಿವರ್ತನೆಗೆ ಸಂಬಂಧಿಸಿದ ಅವರದ್ದೇ ಆದ ನಿಯಮಗಳು ಹಾಗೂ ನೀತಿಗಳನ್ನು ರೂಪಿಸಬೇಕು. ಅಗತ್ಯವೆನಿಸಿದ ಹಂತಗಳಲ್ಲಿ ವಿದ್ಯಾರ್ಥಿ ವರ್ತನೆಯನ್ನು ಪರಿಶೀಲಿಸಿ ಹಾಗೂ | 10.2.2. ವಿದ್ಯಾರ್ಥಿ ವರ್ತನೆಯನ್ನು ಅವರ ದೃಷ್ಟಿಕೋನದಲ್ಲೇ ವಿಶ್ಲೇಷಿಸಿ ಹಾಗೂ ಸೂಕ್ತವಾಗಿ ಪ್ರಕ್ರಿಯಿಸಬೇಕು. | 10.2.3. ವಿದ್ಯಾರ್ಥಿಗಳ ಕುರಿತ ನಿರೀಕ್ಷೆಗಳನ್ನು ಪ್ರಜಾಸತ್ತಾತ್ಮಕವಾಗಿ ಬೆಳೆಸಬೇಕು ಹಾಗೂ ಇಂಥ ನಿರೀಕ್ಷೆಗಳಿಗೆ ತಮ್ಮಷ್ಟಕ್ಕೆ ಕಾರಣ ಪತ್ತೆಹಚ್ಚಲು ಪ್ರೋತ್ಸಾಹಿಸಬೇಕು. |

| | | |
|---|---|---|
| ಸರಿಪಡಿಸಬೇಕು. | | |
| **ಎಸ್ ಡಿ 10.3 - ಪರಿಣಾಮಕಾರಿ ತರಗತಿ ಸಂವಹನ** | | |
| **ವಿವಿಧ ಮೌಖಿಕ ಹಾಗೂ ಅಮೌಖಿಕ ತರಗತಿ ಸಂವಹನ ತಂತ್ರಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು.** | **ಕಲಿಕೆಯಲ್ಲಿ ಸಹಯೋಗ ತರಲು ವಿವಿಧ ಮೌಖಿಕ ಹಾಗೂ ಅಮೌಖಿಕ ತರಗತಿ ಸಂವಹನ ತಂತ್ರಗಳನ್ನು ಉಪಯೋಗಿಸಿ ಹಾಗೂ ಪ್ರತಿಕ್ರಿಯಿಸಿ.** | **ತರಗತಿ ಸಂವಹನ ಸುಧಾರಣೆಗೆ ಸಹೋದ್ಯೋಗಿಗಳಿಗೆ ಬೆಂಬಲ/ ಮಾರ್ಗದರ್ಶನ ನೀಡಲು ರಚನಾತ್ಮಕ ಪ್ರತಿಕ್ರಿಯೆ ನೀಡಬೇಕು.** |
| 10.3.1. ಕಣ್ಣಿನ ಸಂಪರ್ಕ, ಭಂಗಿಗಳು, ಉತ್ತೇಜನ ಇತ್ಯಾದಿ ಸೂಕ್ತ ಮೌಖಿಕ ಹಾಗೂ ಅಮೌಖಿಕ ಸಂವಹನ ಪ್ರದರ್ಶಿಸಬೇಕು. | 10.3.2. ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ವಿವಿಧ ಸೂಕ್ತವಾದ ಮೌಖಿಕ ಹಾಗೂ ಅಮೌಖಿಕ ಸಂವಹನ ತಂತ್ರಗಳನ್ನು ಬಳಸಬೇಕು.<br>10.3.3. ಬೋಧನೆ ಮಾಡುವಾಗ ಸ್ವಂತ ಸಂವಹನ ತಂತ್ರಗಳಲ್ಲಿ ಸೂಕ್ತ ಹೊಂದಾಣಿಕೆಗಳನ್ನು ಮಾಡುವುದು ಹಾಗೂ ಪ್ರತಿ ವಿದ್ಯಾರ್ಥಿಯ ಅಮೌಖಿಕ ಸಂವಹನವನ್ನು ವ್ಯಾಖ್ಯಾನಿಸುವುದು. | 10.3.4 ಪರಿಣಾಮಕಾರಿ ತರಗತಿ ಸಂವಹನ ತಂತ್ರಗಳನ್ನು ಅನುಷ್ಠಾನಗೊಳಿಸಲು ಸಮಾನಮನಸ್ಕರಿಗೆ ಮಾರ್ಗದರ್ಶನ ನೀಡಿ. |
| **ಎಸ್.ಡಿ 10.4 - ಭಾಷಾ ವೈವಿಧ್ಯತೆ ಹಾಗೂ ಬಹುಭಾಷೆ** | | |
| **ಭಾಷಾ ವೈವಿಧ್ಯತೆ ಹಾಗೂ ಸಂಬಂಧಿಸಿದ ಭಾಷೆಗಳಲ್ಲಿನ ನಿರ್ಗಳತೆ ಹೊರತಾಗಿ ಎಲ್ಲ ಮಕ್ಕಳ ಕಡೆಗೆ ಎಲ್ಲರನ್ನೊಳಗೊಂಡ ಭಾವನೆ ತೋರ್ಪಡಿಸಬೇಕು.** | **ಬೋಧನೆ ಹಾಗೂ ಕಲಿಕೆಯನ್ನು ಪ್ರೋತ್ಸಾಹಿಸಲು ತರಗತಿಯಲ್ಲಿ ಬಹುಭಾಷೆ ಅಳವಡಿಕೆಗೆ ಸಹೋದ್ಯೋಗಿಗಳಿಗೆ ಬೆಂಬಲ ನೀಡಬೇಕು.** | **ಸಮಕಾಲೀನರ ಜೊತೆಗೆ ಕಲಿಕೆ ಹಾಗೂ ಬೋಧನೆ ಪ್ರೋತ್ಸಾಹಿಸಲು ಬಹುಭಾಷೆ ಬಳಕೆಯನ್ನು ಉತ್ತೇಜಿಸಬೇಕು.** |
| 10.4.1. ತರಗತಿಯಲ್ಲಿ ವ್ಯವಹರಿಸುವ ಸಮಯದಲ್ಲಿ ಅಗತ್ಯವಿರುವ ಕಡೆ ಬೋಧನೆಯ ಮಾಧ್ಯಮದ ಜೊತೆಗೆ ಸ್ಥಳೀಯ ಭಾಷೆ ಬಳಸುವುದು. | 10.4.2. ಭಾಷಾ ವೈವಿಧ್ಯತೆ ಹೊಂದಿರುವ ತರಗತಿಯಲ್ಲಿ ಅಳವಡಿಸಿಕೊಳ್ಳಬೇಕಾದ ತಂತ್ರದ ಬಗ್ಗೆ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುವುದು. | 10.4.3. ಗುಂಪು ಚರ್ಚೆಗಳು, ಅಭ್ಯಾಸ, ಲೇಖನಗಳನ್ನು ಬರೆಯುವುದು ಇತ್ಯಾದಿ ಮೂಲಕ ತರಗತಿಯಲ್ಲಿ ಉತ್ತಮ ಕಲಿಕೆಗೆ ಬಹುಭಾಷೀಯ ಬೋಧನೆ ಅಗತ್ಯವನ್ನು ಪ್ರದರ್ಶಿಸುವುದು. |


## ಮಾನದಂಡ 3: ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿ

| ವಲಯ 11: ಕಲಿಕಾ ಅಗತ್ಯಗಳು | | |
|---|---|---|
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಕಲಿಕಾ ಅಗತ್ಯಗಳನ್ನು ಗುರುತಿಸಿ ಹಾಗೂ ಸ್ವಂತ ವೃತ್ತಿಪರ ಅಭಿವೃದ್ಧಿಗೆ ಗುರಿಗಳನ್ನು ನಿಗದಿಪಡಿಸಬೇಕು.** | **ಷೇರುದಾರರಿಂದ ದೊರೆತ ಮಾಹಿತಿಗಳನ್ನು ಆಧರಿಸಿ ವೃತ್ತಿಪರ ಅಭಿವೃದ್ಧಿ ಯೋಜನೆ ರೂಪಿಸಬೇಕು.** | **ಸಹೋದ್ಯೋಗಿಗಳಿಗೆ ವೃತ್ತಿಪರ ಅಭಿವೃದ್ಧಿ ಅವಕಾಶಗಳನ್ನು ಒದಗಿಸಿ ಹಾಗೂ ಯೋಜನೆ ರೂಪಿಸಿ.** |

| | | |
|---|---|---|
| 11.1 ಅಭಿವೃದ್ಧಿಯ ವಿಶಾಲ ವಲಯಗಳನ್ನು ವಿವರಿಸಲು ಯೋಜನೆ ಗುರುತಿಸಿ.<br>11.2. ನಿರ್ದಿಷ್ಟ ಕಲಿಕಾ ಅಗತ್ಯಗಳನ್ನು ಪೂರೈಸಲು ಕಾರ್ಯಾಗಾರಗಳು, ಸಭೆಗಳು, ತರಬೇತಿಗಳು, ಸೆಮಿನಾರ್ ಗಳು, ಸಮ್ಮೇಳನಗಳು ಇತ್ಯಾದಿಯನ್ನು ಪತ್ತೆಹಚ್ಚಿ. | 11.3. ಅಭಿವೃದ್ಧಿಯ ವಲಯಗಳನ್ನು ವಿವರಿಸಲು ಕ್ರಿಯಾ ಸಂಶೋಧನೆ ಅಥವಾ ಇತರ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಿ.<br>11.4. ಲೇಖನಗಳು, ಪುಸ್ತಕದಲ್ಲಿನ ಅಧ್ಯಾಯಗಳು, ಪುಸ್ತಕಗಳು, ಸಹೋದ್ಯೋಗಿಗಳು ವಿಶ್ಲೇಷಿಸಿರುವ ಪ್ರಕಟಣೆಗಳಿಗೆ ಬರೆಯಿರಿ ಅಥವಾ ಕೊಡುಗೆ ನೀಡಿ. | 11.5. ಸಹೋದ್ಯೋಗಿ ಶಿಕ್ಷಕರಿಗೆ ಅವರ ಕಲಿಕಾ ಅಗತ್ಯಗಳನ್ನು ಗುರುತಿಸಲು ಹಾಗೂ ಈ ಅಗತ್ಯಗಳ ಪೂರೈಕೆಗೆ ಸೂಕ್ತ ಸಾಧನಗಳನ್ನು ರೂಪಿಸಿ.<br>11.6. ಮ್ಯಾಗಜಿನ್ ಇತ್ಯಾದಿಗೆ ಲೇಖನಗಳನ್ನು ಬರೆಯಲು ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡಿ ಹಾಗೂ ಕ್ರಿಯಾ ಸಂಶೋಧನೆ ಕೈಗೊಳ್ಳಿ. |
| **ವಲಯ 12: ಆತ್ಮಾವಲೋಕನ ಅಭ್ಯಾಸ** | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಆತ್ಮಾವಲೋಕನದ ಅಭ್ಯಾಸದ ಅರಿವು ಹೊಂದಿರುವುದನ್ನು ಪ್ರದರ್ಶಿಸುವುದು.** | **ಸ್ವಂತ ಬೋಧನಾ ಶೈಲಿಯಲ್ಲಿ ಮಾರ್ಪಾಡು ತರಲು ಆತ್ಮಾವಲೋಕನದ ಅಭ್ಯಾಸಗಳನ್ನು ಬಳಸಿಕೊಳ್ಳುವುದು** | **ಆತ್ಮಾವಲೋಕನದ ಅಭ್ಯಾಸಗಳ ಅಳವಡಿಕೆಗೆ ಸಹೋದ್ಯೋಗಿಗಳಿಗೆ ಬೆಂಬಲ/ಮಾರ್ಗದರ್ಶನ ನೀಡುವುದು.** |
| 12.1 ಸ್ವಂತ ಅಭ್ಯಾಸದ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಚರ್ಚಿಸಿ.<br>12.2. ಪ್ರತಿ ವಿದ್ಯಾರ್ಥಿಯ ಪ್ರಾಬಲ್ಯಗಳು ಹಾಗೂ ದೌರ್ಬಲ್ಯಗಳನ್ನು ಚರ್ಚಿಸಿ. | 12.3. ವಿದ್ಯಾರ್ಥಿ ಕಲಿಕಾ ಅಗತ್ಯಗಳ ಮೇಲೆ ಬೆಳಕು ಚೆಲ್ಲಲು ಪಾಠ ಯೋಜನೆಗಳು ಹಾಗೂ ತರಗತಿ ತಂತ್ರಗಳ ಮೇಲೆ ದಾಖಲೆಗಳನ್ನು ಪ್ರತಿಬಿಂಬಿಸುವುದು.<br>12.4. ತರಗತಿಯಲ್ಲಿ ಉತ್ತಮ ಬೋಧನೆ-ಕಲಿಕೆ ಅಭ್ಯಾಸಗಳನ್ನು ಬದಲಾಯಿಸಲು ಬಹು ಆಯಾಮಗಳನ್ನು ನೀಡುವುದು. | 12.5. ಆತ್ಮಾವಲೋಕನದ ಅಭ್ಯಾಸದಲ್ಲಿ ಸಹೋದ್ಯೋಗಿಗಳಿಗೆ ಮಾರ್ಗದರ್ಶನ ನೀಡುವುದು.<br>12.6. ಕಲಿಕೆಗೆ ನೆರವು ನೀಡಲು ಸಹೋದ್ಯೋಗಿಗಳ ನೆರವಿನ ಗುಂಪು ರಚಿಸಲು ಕ್ರಮ ಕೈಗೊಳ್ಳುವುದು. |
| **ವಲಯ 13: ಕಲಿಕಾ ಸಮುದಾಯದಲ್ಲಿ ತೊಡಗಿಕೊಳ್ಳುವಿಕೆ ಹಾಗೂ ಭಾಗವಹಿಸುವಿಕೆ** | | |
| **ನುರಿತ ಶಿಕ್ಷಕ** | **ಉನ್ನತ ಶಿಕ್ಷಕ** | **ತಜ್ಞ ಶಿಕ್ಷಕ** |
| **ಶಾಲೆಯ ಒಳಗೆ ಹಾಗೂ ಹೊರಗೆ ಕಲಿಕಾ ಅವಕಾಶಗಳಲ್ಲಿ ಭಾಗವಹಿಸಬೇಕು.** | **ಸಮ್ಮೇಳನಗಳು, ಸೆಮಿನಾರ್ ಗಳು ಅಥವಾ ವೆಬಿನಾರ್ ಗಳಲ್ಲಿಅವರ ಸಂಶೋಧನೆ ಹಾಗೂ ಕಲಿಕೆಯನ್ನು ಪ್ರಸ್ತುತಪಡಿಸಬೇಕು.** | **ಶಾಲೆಯೊಳಗೆ ಕಲಿಕಾ ಸಮುದಾಯ ಪ್ರಾರಂಭಿಸಿ ಹಾಗೂ ವೃತ್ತಿಪರ ಅಭಿವೃದ್ಧಿ ಸೆಷನ್ಸ್ ಆಯೋಜಿಸುವುದು.** |

| | | |
|---|---|---|
| 13.1. ಶಾಲೆಯೊಳಗೆ ಹಾಗೂ ಹೊರಗೆ ಕಲಿಕಾ ಅವಕಾಶಗಳನ್ನು ಹಂಚಿಕೊಳ್ಳಲು ವಿವಿಧ ಸಂಪನ್ಮೂಲಗಳನ್ನು ಬಳಸಿಕೊಳ್ಳಿ/ವಿವಿಧ ಪ್ಲಾಟ್ ಫಾರ್ಮ್ ಗಳಲ್ಲಿ ಪಾಲ್ಗೊಳ್ಳುವುದು.<br><br>13.2. ಪಾಲುದಾರ ಅಥವಾ ವೀಕ್ಷಕನ ಸಾಮರ್ಥ್ಯಕ್ಕೆ ಸಂಬಂಧಿಸಿದ ವೃತ್ತಿಪರ ಕಲಿಕೆ ಹಾಗೂ ತನಿಖೆಯನ್ನು ಉತ್ತೇಜಿಸುವಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. | 13.3. ರಾಜ್ಯ ಮಟ್ಟದ ಸಮ್ಮೇಳನಗಳು / ಸೆಮಿನಾರ್ ಗಳಲ್ಲಿ ನಿರಂತರವಾಗಿ ಸ್ವಂತ ಕಲಿಕೆ, ತರಗತಿ ಅನುಭವಗಳು ಇತ್ಯಾದಿಯನ್ನು ನಿಯಮಿತವಾಗಿ ಪ್ರಸ್ತುತಪಡಿಸುವುದು.<br><br>13.4. ಸ್ವಂತ ಕಲಿಕೆಗಳು, ತರಗತಿ ಅನುಭವಗಳನ್ನು ನಿರಂತರವಾಗಿ ರಾಷ್ಟ್ರ ಮಟ್ಟದ ಸಮ್ಮೇಳನಗಳು/ ಸೆಮಿನಾರ್ ಗಳಲ್ಲಿ ಪ್ರಸ್ತುತಪಡಿಸಬೇಕು. | 13.5. ಸಹೋದ್ಯೋಗಿಗಳ ಕಲಿಕೆಯನ್ನು ಉತ್ತೇಜಿಸಲು ಜಂಟಿಯಾಗಿ ಕಾರ್ಯಾಗಾರಗಳು, ಸಭೆಗಳು, ತರಬೇತಿಗಳು, ಸೆಮಿನಾರ್ ಗಳು, ಸಮ್ಮೇಳನಗಳನ್ನು ಆಯೋಜಿಸುವುದು.<br><br>13.6. ಸಮೀಪದ ಶಾಲೆಗಳಲ್ಲಿ ಶಿಕ್ಷಕರ ಕಲಿಕಾ ಸಮುದಾಯವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದು. |

# 7. ಎನ್.ಪಿ.ಎಸ್.ಟಿ.ಯಲ್ಲಿ ಎನ್.ಸಿ.ಟಿ.ಕ್ಯು. ಡಿಜಿಟಲ್



## ಎನ್.ಪಿ.ಎಸ್.ಟಿ.ಯಲ್ಲಿ ಕೆಲಸಕ್ಕೆ ಪ್ರಾಧ್ಯಾನತೆ ನೀಡುವ ಸಲಹಾತ್ಮಕ ಅಂಶಗಳು

- **ಎನ್.ಪಿ.ಎಸ್.ಟಿ ಪೋರ್ಟಲ್ ಸೃಷ್ಟಿ**


ಶಿಕ್ಷಕರ ಸಂಪುಟ, ಕಲಿಕಾ ಸಂಪುಟ, ರುಜುವಾತು ಪತ್ರ ನಿರ್ವಹಣೆ, ಎನ್.ಪಿ.ಎಸ್.ಟಿ ಮೌಲ್ಯಮಾಪನ (ಸ್ವಯಂ ಹಾಗೂ ಮಾರ್ಗದರ್ಶನದ), ಅನುಷ್ಠಾನಕ್ಕೆ ಎನ್.ಪಿ.ಎಸ್.ಟಿ ಡಿಜಿಟಲ್ ಯೋಜನೆ, ಸಂಸ್ಥೆ ಹಾಗೂ ಕಾರ್ಯಕ್ರಮ ನಿರ್ವಹಣೆ, ದೀಕ್ಷಾ/ನಿಷ್ಠ ಮೂಲಕ ಸ್ವಯಂ ಕಲಿಕೆ ಸೇವೆ, ಕಲಿಕೆ/ತರಬೇತಿ/ಸಿಪಿಡಿ ಸಾಕ್ಷ್ಯಕ್ಕೆ ಸಂಪುಟ, ಪ್ರತಿ ವಲಯ ಹಾಗೂ ಮಾನದಂಡದಲ್ಲಿ ಶಿಕ್ಷಕರ ಅರ್ಥಮಾಡಿಕೊಳ್ಳುವ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳಲು ಶಿಕ್ಷಕರಿಗೆ ಇ-ಪೋರ್ಟ್ ಪೋಲಿಯೋ ಸೃಷ್ಟಿ. ವಿವಿಧ ಸಾಮರ್ಥ್ಯಗಳಲ್ಲಿ ಅವರ ಅಂಕಗಳು ಹಾಗೂ ನಿರ್ವಹಣೆಯನ್ನು ಉಳಿಸಿಕೊಳ್ಳಲು ಶಿಕ್ಷಕರಿಗೆ ಕಾರ್ಯತಂತ್ರ, ಸ್ವಯಂ ಮೌಲ್ಯಮಾಪನ ಸಾಧನಗಳು, ಶಿಕ್ಷಕರದಾಖಲೆಯ ಡೇಟಾಬೇಸ್ ಅಭಿವೃದ್ಧಿ.

- **ಎನ್.ಪಿ.ಎಸ್.ಟಿ ಅನುಷ್ಠಾನ ಹಾಗೂ ಸಾಫ್ಟ್ ವೇರ್ ನಿರ್ವಹಣೆ**
    - ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಎನ್ ಪಿಎಸ್ ಟಿ ಅನುಷ್ಠಾನಕ್ಕೆ ನಿರಂತರ ನಿರ್ವಹಣೆ ವ್ಯವಸ್ಥೆ.
    - ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿಗೆ ಟ್ರ್ಯಾಕರ್.
    - ಶಿಕ್ಷಕರ ನಿರ್ವಹಣೆಗೆ ಡಿಜಿಟಲ್ ಪ್ಲಾಟ್ಫಾರ್ಮ್.
    - ನಿರಂತರ ವೃತ್ತಿ ಅಭಿವೃದ್ಧಿಗೆ ಸ್ವಯಂ ವೇಗದ ಕೋರ್ಸ್ ಗಳು
    - ವೆಬ್ ಹಾಗೂ ಆಪ್ ಆಧಾರಿತ ಕಲಿಕಾ ಪರಿಹಾರಗಳು.
    - ರಾಷ್ಟ್ರೀಯ ಸಂಪುಟದ ಸೃಷ್ಟಿ
    - ಸೇವೆಯಲ್ಲಿರುವ ಶಿಕ್ಷಕರು
    - ಸೇವಾಪೂರ್ವ ಶಿಕ್ಷಕರು
    - ಕಲಿಕೆ ಸಾಕ್ಷ್ಯಗಳನ್ನು ಟ್ರ್ಯಾಕ್ ಮಾಡುವುದು
- ವಿಷಯ ನಿರ್ವಹಣೆ ಹಾಗೂ ಡೇಟಾ ಹಂಚಿಕೆ
- ಡಿಜಿಟಲ್ ನಿರ್ವಹಣೆ ಹಾಗೂ ಸಂಪರ್ಕ:
    - ನಿಗದಿತ ಗುಂಪು/ಮಧ್ಯಸ್ಥಗಾರರ ಜೊತೆಗೆ ತಕ್ಷಣ ಸಂವಹನ ನಡೆಸಲು ಡಿಜಿಟಲ್ ಕಾನ್ಫರೆನ್ಸಿಂಗ್ ಪ್ಲಾಟ್ ಫಾರ್ಮ್.

**ಚಿತ್ರ 6. ಎನ್.ಪಿ.ಎಸ್.ಟಿ.ಯಲ್ಲಿ ಎನ್.ಸಿ.ಟಿ.ಕ್ಯು ಡಿಜಿಟಲ್ ಅಭಿವೃದ್ಧಿ ಪ್ಲ್ಯಾನ್ ಕುರಿತು ಚಿತ್ರಣ**




ಚಿತ್ರ 7. ಡಿಜಿಟಲ್ ಯೋಜನೆ ಬಗ್ಗೆ ಚಿತ್ರಣ




ಚಿತ್ರ 8. ಪ್ರಯೋಗಾತ್ಮಕ ಅಧ್ಯಯನ ಅನುಷ್ಠಾನದ ಚಿತ್ರ.

# ಸಚಿತ್ರಗಳ ಪಟ್ಟಿ


| ಕ್ರ.ಸಂ. | ಚಿತ್ರ | ಪುಟ |
|---|---|---|
| 1. | ಶಿಕ್ಷಕರ ಸಿದ್ಧತೆ ಮೇಲೆ ಚಿತ್ರ ವಿವರಣೆ | 8 |
| 2. | ವೃತ್ತಿಪರ ಮಾನದಂಡಗಳು ಹಾಗೂ ಸಾಮರ್ಥ್ಯದ ಕುರಿತು ಚಿತ್ರ ವಿವರಣೆ | 13 |
| 3. | ಪ್ರಮುಖ ಮೌಲ್ಯಗಳು ಹಾಗೂ ನೈತಿಕತೆ  ಚಿತ್ರ ವಿವರಣೆ | 15 |
| 4. | ಜ್ಞಾನ ಹಾಗೂ ಅಭ್ಯಾಸದ ಚಿತ್ರ ವಿವರಣೆ | 16 |
| 5. | ವೃತ್ತಿಪರ ಬೆಳವಣಿಗೆ ಹಾಗೂ ಅಭಿವೃದ್ಧಿ ಚಿತ್ರ ವಿವರಣೆ | 16 |
| 6. | ಎನ್.ಪಿ.ಎಸ್.ಟಿ ಮೇಲೆ ಎನ್.ಸಿ.ಟಿ.ಕ್ಯು ಡಿಜಿಟಲ್ ಅಭಿವೃದ್ಧಿ ಯೋಜನೆ ಚಿತ್ರ ವಿವರಣೆ | 43 |
| 7. | ಡಿಜಿಟಲ್ ಯೋಜನೆ ಕುರಿತು ಚಿತ್ರ ವಿವರಣೆ | 44 |
| 8. | ಪ್ರಾಯೋಗಿಕ ಅಧ್ಯಯನ ಅನುಷ್ಠಾನದ ಕುರಿತು ಚಿತ್ರ ವಿವರಣೆ | 44 |

# ಸಂಕ್ಷೇಪಣಗಳು

| | |
|---|---|
| ACR - Annual Confidential Report | ವಾರ್ಷಿಕ ಗೌಪ್ಯ ವರದಿ |
| APR - Annual Performance Appraisal | ವಾರ್ಷಿಕ ಕಾರ್ಯಕ್ಷಮತೆಯ ಮೌಲ್ಯಮಾಪನ |
| CPD - Continuous Professional Development | ನಿರಂತರ ವೃತ್ತಿಪರ ಅಭಿವೃದ್ಧಿ |
| DIET - District Institute of Education & Training | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ |
| DPEP - District Primary Education Project | ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ |
| FLN - Foundational Literacy and Numeracy | ಮೂಲಭೂತ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ |
| GoI - Government of India | ಭಾರತ ಸರ್ಕಾರ |
| ICT - Information and Communication Technology | ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ |
| INSET -Inservice Education and Training | ಸೇವಾನಿರ ಶಿಕ್ಷಣ ಮತ್ತು ತರಬೇತಿ |
| JNVS- Jawahar Navodaya Vidyalaya Samiti | ಜವಾಹರ ನವೋದಯ ವಿದ್ಯಾಲಯ ಸಮಿತಿ |
| KVS -Kendriya Vidyalaya Sangathan | ಕೇಂದ್ರೀಯ ವಿದ್ಯಾಲಯ ಸಂಘಟನೆ |
| MoE -Ministry of Education | ಶಿಕ್ಷಣ ಸಚಿವಾಲಯ |
| NCTE -National Council for Teacher Education | ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ |
| NCERT -National Council of Educational Research & Training | ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ |
| NCFTE -National Curriculum Framework for Teacher Education | ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು |
| NCTQ -National Centre for Teacher Quality | ಶಿಕ್ಷಕರ ಗುಣಮಟ್ಟಕ್ಕಾಗಿ ರಾಷ್ಟ್ರೀಯ ಕೇಂದ್ರ |
| NEP 2020 -National Education Policy 2020 | ರಾಷ್ಟ್ರೀಯ ಶಿಕ್ಷಣ ನೀತಿ 2020 |
| NIEPA -National Institute for Educational Planning and Administration | ಶೈಕ್ಷಣಿಕ ಯೋಜನೆ ಮತ್ತು ಆಡಳಿತಕ್ಕಾಗಿ ರಾಷ್ಟ್ರೀಯ ಸಂಸ್ಥೆ |
| NPST -National Professional Standards for Teachers | ಶಿಕ್ಷಕರಿಗೆ ರಾಷ್ಟ್ರೀಯ ವೃತ್ತಿಪರ ಮಾನದಂಡಗಳು |
| NMM -National Mission for Mentoring | ಮಾರ್ಗದರ್ಶನಕ್ಕಾಗಿ ರಾಷ್ಟ್ರೀಯ ಮಿಷನ್ |
| PI -Performance Indicator | ಕಾರ್ಯಕ್ಷಮತೆ ಸೂಚಕ |
| PSTE -Pre-service Teacher Education | ಸೇವಾ ಪೂರ್ವ ಶಿಕ್ಷಕರ ಶಿಕ್ಷಣ |
| RIE -Regional Institute of Education | ಪ್ರಾದೇಶಿಕ ಶಿಕ್ಷಣ ಸಂಸ್ಥೆ |
| RPL -Recognition of Prior Learning | ಪೂರ್ವ ಕಲಿಕೆಯ ಗುರುತಿಸುವಿಕೆ |
| RTE -Right to Education | ಶಿಕ್ಷಣದ ಹಕ್ಕು |

| | |
|---|---|
| SCERT -State Council of Educational Research & Training | ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ |
| SSA -Sarva Shiksha Abhiyan | ಸರ್ವ ಶಿಕ್ಷಣ ಅಭಿಯಾನ |
| TEI -Teacher Education Institution | ಶಿಕ್ಷಕರ ಶಿಕ್ಷಣ ಸಂಸ್ಥೆ |
| TEP -Teacher Education Programme | ಶಿಕ್ಷಕರ ಶಿಕ್ಷಣ ಕಾರ್ಯಕ್ರಮ |
| TET Teacher Eligibility Test | ಶಿಕ್ಷಕರ ಅರ್ಹತಾ ಪರೀಕ್ಷೆ |

# ಗ್ರಂಥ ಸೂಚಿ


- Australian Institute for Teaching and School Leadership. (2018). Australian ProfessionalStandardsfor Teachers.

  https: /www.aitsl.edu.au/docs/default-source/national-policy-framework/australian- professional-standards-for-teachers.pdf

- Department of Education. (2021). Teachers' Standards: Guidance for School Leaders,SchoolStaffand GoverningBodies.

  https://assets.publishing.service.gov.uk/government/uploads/system/uploads/attachme nt_data/file/1040274/Teachers_Standards_Dec_2021.pdf

- Education International and UNESCO. (2019). Global Framework of Professional TeachingStandards.

  https://issuu.com/educationinternational/docs/2019_ei-unesco_framework

- Government of India (2020a). National Education Policy 2020.
  https://www.education.gov.in/sites/upload_files/mhrd/files/NEP_Final_English_0.pdf
- Government of India. (2022b). The constitution of India.

  https: /cdnbbsr.s3waas.gov.in/s380537a945c7aaa788ccfcdf1b99b5d8f/uploads/2023/05/2023050195.pdf

- National Commission on Teachers. (1986). The Teacher and Society: Report of theNational CommissiononTeachers-I.

- National Council for Teacher Education. (2009). National Curriculum Framework forTeacherEducation. NewDelhi:NCTE.

- National Council of Educational Research and Training. (2005). National CurriculumFramework2005. NCERT.

- National Council of Educational Research and Training. (2019). Teacher's Self-Assessment. https://ncert.nic.in/pdf/announcement/TSAR.pdf

- National Qualifications Authority. (2021). Teacher Standards for the UAE.
  https://tls.moe.gov.ae/Downloads/SNSC%20standards%20teachers%20English.pdf
- The Right to Free and Compulsory Education Act. (2009). (Gazette Extraordinary),MinistryofLawand Justice,GovernmentofIndia,NewDelhi.

  https: /righttoeducation.in/sites/default/files/Right%20of%20Children%20to%20Free

  %20and%20Compulsory%20Education%20Act%202009%20(English).pdf

- Verma, J.S. (2013). Report of the Committee on Amendments to Criminal Law, 2013. NewDelhi.

  https://adrindia.org/sites/default/files/Justice_Verma_Amendmenttocriminallaw_Jan2013.pdf

ಕೃತಿಸ್ವಾಮ್ಯ

ಈ ದಾಖಲೆ ಮತ್ತು ವಿವರಿಸಲಾದ ಎಲ್ಲಾ ಪ್ರಕ್ರಿಯೆಗಳು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿಯ ಬೌದ್ಧಿಕ ಆಸ್ತಿಯಾಗಿವೆ ಮತ್ತು ಇದು ಕೃತಿಸ್ವಾಮ್ಯದ ರಕ್ಷಣೆಗೆ ಒಳಪಟ್ಟಿದೆ.

ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.

Language consultancy and translation facilitated by

**National Translation Mission**

**Central Institute of Indian Languages, Mysore**

**ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ**

(ಭಾರತ ಸರ್ಕಾರದ ಶಾಸನಬದ್ಧ ಸಂಸ್ಥೆ)

**National Council for Teacher Education**

**(A Statutory Body of the Government of India)**